ಬಾ ಮತ್ತು ಬಾಪು 150ನೇ ಜನ್ಮ ವರ್ಷಾಚರಣೆ ಪುಸ್ತಕ ಮಾಲಿಕೆ

ಪಂಚಾಯತ್ ರಾಜ್ಯ

ಮೋ. ಕ. ಗಾಂಧಿ

ಕನ್ನಡಾನುವಾದ : ಕೆ. ಎಸ್. ನಾರಾಯಣಸ್ವಾಮಿ



ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಬೆಂಗಳೂರು

ಬಾ–ಬಾಪು



ವರ್ಷಾಚರಣೆ

ಪಂಚಾಯತ್ ರಾಜ್ಯ

ಮೋಹನದಾಸ ಕರಮಚಂದ ಗಾಂಧಿ

ಕನ್ನಡಾನುವಾದ

ಕೆ. ಎಸ್. ನಾರಾಯಣಸ್ವಾಮಿ

ಪ್ರಕಾಶಕರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು – 560001, ದೂರವಾಣಿ : 080–22261967

ಇಮೇಲ್ : gandhibhavanabengaluru@gmail.com

ಪಂಚಾಯತ್ ರಾಜ್ಯ
ಲೇಖಕರು : ಮೋಹನದಾಸ ಕರಮಚಂದ ಗಾಂಧಿ
ಕನ್ನಡಾನುವಾದ : ಕೆ.ಎಸ್. ನಾರಾಯಣಸ್ವಾಮಿ
ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967


ಪುಟಗಳು : XIV + 65
ಬೆಲೆ : ರೂ. 74/–
ಪ್ರತಿಗಳು : 1000
ಮೊದಲ ಮುದ್ರಣ : 1988
ಗಾಂಧಿ ಶಾಂತಿ ಪ್ರತಿಷ್ಠಾನ
(ನವಜೀವನ ಟ್ರಸ್ಟ್ ಅವರ
ಅನುಮತಿಯಿಂದ)
ಪರಿಷ್ಕೃತ ದ್ವಿತೀಯ ಮುದ್ರಣ : 2021

ಒಳ ಪುಟ ಕಾಗದ : 58 ಜಿ.ಎಸ್.ಎಂ. ಮ್ಯಾಪ್‌ಲಿತೋ
ಮುಖ ಪುಟ : 300 ಜಿ.ಎಸ್.ಎಂ. ಆರ್ಟ್ ಕಾರ್ಡ್
ಸಹಕಾರ : ರಾಷ್ಟ್ರೀಯ ಸೇವಾ ಯೋಜನೆ
ವಿನ್ಯಾಸ & ಮುದ್ರಣ : ಕ್ರಿಯೇಟಿವ್‌ಗೀಕ್ಸ್
ಯಾದವ ಕಾಲೇಜು ರಸ್ತೆ
ಮಾಧವನಗರ, ಬೆಂಗಳೂರು–560001
ದೂರವಾಣಿ : 080 40927049



ಅರ್ಪಣೆ

ಮಹಾತ್ಮ ಗಾಂಧೀಜಿ ಅವರ ಅನುಯಾಯಿ ಹಾಗೂ
ದೇಶದ ಸುಸಂಸ್ಕೃತ ರಾಜಕೀಯ ಮುತ್ಸದ್ದಿ
ಶ್ರೀ ಎಂ.ವಿ. ರಾಜಶೇಖರನ್ ಅವರಿಗೆ
ಗೌರವಪೂರ್ವಕವಾಗಿ



“ಜೀವನವೆಂಬುದೊಂದು ಆಕಾಂಕ್ಷೆ, ಸಿದ್ಧಿ ಮತ್ತು ಆತ್ಮಸಾಕ್ಷಾತ್ಕಾರಗಳಿಗಾಗಿ ಹೆಣಗುವುದೇ ಅದರ ಧ್ಯೇಯವಾಗಿದೆ. ನಮ್ಮ ಲೋಪದೋಷಗಳ ಮೂಲಕ ನಾವು ಆ ಉಚ್ಚಧ್ಯೇಯವನ್ನು ಕೆಳಗಿಳಿಸಕೂಡದು. ಅಂಥ ನನ್ನ ಲೋಪದೋಷಗಳ ಪೂರ್ಣ ಅರಿವು ನನಗೆ ಇದೆ. ಅವುಗಳನ್ನು ಹೋಗಲಾಡಿಸಲು ನಾನು ಸತ್ಯ ದೇವತೆಯನ್ನು ಮೂಕ ಪ್ರಾರ್ಥನೆಯಿಂದ ಆರಾಧಿಸುತ್ತಿರುವೆ.”

– ಮಹಾತ್ಮ ಗಾಂಧಿ

ನಿವೇದನೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಬಾ ಮತ್ತು ಬಾಪು ಅವರ ವರ್ಷಾಚರಣೆ ಹಾಗೂ ಸ್ವಾತಂತ್ರ್ಯೋತ್ಸವ-75ನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಅದರಂತೆ "ಪಂಚಾಯತ್ ರಾಜ್" ಕೃತಿಯನ್ನು ಪ್ರಕಟಿಸಲು ನನಗೆ ಅತ್ಯಂತ ಸಂತೋಷವಾಗುತ್ತದೆ.

ಭಾರತದ ಸ್ವಾತಂತ್ರ್ಯವಾದ ನಂತರ ಸಂವಿಧಾನದ 73ನೇ ತಿದ್ದುಪಡಿಯನುಸಾರ, ಭಾರತದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಲು ಕ್ರಮ ವಹಿಸಿತು. ಅದರಂತೆ ಕರ್ನಾಟಕ ಸರ್ಕಾರವು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲು ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ಸೃಜಿಸಿ 25 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವುದು ಹೆಮ್ಮೆಯ ವಿಚಾರವಾಗಿದೆ.

ಗ್ರಾಮೀಣಾಭಿವೃದ್ಧಿ ಮುಖಾಂತರ ಹಳ್ಳಿಗಳ ಪುನರುಜ್ಜೀವನದ ಕಡೆಗೆ ಸರ್ಕಾರ ಸಾಗಬೇಕೆಂಬುದೇ ಮಹಾತ್ಮಾಜೀ ಅವರ ಆಶಯವಾಗಿತ್ತು. ಅವರ ಈ ಆಶಯದ "ಪಂಚಾಯತ್ ರಾಜ್ಯ" ವ್ಯವಸ್ಥೆಯನ್ನು ಅವರೇ ಪ್ರಕಟಿಸುತ್ತಿದ್ದ, ಪತ್ರಿಕೆಯಾದ 'ಹರಿಜನ', 'ಯಂಗ್ ಇಂಡಿಯಾ' ಹಾಗೂ 'ಗ್ರಾಮೋದ್ಯೋಗ ಪತ್ರಿಕೆ ಮತ್ತು ದೆಹಲಿ ದಿನಚರಿಗಳ ಮುಖಾಂತರ ಸಾರ್ವಜನಿಕರ ಚರ್ಚೆಗೆ ಮತ್ತು ಗಮನಕ್ಕೆ ಪ್ರಕಟಿಸಿದರು. 1926 ರಿಂದ ಹಾಗೇ ಪ್ರಕಟವಾದ ಲೇಖನಗಳನ್ನು, ಗಾಂಧಿ ಶಾಂತಿ ಪ್ರತಿಷ್ಠಾನ, ಬೆಂಗಳೂರು ಕೇಂದ್ರ ಹಾಗು ಗಾಂಧಿ ಸ್ಮಾರಕ ನಿಧಿಯ ಹಿಂದಿನ ಕಾರ್ಯದರ್ಶಿಗಳಾಗಿದ್ದ ಶ್ರೀ ಕೆ.ಎಸ್. ನಾರಾಯಣಸ್ವಾಮಿ ಅವರು ಅಹಮದಬಾದ್‌ನ ನವಜೀವನ ಟ್ರಸ್ಟ್‌ನಿಂದ ಅನುಮತಿ ಪಡೆದು ಕನ್ನಡಕ್ಕೆ ಅನುವಾದಿಸಿದರು. ಮತ್ತು

ಪುಸ್ತಕರೂಪದಲ್ಲಿ "ಪಂಚಾಯತ್ ರಾಜ್ಯ" ಎಂದು 1988ರಲ್ಲಿ ಪ್ರಕಟಿಸಿದರು. ಈ ಕೃತಿಯ ಮಹತ್ವ ಹಿಂದೆಂದಿಗಿಂತಲೂ, ಇಂದಿಗೆ ಅತಿ ಅಗತ್ಯವಾದುದರಿಂದ ಗಾಂಧೀಜಿ ಅವರ ಕನಸಿನ ಪಂಚಾಯತ್ ರಾಜ್ಯದ ಸ್ವರೂಪವನ್ನು, ಜನರಲ್ಲಿ ಒಡಮೂಡಿಸಲು ಈ ಕೃತಿಯ ಪರಿಷ್ಕೃತ ಮರುಮುದ್ರಣವನ್ನು ಸ್ವಾತಂತ್ರ್ಯೋತ್ಸವ-75ರ ವರ್ಷಾಚರಣೆಯ ಸಂದರ್ಭದಲ್ಲಿ ಮಾಡಲಾಗುತ್ತಿದೆ. ಗಾಂಧಿ ಅವರು 1909ರಲ್ಲಿ ದಕ್ಷಿಣ ಆಫ್ರಿಕಾದಲ್ಲಿದ್ದಾಗ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ 'ಹಿಂದ್ ಸ್ವರಾಜ್' ಲೇಖನವನ್ನು ಹಂತಹಂತವಾಗಿ ಪ್ರಕಟಿಸಿದರು. ಅವರ 'ಕನಸಿನ ಭಾರತ' ಸ್ವರಾಜ್ಯವಾಗುವುದನ್ನು ಸಂಪಾದಕ ಮತ್ತು ಓದುಗನ ನಡುವಿನ ಸಂಭಾಷಣೆಯ ರೂಪದಲ್ಲಿ ಆ ಲೇಖನದಲ್ಲಿ ಚರ್ಚಿಸಿದ್ದರು. ಹಾಗೆ ಭಾರತ ಸ್ವಾತಂತ್ರ್ಯವಾದಲ್ಲಿ ಸ್ವರಾಜ್ಯದ ಆಡಳಿತ ವ್ಯವಸ್ಥೆಯನ್ನು ಹೇಗೆ ರೂಪಿಸಿಕೊಳ್ಳಬೇಕೆಂಬ ಚಿತ್ರಣವನ್ನು 'ಪಂಚಾಯತ್ ರಾಜ್ಯ' ಕೃತಿಯಲ್ಲಿ ಹೇಳಲಾಗಿರುವುದನ್ನು ಗಮನಿಸಬಹುದಾಗಿದೆ. ದೇಶದ ಕಟ್ಟಕಡೆಯ ಗ್ರಾಮೀಣ ಜನತೆಯ ಬದುಕು ಹಸನಾದಲ್ಲಿ ಮಾತ್ರ ದೇಶ ಸುಭಿಕ್ಷವಾಗಿರುತ್ತದೆ ಎಂಬ ತತ್ವವನ್ನು ಗಾಂಧೀಜಿ ಅವರ ಮಾತಿನಲ್ಲೇ ಈ ಕೃತಿ ಅನಾವರಣಗೊಳಿಸಿದೆ. ಅಂದಿನ ವರ್ತಮಾನದ ಜನತೆ, ಗಾಂಧಿ ಅವರ ಪತ್ರಿಕೆಗಳಲ್ಲಿನ ಈ ಲೇಖನಗಳನ್ನು ಓದಿ ಪ್ರತಿಕ್ರಿಯಿಸಿದ ಅನೇಕ ವಿಚಾರಗಳು ಇಲ್ಲಿ ದಾಖಲಾಗಿವೆ. ಅವುಗಳು ಇಂದಿನ ಓದುಗರು ಈಗಿನ ವ್ಯವಸ್ಥೆಯ ಬಗ್ಗೆ ಚಿಂತನೆಗೆ ಹಚ್ಚಲಿ ಎಂದು ಆಶಿಸುತ್ತೇನೆ.

ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಸಿದ್ಧಗೊಳಿಸಿದ ಗಾಂಧಿ ಭವನದ ಗೌ. ಕಾರ್ಯದರ್ಶಿ, ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ. ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡಕ್ಕೆ ಆತ್ಮೀಯ ನಮನಗಳು.

ನಾಡೋಜ ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು ಅವರ ವರ್ಷಾಚರಣೆ ಹಾಗೂ ಸ್ವಾತಂತ್ರ್ಯೋತ್ಸವ–75 ವರ್ಷಾಚರಣೆಯ ಸುಸಂದರ್ಭದಲ್ಲಿ, "ಪಂಚಾಯತ್ ರಾಜ್" ಕೃತಿಯನ್ನು ಲೋಕಾರ್ಪಣೆ ಮಾಡಲು ಹರ್ಷವೆನಿಸುತ್ತದೆ. ಈ ಕೃತಿಯಲ್ಲಿ ಮಹಾತ್ಮಾಜೀ ಅವರು ಭಾರತಕ್ಕೆ ಸ್ವರಾಜ್ಯ ಬಂದಾಗ, ದೇಶದ ಆಡಳಿತ ವ್ಯವಸ್ಥೆ, ಗ್ರಾಮದಿಂದ ಆರಂಭವಾಗಬೇಕೆಂಬ ಆಶಯದೊಂದಿಗೆ, ಬರೆದ ದೂರದರ್ಶಿತ್ವವುಳ್ಳ ಕಿರು ಲೇಖನಗಳಾಗಿವೆ. ಇವು 1921 ರಿಂದ 1948ರವರೆಗೆ ಅವರೇ ನಡೆಸುತ್ತಿದ್ದ ಹರಿಜನ, ಯಂಗ್ ಇಂಡಿಯಾ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾಗಿದೆ. ಇದನ್ನು ಅಹಮದಾಬಾದ್‌ನ ನವಜೀವನ ಟ್ರಸ್ಟ್‌ನವರು ಮೊದಲು ಪ್ರಕಟಿಸಿದ್ದರು. ಅಂದಿನ ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಗಾಂಧಿ ಭವನದ ಕಾರ್ಯದರ್ಶಿಗಳಾಗಿದ್ದ ಶ್ರೀ ಕೆ.ಎಸ್. ನಾರಾಯಣಸ್ವಾಮಿ ಅವರು ಈ ಪ್ರಕಟಣೆಯನ್ನು ಗಮನಿಸಿ ಅದನ್ನು ಕನ್ನಡಕ್ಕೆ ಅನುವಾದ ಮಾಡಿ ಪ್ರಕಟಿಸಿದ್ದರು. ಅದನ್ನು ಮರುಮುದ್ರಣ ಮಾಡಿ ನಿಮ್ಮ ಕೈಯಲ್ಲಿಡುತ್ತಿದ್ದೇವೆ. ಈ ಕೃತಿಯನ್ನು ಗಾಂಧಿ ಭವನದಿಂದ ಪರಿಷ್ಕೃತಗೊಳಿಸಿ ಮರುಮುದ್ರಣಗೊಳಿಸಲು ಅನುಮೋದನೆಗೆ ಕೊಟ್ಟಿರುವ ಬೆಂಗಳೂರಿನ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ಕೃತಜ್ಞತೆಗಳು ಸಲ್ಲುತ್ತವೆ.


ಕರ್ನಾಟಕದಲ್ಲಿ ಆಡಳಿತ ವಿದೇಂದ್ರಿಕರಣದ ಪ್ರಕ್ರಿಯೆಗಳು 1959ರಲ್ಲಿಯೇ ಆರಂಭವಾಗಿದ್ದು, ಮೈಸೂರು ವಿಲೇಜ್ ಪಂಚಾಯತ್ ಅಂಡ್ ಡಿಸ್ಟ್ರಿಕ್ ಬೋರ್ಡ್ಸ್ ಆಕ್ಟ್–1959ರನ್ವಯ ವಿಲೇಜ್ ಪಂಚಾಯತ್, ತಾಲ್ಲೂಕು ಬೋರ್ಡ್ಸ್‌ಗಳನ್ನು ರಚನೆ ಮಾಡಲಾಗಿತ್ತು. ಅಂದಿನ ಬಲವಂತರಾಯ್ ಸಮಿತಿ ವರದಿಯ ನಂತರ, 1978ರಲ್ಲಿ ಅಶೋಕ್ ಮೆಹ್ತಾ ಸಮಿತಿ ರಚಿಸಲಾಗಿತ್ತು. ಈ

ಸಮಿತಿಯ ವರದಿ ಆಧರಿಸಿ, 1987ರಲ್ಲಿ ಜಿಲ್ಲಾ ಪರಿಷತ್ತು, ತಾಲ್ಲೂಕ ಪಂಚಾಯಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿ ವ್ಯವಸ್ಥೆ ಮಾಡಲಾಗಿತ್ತು. ತದನಂತರ ಭಾರತದ ಸಂವಿಧಾನದ 73ನೇ ತಿದ್ದುಪಡಿಯನ್ವಯ 1995ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಮತ್ತು 3 ಹಂತದ ಪಂಚಾಯ್ ರಾಜ್ ವ್ಯವಸ್ಥೆ ಜಾರಿಗೆ ಬಂದಿದೆ. ಇಂಥಹ ಪಂಚಾಯತ್ ರಾಜ್ಯ ವ್ಯವಸ್ಥೆಯ ಪರಿಕಲ್ಪನೆಯನ್ನು ಸ್ವಾತಂತ್ರ್ಯ ಪೂರ್ವದಲ್ಲಿಯೇ ಮಹಾತ್ಮಾಜೀ ಅವರು ಆಶಿಸಿ, ಅದರ ಕುರಿತಾಗಿ ತಮ್ಮ ಪತ್ರಿಕೆಯಲ್ಲಿಯೇ ಲೇಖನಗಳನ್ನು ಪ್ರಕಟಿಸಿದ್ದರು. ಆದ್ದರಿಂದಲೇ ಸ್ವಂತಂತ್ರ ಭಾರತದಲ್ಲಿ ಗ್ರಾಮ ಗಣರಾಜ್ಯ ಅಸ್ತಿತ್ವವೇ ಸ್ವರಾಜ್ಯಕ್ಕೆ ಭದ್ರ ಬುನಾದಿ ಎಂದು ಗಾಂಧಿ ಅವರು ತಿಳಿದಿದ್ದರು. ಗಾಂಧಿ ಅವರ ಗ್ರಾಮರಾಜ್ಯದ ಕನಸನ್ನು ಕರ್ನಾಟಕದಲ್ಲಿ ಪ್ರಥಮವಾಗಿ ಪ್ರಾಮಾಣಿಕವಾಗಿ ಜಾರಿಗೆ ತರಲಾಗಿದ್ದು, ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಷಯವಾಗಿದೆ. ಅಂದು ಗ್ರಾಮೀಣಾಬಿವೃದ್ಧಿ ಸಚಿವರಾಗಿದ್ದ ಶ್ರೀ ಅಬ್ದುಲ್ ನಜೀರ್ ಸಾಬ್ ಅವರ ಆಶಯದ ಕೂಸಾಗಿ ಈ ರಾಜ್ಯದಲ್ಲಿ ಜಾರಿಗೆ ಬಂದಿದ್ದನ್ನು ಸ್ಮರಿಸಬಹುದು. ಗಾಂಧಿ ಅವರು ಪ್ರತಿಪಾದಿಸಿದ "ಗ್ರಾಮೀಣಾಭಿವೃದ್ಧಿಯಲ್ಲಿ, ಜನತೆಯ ನೇರ ಸಹಭಾಗಿತ್ವ ಮತ್ತು ಸ್ಥಳೀಯ ಅಗತ್ಯಗಳಿಗೆ ಸ್ಪಂದಿಸಿ, ಆಡಳಿತ ನಿರ್ವಹಣೆ" ಇವು ಇಂದಿಗೂ ಗ್ರಾಮೀಣಾಭಿವೃದ್ಧಿಯ ಮೂಲತತ್ವವಾಗಿವೆ. ಇಂಥಹ ಗಾಂಧಿ ಪರಿಕಲ್ಪನೆಯ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ನಾನೂ ಸಹ ಸುಮಾರು 15 ವರ್ಷ ಸೇವೆ ಸಲ್ಲಿಸಿದ್ದು ನನಗೆ ಜೀವನದಲ್ಲಿ ದೊರೆಕಿದ ಸಾರ್ಥಕ ಸದಾವಕಾಶ ಎಂದೇ ಭಾವಿಸಿದ್ದೇನೆ.

ಈ ಕೃತಿಯನ್ನು ಮರುಮುದ್ರಣಗೊಳಿಸಿ ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂತಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧಿ

ಭವನದ ಅಧ್ಯಕ್ಷರಾಗಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯ ಪರಿಷ್ಕರಣೆ ಮತ್ತು ಕರಡು ತಿದ್ದುಪಡಿಗೆ ಸಹಕರಿಸಿದ ಶ್ರೀ ಇಂದ್ರಕುಮಾರ್ ಅವರಿಗೂ ಹಾಗೂ ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ



ಖಾದಿಯು ಬಹು ದೊಡ್ಡ ಧ್ಯೇಯ ಸಾಧಿಸುತ್ತದೆ. ವರ್ಷದಲ್ಲಿ ಕನಿಷ್ಠ ನಾಲ್ಕು ತಿಂಗಳು ನಿರುದ್ಯೋಗಿಯಾಗಿರುವ ಲಕ್ಷಾಂತರ ಜನರಿಗೆ ಅದು ಕೆಲಸ ಒದಗಿಸುತ್ತದೆ; ನೂಲುವುದರಿಂದ ದೊರೆಯುವ ಉತ್ಪನ್ನವನ್ನು ಬಿಟ್ಟರೂ ಆ ಕೆಲಸವೇ ಅವರಿಗೆ ಪ್ರತಿಫಲವಾಗಿ ಪರಿಣಮಿಸುತ್ತವೆ. ಯಾಕೆಂದರೆ, ಲಕ್ಷಾಂತರ ಜನ ನಿರುದ್ಯೋಗಿಯಾಗಿಬಿಟ್ಟರೆ ಅವರು ಆಧ್ಯಾತ್ಮಿಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಸಾಯುತ್ತಾರೆ. ಚರಕವು ಅಸಂಖ್ಯ ಬಡ ಸ್ತ್ರೀಯರ ಗೌರವವನ್ನು ಉಳಿಸುತ್ತದೆ, ಹೆಚ್ಚಿಸುತ್ತದೆ. ಆದ್ದರಿಂದ ಗಿರಣಿ ಬಟ್ಟೆಯನ್ನು ಪುಕ್ಕಟೆಯಾಗಿ ಕೊಟ್ಟರೂ ಜನರು ತಮ್ಮ ಒಳಿತಿಗಾಗಿ ಅದನ್ನು ಸ್ವೀಕರಿಸಬಾರದು. ಅವರ ಪರಿಶ್ರಮದ ಫಲವಾದ ಖಾದಿಯಿಂದಲೇ ಅವರ ಕ್ಷೇಮ.

- ಮಹಾತ್ಮ ಗಾಂಧಿ


ಪ್ರಥಮ ಮುದ್ರಣದಲ್ಲಿದ್ದಂತೆ ಮುನ್ನುಡಿ

1959ರಲ್ಲಿ ನವಜೀವನ ಟ್ರಸ್ಟಿನವರು ಪ್ರಕಟಿಸಿದ ಕಿರುಹೊತ್ತಿಗೆ 'ಪಂಚಾಯತ್ ರಾಜ್' ಮಹಾತ್ಮ ಗಾಂಧಿ ಅವರ ಆಯ್ದ ಲೇಖನಗಳ ಸಂಗ್ರಹ. ಸುಪ್ರಸಿದ್ಧ ಗಾಂಧೀ ತತ್ವಜ್ಞ ದಿ. ಆರ್. ಕೆ. ಪ್ರಭು ಇಂಗ್ಲೀಷಿನಲ್ಲಿ ಈ ಉಪಯುಕ್ತ ಕ್ರಮಬದ್ಧ ಸಂಕಲನ ಮಾಡಿದ್ದಾರೆ. ಗಾಂಧೀಜಿಯ ನಲವತ್ತು ವರ್ಷಗಳಿಗೂ ಮೀರಿದ ಚಿಂತನ ಮತ್ತು ಪ್ರಯೋಗಗಳ ಸಾರ ಇದರಲ್ಲಿದೆ. ಈ ಸಣ್ಣ ಹೊತ್ತಿಗೆ ಈಗ ಕನ್ನಡದಲ್ಲಿ ಪ್ರಕಟವಾಗುತ್ತಿದೆ.

ದೇಶದಲ್ಲಿ ಪ್ರಜಾರಾಜ್ಯ ಬೇರೂರಿ ನಮ್ಮ ಗ್ರಾಮೀಣ ಜನಕೋಟಿ ಅದರಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಪೂರ್ಣ ಸ್ವರಾಜ್ಯ ಸಾಧಿಸಲು ಗಾಂಧೀಜಿ ಹಾಕಿಕೊಟ್ಟ ರಚನಾತ್ಮಕ ಕ್ರಾಂತಿಪಥವೇ 'ಪಂಚಾಯತ್ ರಾಜ್ಯ'. ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ರಾಷ್ಟ್ರವನ್ನು ಮಾನವೀಯ ಮೌಲ್ಯಗಳ ತಳಹದಿಯ ಮೇಲೆ ಪುನರ್ರಚಿಸಲು ಸ್ವಸಂಪೂರ್ಣ ಸ್ವಾವಲಂಬೀ ಗ್ರಾಮಸಮುದಾಯಗಳ ರಚನೆಯೊಂದೇ ರಾಜಮಾರ್ಗ. ಎರವಲು ಸಿದ್ಧಾಂತಗಳ ಕುರುಡು ಅನುಕರಣೆಯಿಂದ ಸಾಧ್ಯವಿಲ್ಲ. ನಮ್ಮ ಬಾಳು-ಬದುಕು ನೆಮ್ಮದಿಯ ಶಾಂತಿಯುತ ನೆಲೆಯಾಗಲು ಗಾಂಧೀ ಮಾರ್ಗ ಒಂದು ದಾರಿದೀಪ. ಇಂದಿಗೂ ಅದು ಸುಸಂಗತ. ಆಚಾರ್ಯ ವಿನೋಬ ಮತ್ತು ಲೋಕನಾಯಕ ಜಯಪ್ರಕಾಶ್ ನಾರಾಯಣ್ ಈ ದಾರಿಯ ಹೊಸ ಆಯಾಮಗಳನ್ನು ದರ್ಶನಮಾಡಿಸಿದ್ದಾರೆ. ಇದೀಗ ಕರ್ನಾಟಕದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಕಾನೂನು, ಸಹಸ್ರಾರು ಗ್ರಾಮಗಳಲ್ಲಿ ಹೊಸ ಹುರುಪು ತಂದಿದೆ. ಗ್ರಾಮೋದಯವಾಗದೆ ಬಡತನವಾಗಲಿ, ದಾಸ್ಯವಾಗಲಿ, ಶೋಷಣೆಯಾಗಲಿ ಹೋಗದು ಎಂಬ ಅರಿವುಂಟಾಗುತ್ತಿದೆ. ಈ ಚಿಕ್ಕ ಪುಸ್ತಕ ನಮಗೆ ಮಾರ್ಗದರ್ಶಕವಾಗಲಿ.

ಕೆ. ಎಸ್. ನಾರಾಯಣಸ್ವಾಮಿ

ಗಾಂಧಿ ಭವನ, ಬೆಂಗಳೂರು



ಸ್ವರ್ಣಮಯ ಹೃದಯವಂತಿಕೆ, ತನ್ನ ದೇಶಕ್ಕಾಗಿ ಸಂವೇದನೆ, ಅದಕ್ಕಾಗಿ ಶಿಕ್ಷಣ ಪಡೆಯಲು ಮತ್ತು ಮುನ್ನಡೆಸಲ್ಪಡಲು ಆಕಾಂಕ್ಷೆ - ಇವುಗಳಿಂದ ಕೂಡಿರುವ ಜನಕೋಟಿಯ ತರಬೇತಿಯನ್ನು ನಾವು ಕೈಗೊಳ್ಳಬೇಕಾಗಿದೆ. ಇದಕ್ಕಾಗಿ ಕೆಲವು ಜಾಣರೂ, ಪ್ರಾಮಾಣಿಕರೂ ಆದ ಕಾರ್ಯಕರ್ತರ ಅಗತ್ಯವಿದೆ. ಈ ಕಾರ್ಯ ಕೈಗೊಂಡಾಗ ಇಡೀ ರಾಷ್ಟ್ರವೇ ಜಾಣತನದಿಂದ ವರ್ತಿಸುವಂತೆ ಸಂಘಟಿಸಬಹುದು. ಆಗ ಜನಜಂಗುಳಿಯ ಅರಾಜಕ ಸ್ಥಿತಿಯಿಂದ ಸುವ್ಯವಸ್ಥಿತ ಪ್ರಜಾಪ್ರಭುತ್ವ (ಸ್ವರಾಜ್ಯ)ದೆಡೆಗೆ ನಾವು ವಿಕಾಸಗೊಳ್ಳಬಹುದು.

– ಮಹಾತ್ಮ ಗಾಂಧಿ

ಪರಿವಿಡಿ

ಆದರ್ಶ ಸ್ಥಿತಿ

ಈಗ ಹೇಗೆ ತಮ್ಮ ಆಹಾರ ಧಾನ್ಯಗಳನ್ನು ಪ್ರತಿ ಹಳ್ಳಿಯೂ ತಾನೇ ಬೆಳೆದುಕೊಳ್ಳುತ್ತದೆಯೋ ಹಾಗೆಯೇ ಚರಕದಿಂದ ನೂತು ಮಗ್ಗದಲ್ಲಿ ನೇದುಕೊಳ್ಳುವುದೇ ಆದರ್ಶ ಸ್ಥಿತಿ. ಖಾದಿ ಒದಗಿಸಿಕೊಳ್ಳುವುದು ಆಹಾರ ಧಾನ್ಯಗಳನ್ನು ಸಾಕಷ್ಟು ಬೆಳೆದುಕೊಳ್ಳುವುದಕ್ಕಿಂತ ಸುಲಭದ ಕೆಲಸ. ಹತ್ತಿಯನ್ನು ಶೇಖರಿಸಿಟ್ಟುಕೊಂಡು ನೂಲನ್ನು ಮಾಡಿ ನೇಯುವುದು ಅಷ್ಟೇನೂ ಕಷ್ಟವಲ್ಲ.

(ಯಂಗ್ ಇಂಡಿಯಾ, 11–07–1921)

ಚರ್ಮ ಹದಮಾಡುವ ಕೈಗಾರಿಕೆ

ಚರ್ಮ ಹದಮಾಡುವುದು ಭಾರತದ ಅತ್ಯಂತ ಪ್ರಾಚೀನ ಗ್ರಾಮ ಕಸುಬು. ಅದು ಯಾವಾಗ ಒಂದು ಕೀಳುವೃತ್ತಿ ಎಂದೆನಿಸಿಕೊಂಡಿತೋ ಗೊತ್ತಿಲ್ಲ. ಅತ್ಯಂತ ಪ್ರಾಚೀನ ಸಮಾಜದಲ್ಲಿ ಅದು ಹಾಗೆ ಇರಲಾರದು. ಆದರೆ ಇಂದು ಈ ಉಪಯುಕ್ತ ಅಗತ್ಯ ಕೈಗಾರಿಕೆಯಲ್ಲಿ ತೊಡಗಿರುವ ಲಕ್ಷಾಂತರ ದೇಶಬಾಂಧವರನ್ನು ಅನುವಂಶೀಯ ಅಸ್ಪೃಶ್ಯತೆಯ ಶಾಪಕ್ಕೆ ಗುರಿ ಮಾಡಿದೆ. ದುಡಿಮೆಗೆ ಗೌರವ ತಪ್ಪಿ ಅದನ್ನು ತುಚ್ಛೀಕರಿಸಿದ ಆ ದುರ್ದಿನ ಈ ದುರ್ಭಾಗ್ಯ ದೇಶಕ್ಕೆ ಶಾಪವಾಯಿತು. ಈ ಭೂತಾಯಿಯ ಪ್ರಾಣವಾದ ಕೋಟ್ಯಾಂತರ ದುಡಿಮೆಗಾರರ ಪರಿಶ್ರಮದಿಂದಲೇ ಜೀವಧಾರಣೆ ಮಾಡುತ್ತಿದ್ದರೂ ಆ ವರ್ಗವನ್ನೇ ಕೀಳೆಂದು ಕಡೆಗಣಿಸಿ ಒಂದು ಸಣ್ಣ

ಆರಾಮಶಾಹೀ ಮೇಲ್ವರ್ಗ ಎಲ್ಲ ಸೌಲಭ್ಯಗಳ ಸ್ವಾಮ್ಯ ಪಡೆಯಿತು. ಅದರ ಪರಿಣಾಮವಾಗಿಯೇ ಭಾರತ ನೈತಿಕವಾಗಿಯೂ ಆರ್ಥಿಕವಾಗಿಯೂ ಅವನತಿ ಹೊಂದಿತು. ಯಾವ ನಷ್ಟ ದೊಡ್ಡದು ಎಂದು ಹೇಳುವುದು ಕಷ್ಟ. ಆದರೆ ನಮ್ಮ ರೈತರನ್ನೂ ಕುಶಲ ಕೆಲಸಗಾರರನ್ನೂ ಅಸಡ್ಡೆಯಿಂದ ಕಂಡು ನಾವು ದರಿದ್ರರಾದೆವು. ದಡ್ಡರಾದೆವು, ಸೋಮಾರಿತನ ಅಂಟಿಕೊಂಡಿತು. ಆಹ್ಲಾದಕರ ಹವ, ಉನ್ನತ ಪರ್ವತಶ್ರೇಣಿ, ಮಹಾನದಿಗಳು ಮತ್ತು ವಿಸ್ತಾರವಾದ ಸಮುದ್ರ ತೀರಗಳಿಂದ ಭಾರತದ ನೈಸರ್ಗಿಕ ಸಂಪತ್ಸಮೃದ್ಧಿ ಮೇರೆಯಿಲ್ಲದುದು. ತನ್ನ ಲಕ್ಷಾಂತರ ಹಳ್ಳಿಗಳಲ್ಲಿ ಇವುಗಳ ಪೂರ್ಣ ಬಳಕೆ ಮಾಡಿಕೊಂಡಿದ್ದರೆ ಬಡತನವಾಗಲಿ ರೋಗರುಜಿನಗಳಾಗಲಿ ಇರುತ್ತಲೇ ಇರಲಿಲ್ಲ. ಶರೀರಶ್ರಮವನ್ನೂ ಬುದ್ಧಿಶಕ್ತಿಯನ್ನೂ ನಾವು ವಿಚ್ಛೇದಿಸಿ ನಮ್ಮ ಆಯುಷ್ಯವೇ ಕಡಮೆಯಾಯಿತು. ನಮ್ಮ ಅಭಿಕ್ರಮಶಕ್ತಿ ನಷ್ಟವಾಗಿ ಪ್ರಪಂಚದಲ್ಲೇ ಅತ್ಯಂತ ಶೋಷಿತ ದೇಶವಾದೆವು. ನನ್ನ ಈ ದೋಷಾರೋಪಣೆಗೆ ಅತ್ಯಂತ ಉತ್ತಮ ಉದಾಹರಣೆ ಹಳ್ಳಿಯ ಚರ್ಮ ಹದಮಾಡುವ ಉದ್ಯಮದ ದುಃಸ್ಥಿತಿ.

ಒಂದು ಅಂದಾಜಿನ ಪ್ರಕಾರ ಭಾರತದಿಂದ ಒಂಭತ್ತು ಕೋಟಿ ರೂಪಾಯಿನ ಕಚ್ಚಾ ಚರ್ಮ ರಫ್ತಾಗಿ ಹೋಗುತ್ತಿದೆ. ಅಷ್ಟೇ ಪ್ರಮಾಣದ ಉತ್ಪಾದಿತ ಬಳಕೆ ವಸ್ತುಗಳು ಹೊರಗಿನಿಂದ ಬರುತ್ತಿವೆ. ಇದು ಕೇವಲ ವಸ್ತುಗಳ ನಷ್ಟವಷ್ಟೇ ಅಲ್ಲ, ಬುದ್ಧಿಶಕ್ತಿಯ ದಿವಾಳಿತನ. ಚರ್ಮಕೈಗಾರಿಕೆಯ ಶಿಕ್ಷಣ ಇಲ್ಲದುದರಿಂದ ನಮಗೆ ಬೇಕಾದ ಅಸಂಖ್ಯ ಚರ್ಮದ ಸಾಮಗ್ರಿಗಳು ದೊರೆಯುತ್ತಿಲ್ಲ.

ಈ ಕ್ಷೇತ್ರದಲ್ಲಿ ಪೂರ್ಣಸ್ವದೇಶೀ ಪ್ರೇಮಿಗಳಿಗೆ ಕೈತುಂಬ ಕೆಲಸವಿದೆ. ಈ ದೊಡ್ಡ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ನಮ್ಮ ಎಲ್ಲ ತಾಂತ್ರಿಕ ಕುಶಲತೆಗಳನ್ನು ಬಳಸಿಕೊಳ್ಳಲು ಅವಕಾಶವಿದೆ. ಇದರಲ್ಲಿ ಹರಿಜನ ಸೇವೆ, ಗ್ರಾಮಸೇವೆ ಮತ್ತು ವಿದ್ಯಾವಂತ ನಿರುದ್ಯೋಗ ನಿವಾರಣೆ ಎಲ್ಲವೂ ಸಾಧಿಸೀತು. ಅದೂ ಅಲ್ಲದೆ

ವಿದ್ಯಾವಂತರೆನಿಸಿಕೊಂಡಿರುವವರು ಹಳ್ಳಿಗಳೊಡನೆ ನೇರ ಸಂಪರ್ಕ ಪಡೆಯುವ ಸದವಕಾಶವೂ ಇರುತ್ತದೆ.

(ಹರಿಜನ, 07-09-1934)

ಗ್ರಾಮೋದ್ಯೋಗಗಳ ಪುನರುಜ್ಜೀವನ

ಹಳ್ಳಿಗರ ಮೇಲೆ ನಾವೊಂದು ಘೋರ ಅಪರಾಧವೆಸಗಿದ್ದೇವೆ ಎಂಬ ಪಾಪಪ್ರಜ್ಞೆ ಕಾಡುತ್ತದೆ. ನಾಶವಾಗಿರುವ ಅವರ ಗ್ರಾಮ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಿ, ಪ್ರೋತ್ಸಾಹವಿತ್ತು, ಅವರ ಕಲೆಗಳನ್ನು ಜೀವಂತಗೊಳಿಸಿ, ಅವರು ಉತ್ಪಾದಿಸುವ ವಸ್ತುಗಳು ತಕ್ಷಣ ಮಾರಾಟವಾಗುವ ವ್ಯವಸ್ಥೆ ಮಾಡುವುದೊಂದೇ ಪ್ರಾಯಶ್ಚಿತ್ತದ ಪರಿಹಾರ ಮಾರ್ಗ. ಜಗದೀಶ್ವರನಂತಹ ಸಹನಾಶೀಲ ಕ್ಷಮಾಶೀಲ ಬೇರಾರೂ ಇಲ್ಲ. ಆದರೆ ಅವನ ಸಹನೆ ಕ್ಷಮೆಗಳಿಗೂ ಒಂದು ಮಿತಿಯ ಸಮಯ ಬರುತ್ತದೆ. ನಮ್ಮ ಗ್ರಾಮಗಳಿಗೆ ಅನ್ಯಾಯ ಮಾಡಿ ನಾವು ಕರ್ತವ್ಯಭ್ರಷ್ಟರಾದರೆ ನಾವೇ ನಮ್ಮ ಸರ್ವನಾಶಕ್ಕೆ ಕಾರಣರಾಗುತ್ತೇವೆ. ಈ ಕರ್ತವ್ಯವೇನೂ ಕಷ್ಟಕರವಲ್ಲ. ತೀರ ಸರಳ. ನಾವು ಗ್ರಾಮಾಭಿಮುಖವಾಗಬೇಕು. ಗ್ರಾಮೀಣ ಮನೋಧರ್ಮ ಬೆಳೆಸಬೇಕು. ನಮ್ಮ ಮತ್ತು ನಮ್ಮ ಗೃಹಕೃತ್ಯದ ವಸ್ತುಗಳನ್ನು ಯೋಚಿಸಿದಾಗಲೆಲ್ಲ ಗ್ರಾಮಗಳ ಉತ್ಪಾದನೆಯೇ ಮೊದಲು ಬರಬೇಕು. ಅದಕ್ಕೇನು ವೆಚ್ಚ ಹೆಚ್ಚಾಗದು. ಗ್ರಾಮೋದ್ಯೋಗಗಳಲ್ಲಿ ಹೋಗಿ ನಿಮ್ಮ ಉತ್ಪಾದಿನ ವಸ್ತುಗಳಿಗೆಲ್ಲ ತಕ್ಷಣದ ಮಾರುಕಟ್ಟೆ ಇದೆ ಎಂದು ಸ್ವಯಂಸೇವಕರು ತಿಳಿಯಹೇಳಬೇಕು. ಊರು ಮತ್ತು ನಗರಗಳವರು ಕೊಳ್ಳಬೇಕು. ಎಲ್ಲ ರೀತಿಯ ಜಾತಿ ಪಂಥಗಳ, ಪಕ್ಷ ಸಿದ್ಧಾಂತಗಳ ಜನರೂ ಈ ಕಾರ್ಯವನ್ನು ಯಾವ ಭೇದವೂ ಇಲ್ಲದೆ ಕೈಗೊಳ್ಳಬಹುದಾದ ಕಾರ್ಯ ನಮ್ಮ ಭಾರತದ ನಿಜವಾದ ಅರ್ಥವ್ಯವಸ್ಥೆಗೆ ಅನುಗುಣವಾದ ಮಾರ್ಗವೇ ಇದು.

(ಹರಿಜನ, 01-03-1935)

ಭಾರತೀಯ ಮನೆಯೊಂದರ ದಿನನಿತ್ಯ ಬಳಕೆಯ ಯಾವ ವಸ್ತುವನ್ನೂ ಹಳ್ಳಿಗಳಲ್ಲಿ ಮಾಡದೇ ಹೋಗಿಲ್ಲ. ಈಗಲೂ ಮಾಡಲಾಗದೇ ಇಲ್ಲ. ನಮ್ಮ ಮನೋಧರ್ಮ ಬದಲಾಗಬೇಕು ಅಷ್ಟೆ. ಈ ಚಮತ್ಕಾರವನ್ನು ಮಾಡುವುದಾದರೆ, ನಮ್ಮ ಸರ್ವಗಮನ ಗ್ರಾಮೋದ್ಯೋಗಗಳ ಕಡೆ ಹರಿದರೆ, ಆ ಕೂಡಲೇ ಲಕ್ಷಾಂತರ ಹಳ್ಳಿಗರಿಗೆ ಉದ್ಯೋಗ ದೊರೆತು ಕೋಟ್ಯಾಂತರ ರೂಪಾಯಿಗಳು ಅವರ ಕೈ ಸೇರುತ್ತವೆ. ಆದರೆ ನಾವೀಗ ಅವರನ್ನು ಸುಲಿದು ಅವರ ಕೈಗೆ ಒಂದು ಕಾಸೂ ಹಿಂತಿರುಗದ ಹಾಗೆ ಮಾಡಿದ್ದೇವೆ. ಈ ಕೂಡಲೇ ಈ ದುರಂತದೆಡೆಗೆ ಜಾರುತ್ತಿರುವುದನ್ನು ನಿಲ್ಲಿಸಬೇಕು. ಅಸ್ಪೃಶ್ಯತೆಯ ನಿವಾರಣೆಯೆಂದರೆ ನನಗೆ ಒಂದು ವಿಶಾಲವಾದ ಅರ್ಥವಿದೆ. ಸಾಂಪ್ರದಾಯಿಕವಾಗಿ ಅಸ್ಪಶ್ಯರೆನಿಸಿಕೊಂಡಿರುವವರ ವಿಮೋಚನೆಯಷ್ಟೇ ಅಲ್ಲ. ನಗರವಾಸಿಗಳಿಗೆ ಹಳ್ಳಿಗಳು ಅಸ್ಪೃಶ್ಯವೆನಿಸಿವೆ. ಹಳ್ಳೀಗರ ವಿಷಯವೇ ಗೊತ್ತಿಲ್ಲ. ಅಲ್ಲಿ ವಾಸಿಸುವುದು ನಗರದವರಿಗೆ ಅಸಹ್ಯ. ಅಲ್ಲಿ ಹೋದರೂ ನಗರ ಜೀವನದ ಪ್ರತಿ ನಕಲು ಮಾಡುವುದೇ ಅವರ ಇಚ್ಛೆ. ಭಾರತದ ನಲವತ್ತು ಕೋಟಿ ಜನವೂ ನಗರವಾಸಿಗಳಾಗಿರುವುದು ಸಾಧ್ಯವಾಗುವುದಾದರೆ ಈ ಪರಿವರ್ತನೆಯನ್ನು ಬಯಸಬಹುದು. ಈ ಕೆಲಸ ಅಸಾಧ್ಯ. ಗ್ರಾಮಕೈಗಾರಿಕೆಗಳನ್ನು ನವೀಕರಿಸಿ ಈಗಿನ ನಾಗಾಲೋಟದ ದಾರಿದ್ರ್ಯವನ್ನು ತಪ್ಪಿಸಬೇಕು. ಅವರ ಮೇಲೆ ಈಗ ನಾವು ಹೇರಿರುವ ಬಲಾತ್ಕಾರದ ನಿರುದ್ಯೋಗ ಇತರ ಕಾರಣಗಳಷ್ಟೇ ಒಂದು ಘೋರ ಶಾಪ. ಅದನ್ನು ನಿವಾರಿಸುವುದು ದೇಶವನ್ನೆಲ್ಲ ನಗರೀಕರಣ ಮಾಡುವುದಕ್ಕಿಂತ ಹೆಚ್ಚು ಸಾಧ್ಯ ಎಂದು ನನಗನಿಸುತ್ತದೆ.

(ಹರಿಜನ, 01–03–1935)

ಗ್ರಾಮೀಣ ರೋಗ ಚಿಕಿತ್ಸೆ

ವೈದ್ಯಕೀಯ ಸಹಾಯ ಸಮಾಜಸೇವೆಯ ಅಥವಾ ಗ್ರಾಮಾಭಿವೃದ್ಧಿ ಕಾರ್ಯದ ಮುಖ್ಯ ಭಾಗ ಎಂದು ನನಗೆ ಬರುವ ಅನೇಕ ಸಂಸ್ಥೆಗಳ ವರದಿಗಳು ತಿಳಿಸಿವೆ. ರೋಗಿಗಳಿಗೆ ಔಷಧಗಳನ್ನು ಕೊಟ್ಟು ಗುಣಪಡಿಸುತ್ತೇವೆಂದು ಜಾಹೀರು ಮಾಡಿಕೊಳ್ಳುವ ವ್ಯಕ್ತಿಗಳ ಕಡೆಗೆ ನೂರಾರು ಹಳ್ಳಿಯ ಜನ ಧಾವಿಸುತ್ತಾರೆ. ಈ ವೈದ್ಯ ಏನೂ ಕಷ್ಟಪಡಬೇಕಾಗಿಲ್ಲ. ರೋಗನಿದಾನಗಳ ಬಗ್ಗೆ ಆತನಿಗೆ ಸರಿಯಾದ ತಿಳುವಳಿಕೆಯೂ ಇರಬೇಕಾಗಿಲ್ಲ; ಈ ಔಷಧಿಗಳನ್ನೂ ಆತ ದಾನಿಗಳಾದ ಔಷಧ ವ್ಯಾಪಾರಿಗಳಿಂದ ಉಚಿತವಾಗಿಯೇ ಪಡೆದಿರಲೂಬಹುದು. ದಾನಿಗಳಾದವರು ಎಷ್ಟೋ ವೇಳೆ ತಮ್ಮ ಆತ್ಮಸಾಕ್ಷಿಯ ತೃಪ್ತಿಗಾಗಿ ವಿವೇಚನಾರಹಿತ ರೀತಿಯಲ್ಲಿ ದಾನ ನೀಡುವುದುಂಟು. ಸಂಕಷ್ಟದಲ್ಲಿರುವವರಿಗೆ ಏನಾದರೂ ಸಹಾಯ ನೀಡಿದೆವು ಎಂದಷ್ಟೇ ಅವರ ಸಮಾಧಾನ.

ಈ ರೀತಿಯ ಸಮಾಜಸೇವೆ ಆಲಸ್ಯಪೂರ್ಣ ಸೇವೆ ಎನಿಸುತ್ತದೆ ನನಗೆ ಕೆಲವು ವೇಳೆ ಹಾನಿಕಾರಕವೂ ಆದೀತು. ಔಷಧಿ ನುಂಗಿಬಿಟ್ಟರೆ ಸಾಕು ನೀನಿನ್ನೇನನ್ನೂ ಮಾಡಬೇಕಾಗಿಲ್ಲ ಎಂದು ರೋಗಿಗಳಿಗೆ ಹೇಳಿದಂತಾಗುತ್ತದೆ. ಇದು ಅಪಾಯಕಾರಿ ದೃಷ್ಟಿ. ಅವನಿಗೆ ವಿವೇಕೋದಯವಾಗದು. ಹಿಂದಿನದಕ್ಕಿಂತ ಹೀನಸ್ಥಿತಿಗೇ ಹೋಗಬಹುದು. ಒಂದು ಗುಳಿಗೆಯೋ ಒಂದು ಔಷಧಿಯೋ ಸುಲಭವಾಗಿ ಸಿಗುತ್ತದೆ. ಅದು ಅನಾಚಾರಗಳಿಂದಾದ ರೋಗಗಳನ್ನೆಲ್ಲ ಸರಿಪಡಿಸಿಬಿಡುತ್ತದೆ ಎಂದು ತಿಳಿದು ಮತ್ತೆ ಮತ್ತೆ ಅದೇ ಚಾಳಿಗಳಿಗೆ ಬಲಿಯಾಗಬಹುದು. ಭಿಕ್ಷೆಯ ರೂಪದಲ್ಲಿ ತಾನು ಏನೂ ಮಾಡದೆ ಬಿಟ್ಟಿಯಾಗಿ ಸಹಾಯ ಸಿಗುತ್ತದೆ ಎಂಬ ಹೀನ ಭಾವನೆಯಿಂದ ಮನುಷ್ಯನಿಗೆ ಆತ್ಮಗೌರವವೇ ನಾಶವಾಗುವ ಅಪಾಯವುಂಟು.

ಅದಕ್ಕೆ ಬದಲು ಒಳ್ಳೆಯ ವರಪ್ರದವೆನಿಸುವ ಮತ್ತೊಂದು ರೀತಿಯ ವೈದ್ಯಕೀಯ ನೆರವು ಉಂಟು. ರೋಗನಿಧಾನಗಳನ್ನು ತಿಳಿದವರು ಅಂಥ ಸಹಾಯ ನೀಡಬಲ್ಲರು. ರೋಗ ಏಕೆ ಬಂತು; ಅದರ ಕಾರಣಗಳನ್ನು ನಿವಾರಿಸಿಕೊಳ್ಳುವುದು ಹೇಗೆ ಎಂದವರು ತಿಳಿಸಿಹೇಳುತ್ತಾರೆ. ಯಾವುದೇ ಸಮಯದಲ್ಲಿ ವೈದ್ಯಕೀಯ ಸಹಾಯ ಬೇಕಾದರೂ ಅವರು ರೋಗಿಯೆಡೆಗೆ ಧಾವಿಸುತ್ತಾರೆ. ಇಂಥ ವಿವೇಕಪೂರ್ಣ ಪರಿಹಾರದಿಂದ ಜನರಿಗೆ ತಾನಾಗಿಯೇ ಆರೋಗ್ಯ ಶಿಕ್ಷಣ ದೊರೆತೀತು. ಸ್ವಚ್ಛತೆ ಮತ್ತು ವೈಯಕ್ತಿಕ ನೈರ್ಮಲ್ಯಗಳನ್ನು ಅಭ್ಯಾಸ ಮಾಡಿ ಆರೋಗ್ಯ ಕಾಪಾಡಿಕೊಳ್ಳುವುದನ್ನು ಕಲಿಸಿದಂತಾಗುತ್ತದೆ. ಇಂಥ ಸೇವೆ ಬಹಳ ಅಪರೂಪ. ಬಹಳ ಸಂದರ್ಭಗಳಲ್ಲಿ ಈ ವೈದ್ಯಕೀಯ ಸಹಾಯದ ವರದಿ ಒಂದು ರೀತಿಯ ಜಾಹಿರಾತಾಗುತ್ತದೆ. ಈ ವಲಯದಲ್ಲಿ ಹೆಚ್ಚಿನ ಸಹಾಯಗಳನ್ನು ಆಕರ್ಷಿಸಿ ಸ್ವಲ್ಪ ಹೆಚ್ಚು ತಿಳಿವಳಿಕೆ ಪಡೆದವರ ಸಹಕಾರದಿಂದ ಬೆಳೆಯುತ್ತದೆ. ನನ್ನ ಅಭಿಪ್ರಾಯದಲ್ಲಿ ಯಾವುದೇ ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಅದು ನಗರದಲ್ಲಾಗಲಿ ಹಳ್ಳಿಗಳಲ್ಲಾಗಲಿ, ಈ ರೀತಿಯ ವೈದ್ಯಕೀಯ ಪರಿಹಾರ ಕಾರ್ಯವನ್ನು ಗೌಣವೆಂದೇ ಎಣಿಸಬೇಕು. ವರದಿಗಳಲ್ಲಿ ಅದನ್ನು ನಮೂದಿಸಲೇಬಾರದು. ತಮ್ಮ ತಮ್ಮ ಕ್ಷೇತ್ರಗಳಲ್ಲಿ ರೋಗಗಳು ಬಾರದಂತೆ ಆರೋಗ್ಯ ರಕ್ಷಿಸಿಕೊಳ್ಳಲು ಬೇಕಾದ ಕಾರ್ಯಕ್ರಮಗಳನ್ನನುಸರಿಸುವುದು ಒಳ್ಳೆಯದು. ಔಷಧಿಗಳ ಬಳಕೆ ಆದಷ್ಟು ಕಡಮೆಯಾಗಬೇಕು. ಹಳ್ಳಿಗಳಲ್ಲಿನ ಸಂತೆಗಳಲ್ಲಿ ದೊರೆಯುವ ಅನೇಕ ಔಷಧ ಪದಾರ್ಥಗಳನ್ನು ಕಾರ್ಯಕರ್ತರು ತಿಳಿದುಕೊಂಡು ಅವುಗಳ ಗುಣವಿಶೇಷಗಳನ್ನರಿತಿರಬೇಕು. ಎಲ್ಲಿ ಅಗತ್ಯವೋ ಅಲ್ಲಿ ಅವುಗಳನ್ನೇ ಉಪಯೋಗಿಸಬೇಕು.

(ಹರಿಜನ, 09–11–1935)

ಉತ್ಪಾದನೆ ಮಾಡುವ ಯಂತ್ರ

ಗ್ರಾಮಗಳ ಶೋಷಣೆ ನಿಂತಾಗಲೇ ಅವುಗಳ ಪುನರುಜ್ಜೀವನ ಆದೀತು. ಬೃಹತ್ ಪ್ರಮಾಣದ ಉತ್ಪಾದನೆ ಮಾಡುವ ಯಂತ್ರೀಕರಣದಿಂದ ಮಾರುಕಟ್ಟೆಗಳಲ್ಲಿ ಅಸಮಾನ ಸ್ಪರ್ಧೆ ಹುಟ್ಟಿ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಹಳ್ಳಿಗಳ ಶೋಷಣೆ ಅನಿವಾರ್ಯವಾಗುತ್ತದೆ. ಆದ್ದರಿಂದ ಗ್ರಾಮಗಳು ತಮ್ಮ ಬಳಕೆಗಾಗಿಯೇ ವಸ್ತುಗಳನ್ನು ಉತ್ಪಾದಿಸಿ ಸ್ವಯಂಪೂರ್ಣವಾಗಲು ನಮ್ಮ ಸರ್ವ ಗಮನವನ್ನು ಹರಿಸಬೇಕು. ಗ್ರಾಮ ಕೈಗಾರಿಕೆಗಳು ಈ ನಿಯಮ ಪಾಲಿಸುವುದಾದರೆ ಅತ್ಯಂತ ಆಧುನಿಕ ಯಂತ್ರಗಳನ್ನೂ ಉಪಕರಣಗಳನ್ನೂ ಬಳಸಿಕೊಳ್ಳಬಹುದು. ತಾವೇ ತಯಾರಿಸಬಹುದಾದ, ತಮ್ಮ ಸಂಪನ್ಮೂಲಗಳಿಗೆ ನಿಲುಕಬಹುದಾದ ಉಪಕರಣಗಳಾಗಬೇಕು ಅಷ್ಟೆ. ಈ ತಂತ್ರಜ್ಞಾನ ಇತರರ ಉದ್ಯೋಗಗಳನ್ನು ನಾಶಮಾಡಿ ಶೋಷಣೆ ಮಾಡುವಂತಾಗಬಾರದು.

(ಹರಿಜನ, 29–08–1936)

ಗ್ರಾಮ ಪುನರ್‌ರಚನೆ ಏಕೆ?

ಬಹಳ ಕಾಲದಿಂದಲೂ ವಿದ್ಯಾವಂತರಾಗುವ ಸೌಲಭ್ಯಗಳನ್ನು ಪಡೆದವರಿಂದ ಹಳ್ಳಿಗಳು ಸಂಕಟಕ್ಕೀಡಾಗಿವೆ. ಅವರೆಲ್ಲ ನಗರವಾಸಿಗಳಾಗಿದ್ದಾರೆ. ಹಳ್ಳಿಗಳೊಡನೆ ಸಮರಸ ಬಾಂಧವ್ಯ ಬೆಳೆಸಿ ಸೇವಾಭಾವನೆಯಿಂದ ಹಳ್ಳಿಗಳಲ್ಲಿಯೇ ನೆಲಸಿ ತಮ್ಮ ಪೂರ್ಣ ವ್ಯಕ್ತಿತ್ವ ವಿಕಾಸ ಪಡೆಯುವಂತೆ ಅವರನ್ನು ಪ್ರೇರೇಪಿಸುವುದೇ 'ಗ್ರಾಮಕ್ಕೆ ಮರಳಿ' ಚಳುವಳಿ....ಸೇವಾಕಾಂಕ್ಷಿಗಳಿಗೆ ಹಳ್ಳಿಯ ಜೀವನದ ಸಮಸ್ಯೆಗಳು ಗಾಬರಿಪಡಿಸಲಾರವು. ಅವರು ಅಲ್ಲಿ ಹೋಗುವ

ಮುನ್ನವೇ ಈ ಸಮಸ್ಯೆಗಳ ತಮ್ಮ ಉದ್ದೇಶಿತ ಗುರಿಯಲ್ಲಿ ನಂಬಿಕೆಯಿಟ್ಟು ಸೇವೆ ಮಾಡುವಂತಹವರು ಮಾತ್ರವೇ ಗ್ರಾಮಸ್ಥರ ಮೇಲೆ ಪ್ರಭಾವ ಬೀರಬಲ್ಲರು. ಅವರ ಮಧ್ಯೆ ಆದರ್ಶಜೀವಿಯಾಗಿ ಬಾಳುವುದೇ ಅವರಿಗೆ ಒಂದು ಮಾದರಿಯಾಗಿ ಪರಿಣಾಮ ಮಾಡುತ್ತದೆ. ಕೇವಲ ಹೊಟ್ಟೆಪಾಡಿಗೆ ಸಂಪಾದಿಸಲು ಹೋದವರು ಹಾಗೆ ಮಾಡಲಾರರು. ಹಣದಾಸೆಗೆ ಹೋಗುವವರಿಗೆ ಹಳ್ಳಿಯಲ್ಲೇನೂ ಸಿಗಲಾರದು ಎಂದು ನನಗೆ ಗೊತ್ತಿದೆ. ಸೇವಾ ಜೀವನದಲ್ಲಿ ಆನಂದವಿಲ್ಲದವರಿಗೆ ಹಳ್ಳಿಯ ವಾಸ ಮೊದಮೊದಲು ಸೊಗಸಿದರೂ ಬಹು ಬೇಗ ಕಷ್ಟಕರವೆನಿಸಿಬಿಡುತ್ತದೆ. ಸ್ವಲ್ಪ ಕಷ್ಟ ಬಂದೊಡನೆಯೇ ಹಳ್ಳಿಯಲ್ಲಿ ನೆಲಸಿದ ಯುವಕರು ಅಲ್ಲಿಂದ ಓಡಿಬಿಡಬಾರದು. ಸಹನೆಯಿಂದ ವ್ಯವಹರಿಸಿದಾಗ ಹಳ್ಳಿಗರೂ ಪಟ್ಟಣದವರಂತೆಯೇ ಸಹಾನುಭೂತಿಯ ಸೇವೆಗೆ ಸ್ಪಂದಿಸುತ್ತಾರೆ. ಅವರೇನೂ ಪ್ರತ್ಯೇಕ ಜೀವಿಗಳಲ್ಲ. ಹಳ್ಳಿಗಳಲ್ಲಿರುವವರಿಗೆ ದೇಶದ ಉನ್ನತ ವ್ಯಕ್ತಿಗಳ ಸಂಪರ್ಕ ಅಪರೂಪ. ಆದರೆ ಗ್ರಾಮಾಭಿಮುಖ ದೃಷ್ಟಿ ಬೆಳೆದಂತೆ ದೇಶದ ಮಹಾನಾಯಕರೂ ಹಳ್ಳಿಗರೊಡನೆ ಜೀವಂತ ಬಾಂಧವ್ಯ ಬೆಳೆಸಿಕೊಳ್ಳುವುದು ಅಗತ್ಯವಾಗುತ್ತದೆ. ಈಗಲೂ ಮಹಾ ಸಂತವರ್ಯರಾದ ಚೈತನ್ಯಪ್ರಭು, ರಾಮಕೃಷ್ಣ, ತುಳಸೀದಾಸ, ಕಬೀರ್, ಗುರುನಾನಕ್, ದಾದು, ತುಕಾರಾಮ್, ತಿರುವಳ್ಳುವರ್ ಮುಂತಾದವರೂ ಅವರಷ್ಟೇ ಪವಿತ್ರಾತ್ಮರಾದ ಇತರ ಭಕ್ತ ಜನರೂ ತಮ್ಮ ಜಾನಪದ ಉಪದೇಶಗಳಿಂದ ಸದಾ ಅವರ ಸಂಗಾತಿಗಳಾಗಿಯೇ ಇದ್ದಾರೆ. ಆದರೆ ಅವರೆಲ್ಲ ತಿಳಿಸುವ ಜೀವನದ ಶಾಶ್ವತ ಮೌಲ್ಯಗಳ ಕಡೆಗೆ ಮನಸ್ಸು ತಿರುಗುವುದೇ ಕಷ್ಟ. ಆಧುನಿಕ ಜ್ಞಾನ ಎನಿಸುವ ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥವಿಚಾರ, ವಿಜ್ಞಾನ ಮುಂತಾದವುಗಳನ್ನೂ ಕಲಿಯಲು ಬೇಕಾದಷ್ಟು ಸಾಹಿತ್ಯವಿದೆ. ಧಾರ್ಮಿಕ ಗ್ರಂಥರಾಶಿಯಷ್ಟು ವಿಪುಲವಾಗಿ ಅವು ದೊರೆಯುವುದಿಲ್ಲ ಎಂದು ನಾನು ಬಲ್ಲೆ.

ಸಂತಪುರುಷರು ಸಾಮಾನ್ಯ ಜನತೆಗಾಗಿಯೇ ಬರೆದು ಬೋಧಿಸಿದರು. ಆಧುನಿಕ ಜ್ಞಾನಭಂಡಾರವನ್ನೂ ಹಾಗೆ ಜನತೆಯ ಭಾಷೆಗೆ ಭಾಷಾಂತರಿಸಿ ಕೊಡುವ ಕಾರ್ಯ ಇನ್ನೂ ಹೆಚ್ಚಾಗಿ ಆಗುತ್ತಿಲ್ಲ. ಮುಂದೆ ಅದು ಬರಲೇಬೇಕಾಗುತ್ತದೆ. ಆದ್ದರಿಂದ ಈಗ ಹಳ್ಳಿಗಳಿಗೆ ಹೋಗುವ ಯುವಕರು ನಿರಾಶರಾಗಬಾರದು. ತಮ್ಮ ಬಾಳಿನಿಂದಲೇ ಹಳ್ಳಿಯನ್ನು ವಾಸ ಯೋಗ್ಯವೂ ಪ್ರೀತಿಸುವಂತಹ ರೀತಿಯಲ್ಲಿ ಸೇವೆ ಮಾಡುವುದರಿಂದ ಅದು ಸಾಧ್ಯ. ಗ್ರಾಮಸ್ವಚ್ಛತೆ ಮತ್ತು ಅನಕ್ಷರತೆಯ ನಿರ್ಮೂಲನದಂತಹ ಕಾರ್ಯಗಳನ್ನು ತಮ್ಮ ಸ್ವಸಾಮರ್ಥ್ಯದಿಂದಲೇ ಕೈಗೊಂಡು ಪ್ರಾರಂಭಮಾಡಬೇಕು. ತಮ್ಮ ಜೀವನವನ್ನೂ ಕ್ರಮಬದ್ಧವಾಗಿ, ಶುಚಿಯಾಗಿ, ಉದ್ಯಮಶೀಲವಾಗಿ ಪರಿವರ್ತಿಸಿಕೊಳ್ಳಬೇಕು. ಈ ಅಭ್ಯಾಸ ಸಾಂಕ್ರಾಮಿಕವಾಗಿ ಎಲ್ಲರಲ್ಲೂ ನಿಸ್ಸಂದೇಹವಾಗಿ ಹರಡುತ್ತದೆ.

(ಹರಿಜನ, 20–02–1937)

ನನ್ನ ಕನಸು

ಅಜ್ಞಾನಿಗಳೂ ಬಡವರೂ ಆದ ಜನಕೋಟಿಯಿಂದ ತುಂಬಿದ ನಿರ್ಭಾಗ್ಯ ಭಾರತವಲ್ಲ ನನ್ನ ಗುರಿ. ತನ್ನ ಪ್ರತಿಭೆಗನುಗುಣವಾಗಿ ಸತತ ಪ್ರಗತಿ ಸಾಧಿಸುತ್ತ ಸಾಗುವ ಭಾರತದ ಚಿತ್ರವನ್ನೇ ನಾನು ಕನಸು ಕಾಣುತ್ತಿದ್ದೇನೆ. ವಿನಾಶದ ಹಾದಿಯಲ್ಲಿರುವ ಪಾಶ್ಚಾತ್ಯ ನಾಗರಿಕತೆಯ ಯಾವುದೇ ರೀತಿಯ ಪಡಿಯಚ್ಚಿನಂತಿರುವ ಭಾರತವನ್ನೆಂದೂ ನಾನು ಚಿತ್ರಿಸಿಕೊಂಡಿಲ್ಲ.

ನನ್ನ ಕನಸು ಕೈಗೂಡಿದರೆ ಭಾರತದ ಲಕ್ಷಾಂತರ ಹಳ್ಳಿಗಳಲ್ಲಿ ಒಂದೊಂದೂ ಒಳ್ಳೆಯ ಜೀವನದ ಗಣರಾಜ್ಯವಾದೀತು. ಅಲ್ಲಿ ಅನಕ್ಷರಸ್ಥರಾಗಲಿ ಸೋಮಾರಿಗಳಾಗಲೀ ಇರಲಾರರು. ಉಪಯುಕ್ತ

ಉದ್ಯೋಗಗಳಲ್ಲಿ ತೊಡಗಿ ಪುಷ್ಟಿಯಾದ ಆಹಾರ, ಧಾರಾಳವಾಗಿ ಬೆಳಕು ಗಾಳಿ ಬರುವ ಮನೆ, ಉಡಲು ಸಾಕಷ್ಟು ಖಾದಿಬಟ್ಟೆ, ಎಲ್ಲರಿಗೂ ಸಿಗುವಂತಿದ್ದೀತು. ಗ್ರಾಮಸ್ಥರೆಲ್ಲರೂ ಸ್ವಚ್ಛತೆ ಮತ್ತು ಆರೋಗ್ಯ ನಿಯಮಗಳನ್ನು ತಾವೇ ಅರಿತು ಪಾಲಿಸುತ್ತಾರೆ. ಇಂಥ ಗ್ರಾಮರಾಜ್ಯ ಬೆಳೆಯುತ್ತಾ ಹೊಸ ಅಗತ್ಯ ವಸ್ತುಗಳ ಪೂರೈಕೆಯನ್ನೂ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಮಲೆತು ಕೊಳೆತೀತು.

ಇಂಗ್ಲೀಷರಂತೆಯೇ ಅವರ ಭಾಷೆ ಕಲಿತು ಬಳಸಬೇಕೆಂಬ ದುಸ್ಸಾಧ್ಯ ಪ್ರಯತ್ನದಲ್ಲಿ ಉರು ಹೊಡೆದ ನಿಸ್ಸತ್ವಬುದ್ಧಿಯವರೂ, ಗರಹೊಡೆದವರಂತೆ ನಿಷ್ಕ್ರಿಯರಾದವರೂ ಆಗಿರುವ ಬಿ.ಎ., ಎಂ.ಎ. ಪದವೀಧರರ ದೊಡ್ಡ ಸೇನೆ ಎಂದಿಗೂ ಗ್ರಾಮರಾಜ್ಯದಲ್ಲಿ ಇರಲಾಗದು. ಅವರಿಗೆ ಕೆಲಸವಾಗಲೀ ಉದ್ಯೋಗಗಳಾಗಲಿ ದೊರೆಯದು. ಗುಮಾಸ್ತಗಿರಿಯೊಂದೇ ಅವರಿಗೆ ಯೋಗ್ಯವೆನಿಸುತ್ತದೆ. ಅಲ್ಲಿಯೂ ಅವರು ಹನ್ನೆರಡು ವರ್ಷಗಳ ದೀರ್ಘಕಾಲ ಕಲಿತ ಶಾಲಾ ಕಾಲೇಜು ಶಿಕ್ಷಣ ಯಾವ ಉಪಯೋಗಕ್ಕೂ ಬರುವುದಿಲ್ಲ.

(ಹರಿಜನ, 30–07–1938)

ಸ್ವಾತಂತ್ರ್ಯಪೂರ್ವದ ಗ್ರಾಮ ಪಂಚಾಯಿತಿಗಳು

ಪಂಚಾಯಿತಿಗಳಿಗೊಂದು ಪ್ರಾಚೀನತೆಯುಂಟು; ಆ ಹೆಸರು ಒಳ್ಳೆಯದು. ಹಳ್ಳಿಗರು ಆರಿಸಿಕೊಂಡ 'ಪಂಚ'ರ ಸಭೆ ಎಂದದರ ಅರ್ಥ. ಹಿಂದಿನಿಂದ ನಡೆದುಬಂದ ಈ ವ್ಯವಸ್ಥೆಯ ಮೂಲಕವೇ ಭಾರತದ ಅಸಂಖ್ಯಾತ ಗ್ರಾಮರಾಜ್ಯಗಳು ಆಡಳಿತ ನಡೆಸಿದವು. ಬ್ರಿಟಿಷ್ ಸರ್ಕಾರ ತನ್ನ ಕಂದಾಯ ವಸೂಲಿಯ ನಿರ್ದಯ ದಬ್ಬಾಳಿಕೆಯಿಂದ ಈ ವ್ಯವಸ್ಥೆಯನ್ನೇ ನಿರ್ಮೂಲ ಮಾಡಿಬಿಟ್ಟಿತು.

ಕಡ್ಡಾಯ ವಸೂಲಿಯ ಈ ಧಾಳಿಯನ್ನು ಹಳ್ಳಿಗಳು ಎದುರಿಸಲಾರದೆ ಹೋದವು. ಭಾರತ ರಾಷ್ಟ್ರೀಯ ಸಭೆ ಈಗ ಪಂಚಾಯಿತ ಪದ್ಧತಿಯನ್ನು ಪುನರುಜ್ಜೀವಿಸುತ್ತಿದೆ. ಗ್ರಾಮದ ಹಿರಿಯರಿಗೆ ನ್ಯಾಯ ವಿತರಣೆಯ ಅಧಿಕಾರ ವಹಿಸಲು ಪ್ರಯತ್ನಿಸುತ್ತಿದೆ. ಮೊಟ್ಟಮೊದಲು 1921ರಲ್ಲಿ ಮಾಡಿದ ಪ್ರಯತ್ನ ಸಫಲವಾಗಲಿಲ್ಲ. ಮತ್ತೆ ಪ್ರಯತ್ನ ನಡೆದಿದೆ. ಆದರೆ ಈಗಲೂ ಅದನ್ನು ಕ್ರಮಬದ್ಧವಾಗಿಯೂ ಮತ್ತು ವಿನಯ-ಶೀಲತೆಯಿಂದಲೂ ಜಾರಿಗೆ ತರದೇ ಹೋದರೆ ವಿಫಲವಾದೀತು.

ಉತ್ತರ ಪ್ರದೇಶದ ಕೆಲವೆಡೆ ಪಂಚಾಯಿತಿಗಳೆಂದು ಹೆಸರಿಸಿದ ಸಭೆಗಳು ಮಹಿಳೆಯರ ಮೇಲಿನ ಅತ್ಯಾಚಾರದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಿದುವೆಂದು ನನಗೆ ತಿಳಿಯಿತು. ನೈನಿಟಾಲಿನಲ್ಲಿ ನನಗೆ ತಿಳಿಸಿದ ವರದಿಯಂತೆ ಈ ಪಂಚಾಯಿತರು ಸ್ವಾರ್ಥದಿಂದಲೋ, ಅಜ್ಞಾನದಿಂದಲೋ ಕೆಲವು ವಿಚಿತ್ರವಾದ ತೀರ್ಪುಗಳನ್ನು ಕೊಟ್ಟಿದ್ದಾರೆಂದು ತಿಳಿಯಿತು. ನಿಜವಾಗಿದ್ದರೆ ಇದು ಬಹಳ ತಪ್ಪು. ಅಕ್ರಮವಾಗಿ ಹೀಗೆ ನಿರ್ಮಾಣವಾದ ಪಂಚಾಯಿತಿಗಳು ತಮ್ಮ ತಪ್ಪುಗಳ ಭಾರದಡಿಯಲ್ಲಿ ಕುಸಿದುಹೋಗುತ್ತವೆ. ಗ್ರಾಮಸೇವಕರ ಮಾರ್ಗದರ್ಶನಕ್ಕೆ ಕೆಲವು ನಿಯಮಗಳನ್ನು ಸಲಹೆ ಮಾಡುತ್ತೇನೆ:

1. ರಾಜ್ಯದ ಕಾಂಗ್ರೆಸ್ ಸಮಿತಿಯ ಲಿಖಿತ ಅಪ್ಪಣೆಯಿಲ್ಲದೆ ಯಾವ ಪಂಚಾಯಿತಿಯನ್ನೂ ನಿರ್ಮಿಸಿಕೊಳ್ಳಬಾರದು.
2. ಗ್ರಾಮದಲ್ಲಿ ಮೊದಲು ತಮಟೆಗಳಿಂದ ಸಾರಿಸಿ ಕರೆದ ಸಾರ್ವಜನಿಕ ಸಭೆಯಲ್ಲಿಯೇ ಈ ಪಂಚಾಯಿತಿಯನ್ನು ಚುನಾವಣೆ ಮಾಡಬೇಕು.
3. ತಾಲ್ಲೂಕು ಸಮಿತಿ ಅದನ್ನು ಅನುಮೋದಿಸಬೇಕು.
4. ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆ ಮಾಡುವ ಅಧಿಕಾರ ಈ ಪಂಚಾಯಿತಿಗಳಿಗಿರಬಾರದು.

5. ಆಸ್ತಿಪಾಸ್ತಿಗಳ ಜಗಳವನ್ನು ಕಕ್ಷಿಗಳು ಕೋರಿದಲ್ಲಿ ವಿಚಾರಿಸಬಹುದು.

6. ಯಾರನ್ನೂ ಬಲಾತ್ಕಾರವಾಗಿ ವಿಚಾರಣೆಗೆ ಗುರಿಮಾಡಬಾರದು.

7. ದಂಡ ಹಾಕುವ ಅಧಿಕಾರ ಕೂಡದು. ತನ್ನ ನೈತಿಕ ಅಧಿಕಾರ, ನಿಷ್ಪಕ್ಷಪಾತ ಧೋರಣೆಗಳಿಂದ ವಾದಿ ಪ್ರತಿವಾದಿಗಳಲ್ಲಿ ತಾನಾಗಿ ವಿಶ್ವಾಸ ಮೂಡಿದರೆ ಮಾತ್ರ ತೀರ್ಪು ನೀಡಬಹುದು.

8. ಸಾಮಾಜಿಕ ಬಹಿಷ್ಕಾರವನ್ನೂ ಸದ್ಯಕ್ಕೆ ಹಾಕುವುದು ಬೇಡ.

9. ಪಂಚಾಯಿತಿಗಳು ಮಾಡಬೇಕಾದ ಕರ್ತವ್ಯಗಳೆಂದರೆ:

(ಅ) ಗ್ರಾಮದ ಮಕ್ಕಳಿಗೆಲ್ಲ ಶಿಕ್ಷಣದ ವ್ಯವಸ್ಥೆ.
(ಆ) ಸ್ವಚ್ಛತೆಯ ಕ್ರಮಗಳು.
(ಇ) ಆರೋಗ್ಯ ರಕ್ಷಣೆ ಮತ್ತು ಚಿಕಿತ್ಸೆ.
(ಈ) ಬಾವಿ, ಕೆರೆಗಳನ್ನು ಶುಚಿಯಾಗಿಡುವುದು.
(ಉ) ಅಸ್ಪೃಶ್ಯರೆಂದು ಕಾಣುವ ಜನರ ಯೋಗಕ್ಷೇಮ.

10. ಚುನಾವಣೆಯಾದ ಆರು ತಿಂಗಳಿನೊಳಗೆ ಸರಿಯಾದ ಕಾರಣಗಳಿಲ್ಲದೆ ಮೇಲಿನ ಕರ್ತವ್ಯಗಳನ್ನು ಜಾರಿಗೊಳಿಸದಿದ್ದಲ್ಲಿ ಅಥವಾ ಜನತೆಯ ಪ್ರೀತಿ ವಿಶ್ವಾಸಗಳನ್ನು ಯಾವುದೇ ಕಾರಣದಿಂದ ಕಳೆದುಕೊಂಡರೆ, ಅಥವಾ ತನ್ನ ಅಪರಾಧಗಳಿಗಾಗಿ ಖಂಡನೀಯವೆನಿಸಿದರೆ, ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಅದು ರುಜುವಾತಾದಲ್ಲಿ ಅಂಥ ಪಂಚಾಯಿತಿಗಳನ್ನು ವಜಾಮಾಡಿ ಬೇರೊಂದನ್ನು ಚುನಾಯಿಸತಕ್ಕದ್ದು.

ಪ್ರಾರಂಭದ ದೆಸೆಯಲ್ಲಿ ದಂಡಹಾಕುವ ಅಥವಾ ಸಾಮಾಜಿಕ ಬಹಿಷ್ಕಾರ ಘೋಷಿಸುವುದನ್ನು ವಹಿಸದಿರುವುದು ಒಳ್ಳೆಯದು;

ತಿಳಿಯದವರಾದ ಅಥವಾ ದುರುದ್ದೇಶಪೂರಿತರಾದವರ ಕೈಯಲ್ಲಿ ಬಹಿಷ್ಕಾರದ ಅಧಿಕಾರ ಸಿಕ್ಕಲ್ಲಿ ಅದು ಹಳ್ಳಿಗಳವರಿಗೆ ತುಂಬ ಅಪಾಯಕಾರಿಯಾದೀತು. ಹಾಗೆಯೇ ದಂಡ ವಿಧಿಸುವುದರಲ್ಲೂ ನಿರ್ದೇಶಿತ ಉದ್ದೇಶವೇ ವಿಫಲವಾಗಲೂಬಹುದು. ಹಿಂದೆ ಹೇಳಿರುವ ರಚನಾತ್ಮಕ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಮಾಡುವುದರಿಂದ ಜನಪ್ರಿಯವಾಗುವ ಪಂಚಾಯಿತಿಗೆ ತಾನಾಗಿಯೇ ನೈತಿಕ ಅಧಿಕಾರ ಪ್ರಾಪ್ತವಾಗುತ್ತದೆ. ಅದರ ತೀರ್ಪುಗಳನ್ನು ಜನರೂ ಗೌರವಿಸುತ್ತಾರೆ. ಈ ನೈತಿಕ ಅಧಿಕಾರವೇ ನಿಜವಾದ ಶಕ್ತಿ. ಅದನ್ನು ಯಾವ ಸರ್ಕಾರವೂ ಕಿತ್ತುಕೊಳ್ಳುವುದು ಸಾಧ್ಯವಾಗುವುದಿಲ್ಲ.

ಒಂದು ಆದರ್ಶ ಗ್ರಾಮ

ಅತ್ಯುತ್ತಮ ಸ್ವಚ್ಛತಾ ವ್ಯವಸ್ಥೆ ಸಾಧ್ಯವಾಗುವಂತೆ ರಚಿತವಾಗಿರುತ್ತದೆ ನನ್ನ ಆದರ್ಶ ಗ್ರಾಮ. ಸುತ್ತಲಿನ ಐದು ಮೈಲಿ ವೃತ್ತದೊಳಗೆ ಸಿಗುವ ಸಾಮುಗ್ರಿಗಳಿಂದ ಕಟ್ಟಿದ ಕುಟೀರಗಳು; ಗಾಳಿ ಬೆಳಕು ಧಾರಾಳವಾಗಿ ಬರುವ ವಿನ್ಯಾಸ; ಹಿತ್ತಲು ಜಾಗ, ದನದ ಕೊಟ್ಟಿಗೆ, ತರಕಾರಿ ತೋಟ ಇವುಗಳಿರುತ್ತವೆ. ನಿರ್ಮಲವಾದ ಅಗಲವಾದ ರಸ್ತೆಗಳು, ಎಲ್ಲರಿಗೂ ಲಭ್ಯವಿರುವ ಬಾವಿಗಳು, ಸರ್ವಧರ್ಮ ಪ್ರಾರ್ಥನಾ ಮಂದಿರ, ಸಭಾಂಗಣ, ಗೋಮಾಳ, ಸಹಕಾರಿ ಗೋಶಾಲೆ, ಔದ್ಯೋಗಿಕ ಶಿಕ್ಷಣ ಶಾಲೆಗಳು ಮತ್ತು ನ್ಯಾಯ ಪಂಚಾಯಿತಿ ಇರುತ್ತವೆ. ಅಗತ್ಯವಾದ ಧಾನ್ಯ, ತರಕಾರಿ, ಹಣ್ಣು ಗ್ರಾಮದಲ್ಲೇ ಬೆಳೆದೀತು. ನೂಲುವವರಿಂದ ನೇಕಾರರಿಂದ ಊರಿನಲ್ಲೇ ಬಟ್ಟೆ ಉತ್ಪಾದನೆಯಾಗುತ್ತದೆ. –ಇದು ನನ್ನ ಆದರ್ಶ ಮಾದರಿ ಗ್ರಾಮದ ಸ್ಥೂಲಚಿತ್ರ

ಈಗಿನ ಪರಿಸ್ಥಿತಿಯಲ್ಲಿ ಅಲ್ಲಿನ ಗುಡಿಸಲುಗಳನ್ನು ಸ್ವಲ್ಪ ಸರಿಮಾಡಿ ಹಾಗೇ ಇಟ್ಟುಕೊಳ್ಳಬಹುದು. ಒಬ್ಬ ಒಳ್ಳೆಯ ಜಮೀನುದಾರನೋ

ಅಥವಾ ಜನರಲ್ಲೇ ಸಹಕಾರವೊ ಇದ್ದೆಡೆಯಲ್ಲಿ ಈ ಸಮಗ್ರ ಯೋಜನೆಯನ್ನೇ ಜಾರಿಗೆ ತರಬಹುದು. ಮನೆಗಳ ಪುನರ್ನಿರ್ಮಾಣ ಸ್ವಲ್ಪ ಕಷ್ಟ. ಮಿಕ್ಕೆಲ್ಲವನ್ನೂ ಸ್ವಸಹಾಯದಿಂದ ಮಾಡಿಕೊಳ್ಳಲು ಏನೂ ಅಸಾಧ್ಯವಲ್ಲ. ಸರ್ಕಾರದ ಹಣ ಬೇಕಾಗಿಯೇ ಇಲ್ಲ. ಸರ್ಕಾರವೂ ನೆರವಾದರೆ ಈ ಪುನರ್‌ರಚನೆಗೆ ಮಿತಿಯೇ ಇರದು. ತಮ್ಮಲ್ಲೇ ಸಹಕಾರ ರೂಢಿಸಿ, ಸ್ವಯಂಸೇವೆಯ ದುಡಿಮೆ ನೀಡಿದಲ್ಲಿ ಏನು ಮಾಡಬಹುದು ಎಂದು ಹೇಳುವುದಷ್ಟೇ ಇಲ್ಲಿ ನನ್ನ ಉದ್ದೇಶ.

ಒಬ್ಬೊಬ್ಬರ ಗಳಿಕೆಯನ್ನಷ್ಟೇ ಲೆಕ್ಕ ಮಾಡದೆ ಬುದ್ಧಿವಂತಿಕೆಯಿಂದ ಇಡೀ ಗ್ರಾಮದ ಆದಾಯವನ್ನೂ ಹೆಚ್ಚಿಸಿಕೊಳ್ಳಬಹುದು ಎಂದು ನನ್ನ ವಿಶ್ವಾಸ. ಹೆಚ್ಚು ಕಡಮೆ ನಮ್ಮ ಎಲ್ಲ ಹಳ್ಳಿಗಳ ಸುತ್ತಲೂ ಈಗ ಅಕ್ಷಯವಾದ ಸಂಪತ್ಸಮೃದ್ಧಿ ಇದೆ. ನಿಸರ್ಗದ ಕೊಡುಗೆ ಇದೆ. ಅತಿ ಲಾಭ ಗಳಿಸುವ ವ್ಯಾಪಾರಿಗಳ ದುರಾಸೆಗೆ ಅದು ಸಾಕಾಗದಿರಬಹುದು. ಆದರೆ ಎಲ್ಲ ಮೂಲ ಅವಶ್ಯಕತೆಗಳ ಪೂರೈಕೆಗೆ ಕೊರತೆಯಾಗುವುದೇ ಇಲ್ಲ. ಬಳಸಿದಷ್ಟು ಬೆಳೆಯುತ್ತಿರುತ್ತವೆ. ದುರಂತವೆಂದರೆ ಉತ್ತಮ ಜೀವನಾಕಾಂಕ್ಷೆಗೆ ನಮ್ಮ ಹಳ್ಳಿಗರ ನಿರಾಶಾಭಾವನೆಯಿಂದ ಇಚ್ಛಾಶಕ್ತಿಯೇ ಉಡುಗಿಹೋಗಿದೆ.

ಸಮಾಜಸೇವಕ ಮೊದಲು ಗ್ರಾಮದ ಸ್ವಚ್ಛತೆಯ ಸಮಸ್ಯೆಗಳನ್ನು ಪರಿಹರಿಸುತ್ತಾನೆ. ಅದೇ ಕಷ್ಟಕರವಾದ ಕೆಲಸ. ಕೆಲಸಗಾರರಿಗೆ ಇದೇ ದೊಡ್ಡ ಸವಾಲಾಗುತ್ತದೆ. ಆರೋಗ್ಯ ಕೆಟ್ಟು ಖಾಯಿಲೆಗಳು ಹೆಚ್ಚಲು ಇದೇ ಮುಖ್ಯ ಕಾರಣ. ಗ್ರಾಮಸೇವಕನಾದವನು ತಾನೇ ಝಾಡಮಾಲಿಯಾಗಿ ಮಲವನ್ನೆಲ್ಲ ಗುಡಿಸಿಹಾಕಿ ಒಳ್ಳೆಯ ಗೊಬ್ಬರವನ್ನಾಗಿ ಪರಿವರ್ತಿಸಬೇಕು. ರಸ್ತೆಗಳನ್ನು ಸ್ವಚ್ಛಮಾಡಬೇಕು. ಇದವನ ಪ್ರಥಮ ಸೇವೆ. ಹೇಗೆ ಎಲ್ಲಿ ತಮ್ಮ ದೇಹಬಾಧೆಗಳನ್ನು ತೀರಿಸಿಕೊಳ್ಳಬೇಕೆಂದು ಹಳ್ಳಿಗರಿಗೆ ತಿಳಿಯಹೇಳಬೇಕು. ಸ್ವಚ್ಛತೆಯ ಪ್ರಾಮುಖ್ಯ ಮತ್ತು ಅದನ್ನು ಕಡೆಗಣಿಸಿದರೆ ಆಗುವ ಆಘಾತ ಹೇಳಬೇಕು. ಅವರು ಕೇಳದಿದ್ದರೆ ನಿರಾಶನಾಗಬಾರದು.

ಗ್ರಾಮಗಳಲ್ಲಿ ಚರಕ

ಜನಸಮೂಹದ ಆಶಾಕಿರಣದ ಪ್ರತೀಕವೆಂದೇ ನನಗೆ ಚರಕ ಪ್ರಿಯವಾಗಿದೆ. ಚರಕದ ನಾಶದೊಡನೆಯೇ ಜನತೆಯ ಸ್ವಾತಂತ್ರ್ಯ ನಷ್ಟವಾಯಿತು. ಹಳ್ಳಿಗಳಲ್ಲಿ ವ್ಯವಸಾಯಕ್ಕೆ ಬೆಂಬಲವಾಗಿ ನಿಂತ ಚರಕದ ಕಾಯಕ ರೈತನಿಗೆ ಒಂದು ಗಾಂಭೀರ್ಯವನ್ನು ತಂದುಕೊಟ್ಟಿತ್ತು. ನಿಸ್ಸಹಾಯಕ ವಿಧವೆಗೆ ಸಾಂತ್ವನ ಕೊಡುವ ಸಂಗಾತಿಯಾಗಿತ್ತು ಚರಕ. ಸೋಮಾರಿತನವನ್ನು ನಿವಾರಿಸಿತ್ತು. ಚರಕದಿಂದ ಖಾದಿ ತಯಾರಿಕೆಗೆ ಮಾಡಿಕೊಳ್ಳುವ ಹಿಂದು ಮುಂದಿನ ಸಿದ್ಧತೆಗಳು ಅನೇಕ. ಹತ್ತಿ ಎಕ್ಕುವುದು, ಹಂಜಿ ಮಾಡುವುದು, ಹಾಸನ್ನು ಒಪ್ಪಮಾಡಿಕೊಳ್ಳುವುದು, ಗಂಜಿ ಹಾಕುವುದು, ಬಣ್ಣ ಹಾಕುವುದು, ನೇಯ್ಗೆ ಮಾಡುವುದು ಹೀಗೆ ಸತತವಾಗಿ ಕೆಲಸವಿರುತ್ತಿತ್ತು. ಈ ಕಾರ್ಯಗಳಿಂದಲೇ ಗ್ರಾಮದ ಬಡಗಿಗೆ, ಕಮ್ಮಾರನಿಗೆ ಕೆಲಸ ಸಿಕ್ಕುತ್ತಿತ್ತು. ಭಾರತದ ಏಳೂವರೆ ಲಕ್ಷ ಹಳ್ಳಿಗಳೂ ಚರಕದ ಮೂಲಕ ಸ್ವಾವಲಂಬಿಗಳಾಗಿದ್ದವು. ಚರಕ ಕಣ್ಮರೆಯಾಯಿತು. ಅದರೊಡನೆ ಗಾಣ ಹೋಯಿತು. ಅವುಗಳ ಸ್ಥಾನದಲ್ಲಿ ಬೇರೇನೂ ಬರಲಿಲ್ಲ. ವಿವಿಧ ರೀತಿಯ ಗ್ರಾಮೋದ್ಯೋಗಗಳೆಲ್ಲ ನಿಂತುಹೋಗಿ ಹಳ್ಳಿಗರು ಕಸಬುಗಳಿಂದ ವಂಚಿತರಾದರು. ಸೃಜನಾತ್ಮಕ ಕೌಶಲ್ಯ ಮರೆಯಾಯಿತು. ಅವರ ಅಲ್ಪ ವರಮಾನ ಒಣಗಿಹೋಯಿತು.

ಆದ್ದರಿಂದ ಹಳ್ಳಿಗಾಡಿನವರು ಆತ್ಮಗೌರವದಿಂದ ಬಾಳಲು ಸಹಜವಾಗಿಯೇ ಚರಕವನ್ನೂ ಅದರೊಡನೆ ಮಿಕ್ಕೆಲ್ಲ ಕೈಗಾರಿಕೆಗಳನ್ನೂ ಪುನಃ ಸ್ಥಾಪನೆ ಮಾಡಬೇಕೆಂದು ತಾನಾಗಿಯೇ ಹೊಳೆಯುತ್ತದೆ.

ಇದು ಆಗುವ ಬಗೆ ಹೇಗೆ? ಬುದ್ಧಿವಂತರೂ ದೇಶಭಕ್ತಿಯುಳ್ಳವರೂ ನಿಸ್ವಾರ್ಥ ಸೇವಕರೂ ಆದ ಸಾವಿರಾರು ಭಾರತೀಯರು ತದೇಕ ನಿಷ್ಠೆಯಿಂದ ಹಳ್ಳಿಗಳಲ್ಲಿ ಕೆಲಸ ಮಾಡಲು ನಿಂತರೆ ಮಾತ್ರವೇ ಸಾಧ್ಯ. ನಿಸ್ತೇಜರಾಗಿರುವ ನಮ್ಮ ಗ್ರಾಮಬಂಧುಗಳಲ್ಲಿ ಒಳ್ಳೆಯ ಜೀವನದ

ಆಕಾಂಕ್ಷೆ ಮೂಡಿಸಿ ಅವರ ಕಣ್ಣುಗಳಲ್ಲಿ ಆಶಾಕಿರಣ ಬೆಳಗುವಂತಾದೀತು. ಇನ್ನೊಂದು ಕಾರ್ಯ ಬೃಹತ್ ಸಾಹಸದ ಸಹಕಾರಿ ಉದ್ಯಮ. ಇದೇ ಸರಿಯಾದ ವಯಸ್ಕರ ಶಿಕ್ಷಣ. ಈ ಕಾರ್ಯಕ್ರಮಗಳಿಂದ ಒಂದು ಪರಿಣಾಮಕಾರಿ ಕ್ರಾಂತಿ ನಿಶ್ಶಬ್ದವಾಗಿ ನೆರವೇರುತ್ತದೆ. ಚರಕದ ಪುನರುಜ್ಜೀವನ ಒಂದು ಜೀವದಾಯಕ, ನಿಶ್ಚಿತ ಆದರೆ ನಿಶ್ಶಬ್ದ ಕ್ರಾಂತಿಪಥ.

ಚರಕದ ಕಾರ್ಯಕ್ರಮವನ್ನು ಇಪ್ಪತ್ತು ವರ್ಷಗಳಿಂದ ಮಾಡುತ್ತ ಬಂದ ನನ್ನ ಅನುಭವ ಅದರ ಬಗ್ಗೆ ನನ್ನ ತರ್ಕವನ್ನು ಸರಿ ಎಂದು ದೃಢಪಡಿಸಿದೆ. ಬಡವರಾದ ಮುಸ್ಲಿಮರಿಗೂ ಹಿಂದೂಗಳಿಗೂ ಸಮನಾಗಿಯೇ ಈ ಚರಕದ ಕಾರ್ಯ ಸಹಾಯಮಾಡಿದೆ. ತಮಟೆ ಬಾರಿಸುವ ಡಂಗೂರದ ಪ್ರಚಾರಕ್ಕೆ ಕೈ ಹಾಕದೆ ಲಕ್ಷಾಂತರ ಗ್ರಾಮೀಣ ಕುಶಲ ಕೆಲಸಗಾರರ ಕೈಗೆ ಐದು ಕೋಟಿ ರೂಪಾಯಿಗಳಷ್ಟು ವರಮಾನ ತಂದಿದೆ ಚರಕ ಉದ್ಯಮ. ಈ ಉದ್ಯಮದಿಂದ ಸ್ವರಾಜ್ಯದ ಹಾದಿ ಸುಗಮ ಎಂದು ಯಾವ ಅಳುಕೂ ಇಲ್ಲದೆ ಹೇಳುವ ಧೈರ್ಯ ನನಗೆ ಬಂದಿದೆ. ಅದಕ್ಕೆ ಜಾತಿಭೇದವಿಲ್ಲ. ಗ್ರಾಮಗಳಿಗೆ ತಮ್ಮ ಯಥೋಚಿತ ಸ್ಥಾನಮಾನಗಳನ್ನು ದೊರಕಿಸಿಕೊಟ್ಟು ಮೇಲು-ಕೀಳು ಎಂಬ ಭಾವನೆಗಳನ್ನು ಚರಕ ತೊಡೆದುಹಾಕುತ್ತದೆ.

(ಹರಿಜನ, 13-04-1940)

ಗ್ರಾಮಸ್ವಚ್ಛತೆಯ ಅನಿವಾರ್ಯತೆ

ಗ್ರಾಮಸ್ವಚ್ಛತೆಯ ಕಾರ್ಯವೂ ನಮ್ಮ ಗ್ರಾಮಾಭಿವೃದ್ಧಿಯಲ್ಲಿ ಸೇರದೇ ಹೋದರೆ ಈಗಿರುವಂತೆಯೇ ಅವು ಗೊಬ್ಬರದ ಗುಂಡಿಗಳಾಗಿಯೇ ಉಳಿಯುತ್ತವೆ. ಗ್ರಾಮಸ್ವಚ್ಛತೆ ಅತ್ಯಂತ ಮುಖ್ಯ; ಹಾಗೆಯೇ ಅತ್ಯಂತ

ಕಠಿಣ ಕಾರ್ಯವೂ ಹೌದು. ತಲೆತಲಾಂತರಗಳಿಂದ ಬೆಳೆದುಬಂದ ಕೊಳಕನ್ನು ತೊಳೆಯಲು ಭಗೀರಥ ಪ್ರಯತ್ನವೇ ಬೇಕು. ಗ್ರಾಮಸ್ವಚ್ಛತೆಯ ವೈಜ್ಞಾನಿಕ ತಿಳುವಳಿಕೆ ಇಲ್ಲದ ಹಾಗೂ ಒಬ್ಬ ಯಶಸ್ವೀ ಝಾಡಮಾಲಿಯಾಗದ ಯಾವ ಗ್ರಾಮ ಸೇವಕನೂ ಹಳ್ಳಿಗಳ ಸೇವೆಗೆ ಅರ್ಹನಾಗಲಾರ.

ಭಾರತದ ಕೋಟ್ಯಾಂತರ ಮಕ್ಕಳ ಶಿಕ್ಷಣ ಈ ನೂತನ ಮೂಲ ಶಿಕ್ಷಣ ಪದ್ಧತಿಯಿಂದಲ್ಲದೆ ಬೇರಾವ ಸಾಧನದಿಂದಲೂ ಸಾಧ್ಯವಾಗಲಾರದು ಎಂದೀಗ ಸಾಮಾನ್ಯವಾಗಿ ಒಪ್ಪಲಾಗಿದೆ. ಆದ್ದರಿಂದ ಗ್ರಾಮಸೇವಕನಾದವನು ಈ ಶಿಕ್ಷಣ ಕ್ರಮದಲ್ಲಿ ಪರಿಣಿತನಾಗಿ ತಾನೇ ಶಿಕ್ಷಕನೂ ಆಗಬೇಕು.

ಜೊತೆಜೊತೆಗೆ ವಯಸ್ಕರ ಶಿಕ್ಷಣವೂ ಹಿಂಬಾಲಿಸುತ್ತದೆ. ಜೀವನ ಶಿಕ್ಷಣ ಪದ್ಧತಿ ಬೇರೂರಿದರೆ ಮಕ್ಕಳೇ ತಮ್ಮ ತಂದೆತಾಯಿಯರ ಶಿಕ್ಷಕರಾಗುತ್ತಾರೆ. ವಯಸ್ಕರ ಶಿಕ್ಷಣವೂ ಗ್ರಾಮಾಭಿವೃದ್ಧಿ ಕಾರ್ಯಕರ್ತನ ಒಂದು ಕರ್ತವ್ಯವಂತೂ ಆಗಲೇಬೇಕು.

ಮಹಿಳೆಯನ್ನು ಪುರುಷನ ಅರ್ಧಾಂಗಿ ಅನ್ನುತ್ತಾರೆ. ಆಕೆಗೂ ಸಮಾನವಾದ ಕಾನೂನುಬದ್ಧ ಹಕ್ಕುಗಳು ಇಲ್ಲದೇ ಹೋದಲ್ಲಿ, ಹೆಣ್ಣುಮಕ್ಕಳೂ ಹುಡುಗರಷ್ಟೇ ಬೇಕಾದವರಾಗದಿದ್ದರೆ, ಅಲ್ಲಿಯವರೆಗೆ ಭಾರತ ಪಾರ್ಶ್ವವಾಯುವಿನಿಂದ ನರಳುತ್ತಲೇ ಇರುತ್ತದೆ. ಮಹಿಳೆಯರನ್ನು ದಮನಗೊಳಿಸುವುದು ಎಂದರೆ ಅಹಿಂಸಾ ಧರ್ಮದ ನಿರಾಕರಣೆ ಎಂದೇ ಅರ್ಥ. ಆದ್ದರಿಂದ ಹಳ್ಳಿಯ ಪ್ರತಿಯೊಬ್ಬ ಮಹಿಳೆಯನ್ನೂ ತಾಯಿಯೆಂದೋ ತಂಗಿಯೆಂದೋ ಮಗಳೆಂದೋ ಆ ಸಂದರ್ಭಕ್ಕೆ ತಕ್ಕಂತೆ ಭಾವಿಸಿ ಅತ್ಯಂತ ಗೌರವದಿಂದ ಕಾಣುವುದು ಗ್ರಾಮಸೇವಕನ ಕರ್ತವ್ಯ. ಅಂಥ ಕಾರ್ಯಕರ್ತನನ್ನು ಮಾತ್ರವೇ ಹಳ್ಳಿಯ ಜನ ಗೌರವದಿಂದ ಕಂಡು ಆತನಲ್ಲಿ ವಿಶ್ವಾಸವಿಟ್ಟಾರು.

ಅನಾರೋಗ್ಯದಿಂದ ನರಳುವ ಜನಾಂಗವೊಂದು ಸ್ವರಾಜ್ಯ ಸಂಪಾದಿಸಲು ಸಾಧ್ಯವಾಗದು. ನಮ್ಮ ಜನತೆಯ ಆರೋಗ್ಯದ ಸಮಸ್ಯೆಗಳನ್ನು ನಾವೆಂದೂ ಕಡೆಗಣಿಸಬಾರದು. ಆರೋಗ್ಯಜೀವನದ ಪ್ರಥಮ ನಿಯಮಗಳ ಪರಿಜ್ಞಾನ ಕಾರ್ಯಕರ್ತರಿಗೆ ಇರಲೇಬೇಕಾಗುತ್ತದೆ.

ಒಂದು ಸಾಮಾನ್ಯವಾದ ದೇಶಭಾಷೆ ಬೇಕು. ಇಲ್ಲದಿದ್ದರೆ ನಾವು ಒಂದೇ ರಾಷ್ಟ್ರದ ಪ್ರಜೆಗಳೆನಿಸುವುದಿಲ್ಲ. ಈ ಬಗ್ಗೆ ಹಿಂದಿ-ಹಿಂದೂಸ್ತಾನಿ-ಉರ್ದು ಭಾಷೆಗಳೊಳಗಿನ ಜಗಳಗಳಲ್ಲಿ ತೊಡಗದೆ ಹಳ್ಳಿಯ ಸೇವಾಕಾರ್ಯಕರ್ತನಾದವನು ಅಲ್ಲಿ ವಾಸಿಸುವ ಹಿಂದು ಮತ್ತು ಮುಸಲ್ಮಾನರಿಬ್ಬರಿಗೂ ಅರ್ಥವಾಗುವ ಸುಲಭ ರಾಷ್ಟ್ರಭಾಷೆಯನ್ನು ಕಲಿತಿರಬೇಕು.

ಇಂಗ್ಲಿಷ್ ಭಾಷೆಯ ಮೇಲಿನ ನಮ್ಮ ಅತಿಮೋಹ ಭಾರತದ ರಾಜ್ಯ ಭಾಷೆಗಳಿಗೆ ದ್ರೋಹ ಬಗೆಯುವಂತಾಗಿದೆ. ಈ ದ್ರೋಹಕ್ಕೆ ಪ್ರಾಯಶ್ಚಿತ್ತವಾಗಿಯಾದರೂ ಗ್ರಾಮಸೇವಕನಾದವನು ಹಳ್ಳಿಗರಲ್ಲಿ ತಮ್ಮ ಮಾತೃಭಾಷಾ ಪ್ರೇಮವನ್ನು ಬೆಳೆಸಬೇಕು. ಭಾರತದ ಎಲ್ಲ ದೇಶಭಾಷೆಗಳ ಬಗ್ಗೆ ಸಮಾನ ಗೌರವ ತೋರಬೇಕು. ತಾನು ಭಾರತದ ಯಾವ ಭಾಗದಲ್ಲಿ ಕೆಲಸ ಮಾಡುವನೋ ಅಲ್ಲಿಯ ಜನರ ಭಾಷೆ ಕಲಿಯಬೇಕು. ಜನತೆಯಲ್ಲಿ ತಮ್ಮ ಭಾಷೆಯ ಮೇಲಿನ ಗೌರವವನ್ನೂ ಪ್ರೀತಿಯನ್ನೂ ಅವರಿಂದ ವರ್ಧಿಸಬೇಕು.

ಮೇಲಿನ ಕಲ್ಪನೆಗಳ ಮಹಾಸೌಧ ನಿರ್ಮಿಸಲು ಪ್ರಮುಖವಾಗಿ ಆರ್ಥಿಕ ಸಮತೆ ಇರಲೇಬೇಕು. ಇಲ್ಲದೇ ಹೋದಲ್ಲಿ ಅದು ಮರಳ ಮೇಲಿನ ಮನೆಯಾದೀತು. ಆರ್ಥಿಕ ಸಮತೆ ಎಂದ ಕೂಡಲೇ ಎಲ್ಲರಿಗೂ ಎಲ್ಲ ರೀತಿಯ ಲೌಕಿಕ ಸಾಮಗ್ರಿಗಳೂ ಒಂದೇ ಪ್ರಮಾಣದಲ್ಲಿ ಹಂಚಿರಬೇಕು ಎಂದರ್ಥವಲ್ಲ. ಆದರೆ ಎಲ್ಲರಿಗೂ ಅತ್ಯವಶ್ಯಕವಾಗಿ ವಾಸಿಸಲು ಯೋಗ್ಯವಾದ ಒಂದು ಮನೆ, ಸಾಕಷ್ಟು

ಪುಷ್ಟಿಕರ ಆಹಾರ, ತೊಡಲು ಅಗತ್ಯವಾದಷ್ಟು ಖಾದಿ ಉಡುಪು ಇದ್ದೇ ತೀರಬೇಕು. ಈಗಿರುವಂತಹ ಅತ್ಯಂತ ಕ್ರೂರವಾದ ಅಸಮಾನತೆಯನ್ನು ಅಹಿಂಸಾತ್ಮಕ ಸಾಧನಗಳಿಂದ ನಿರ್ಮೂಲನ ಮಾಡುವುದೂ ಆರ್ಥಿಕ ಸಮತೆಯ ಅಗತ್ಯ ಕಾರ್ಯಕ್ರಮ.

(ಹರಿಜನ, 18-08-1940)

ಗ್ರಾಮದ ಅಹಿಂಸಕ ಆರ್ಥಿಕ ವ್ಯವಸ್ಥೆ

ಕಾರ್ಖಾನೆಯ ನಾಗರಿಕತೆಯ ಮೇಲೆ ಅಹಿಂಸೆಯನ್ನು ಆಚರಣೆಗೆ ತರಲಾರೆವು. ಸ್ವಸಂಪೂರ್ಣ ಗ್ರಾಮಗಳ ತಳಹದಿಯ ಮೇಲೆ ಮಾತ್ರವೇ ಅದು ಸಾಧ್ಯ. ಅಲ್ಲಿ ಶೋಷಣೆ ಇರದು. ಹಿಂಸಾಚಾರಕ್ಕೆ ಶೋಷಣೆಯೇ ಮೂಲ. ಮನಸ್ಸು ಗ್ರಾಮಾಭಿಮುಖವಾದಾಗ ನಾವು ಅಹಿಂಸಾಧರ್ಮಪಾಲಕರಾದೇವು, ಗ್ರಾಮೀಣತೆಗೆ ಚರಕದ ಸಂಸ್ಕೃತಿಯಲ್ಲಿ ಪೂರ್ಣ ವಿಶ್ವಾಸವೇ ಆಧಾರ.

ಯಾವ ಉದ್ಯೋಗವೇ ಆಗಲಿ ಚಟುವಟಿಕೆಯೇ ಆಗಲಿ ಅದರಲ್ಲಿ ಸ್ವಲ್ಪವಾದರೂ ಹಿಂಸೆ ಇದ್ದೇ ಇರುತ್ತದೆ. ವಾಸ್ತವವಾಗಿ ಬದುಕುವುದಕ್ಕೆ ಒಂದು ಕನಿಷ್ಠಾಂಶವಾದರೂ ಹಿಂಸೆಯನ್ನವಲಂಬಿಸಬೇಕಾದೀತು. ಆದ್ದರಿಂದ ಆದಷ್ಟು ಕಡಿಮೆಯ ಮಟ್ಟಕ್ಕೆ ಹಿಂಸೆಯನ್ನಿಳಿಸುವುದೇ ನಮ್ಮ ಪ್ರಯತ್ನ. ಅಹಿಂಸೆ ಅನ್ನುವುದೇ ಒಂದು ನಕರಾತ್ಮಕ ಪದ. ಬದುಕಿಗೆ ಅನಿವಾರ್ಯವಾದ ಹಿಂಸಾಚಾರವನ್ನು ತ್ಯಜಿಸಲು ಮಾಡುವ ಪ್ರಯತ್ನವೇ ಹಿಂಸೆ. ಆದ್ದರಿಂದ ಅಹಿಂಸೆಯನ್ನನುಸರಿಸುವವರು ಅತ್ಯಂತ ಕನಿಷ್ಠ ಹಿಂಸೆಯನ್ನು ಒಳಗೊಳ್ಳುವ ಉದ್ಯೋಗಗಳನ್ನು ಅವಲಂಬಿಸುವರು. ಈ ಪ್ರಯತ್ನ ಮಾಡಲು ಅಹಿಂಸಾ ಧರ್ಮದಲ್ಲಿ ಅಚಲ ನಂಬಿಕೆ ಬೇಕು. ಹೃತ್ಪೂರ್ವಕ ಅವಲಂಬನೆಯಿಲ್ಲದೆ ಅಹಿಂಸೆ ಅಸಾಧ್ಯ. ತಾನು ಯಾವ ಹಿಂಸೆಯನ್ನೂ ಮಾಡದೆ ತನ್ನ

ದುಡಿಮೆಯಿಂದ ಅನ್ನ ಸಂಪಾದಿಸಬಹುದು. ಆದರೆ ಆತ ಇತರರ ಸಂಪತ್ತನ್ನೋ ಏಳಿಗೆಯನ್ನೋ ಕಂಡು ಕರುಬಿದರೆ ಆತ ಅಹಿಂಸಾ ಪಾಲಕನಾಗಲಾರ. ಅಹಿಂಸಾತ್ಮಕ ಉದ್ಯೋಗದ ತಿರುಳು ಹಿಂಸೆಯನ್ನು ವರ್ಜಿಸುವುದಷ್ಟೇ ಅಲ್ಲ; ಅದರಲ್ಲಿ ಇತರರ ಶೋಷಣೆಯಾಗಲಿ ಇತರರ ಬಗ್ಗೆ ಹೊಟ್ಟೆ ಕಿಚ್ಚಾಗಲಿ ಎಳ್ಳಷ್ಟೂ ಇರಬಾರದು.

ಒಂದು ಕಾಲಕ್ಕೆ ನಮ್ಮ ಹಳ್ಳಿಯ ಆರ್ಥಿಕ ರಚನೆ ಇಂಥ ಅಹಿಂಸಾತ್ಮಕ ಉದ್ಯೋಗಗಳ ಮೇಲೆ ರಚಿತವಾಗಿತ್ತು ಎಂದು ನಾನು ನಂಬಿದ್ದೇನೆ. ಐತಿಹಾಸಿಕವಾಗಿ ಅದನ್ನು ಸಾಬೀತುಪಡಿಸಲಾರೆ. ಕರ್ತವ್ಯವೇ ತನ್ನ ಹಕ್ಕುಗಳಿಗಿಂತ ಹೆಚ್ಚಿನದು ಎಂದು ತಿಳಿದು ಮಾನವಪರಿಶ್ರಮ ನಡೆಯುತ್ತಿತ್ತು. ಜೀವನೋತ್ಸಾಹ ಇರಲಿಲ್ಲವೆಂದಲ್ಲ. ಆದರೆ ಸಮಾಜಕ್ಕೆ ಒಳಿತಾಗುವ ಉದ್ಯೋಗಗಳಿಂದ ಸಮುದಾಯದ ಪೋಷಣೆ ನಡೆಯುತ್ತಿತ್ತು. ಉದಾಹರಣೆಗೆ ಬಡಗಿಯಾದವನು ರೈತನ ಅವಶ್ಯಕತೆಗಳನ್ನು ಹಳ್ಳಿಯಲ್ಲೇ ಪೂರೈಸಿಕೊಡುತ್ತಿದ್ದ. ಪ್ರತಿಯಾಗಿ ಅವನಿಗೆ ಉಣ್ಣಲು ಧಾನ್ಯ ಕೊಡುತ್ತಿದ್ದರು. ಇಲ್ಲೂ ಅನ್ಯಾಯ ನಡೆಯುವುದು ಸಾಧ್ಯ, ಆದರೆ ಅತ್ಯಂತ ಕಡಿಮೆ. ಅರವತ್ತು ವರ್ಷಗಳ ಕೆಳಗೆ (1940ರಲ್ಲಿ ಬರೆದದ್ದು) ಕಾಠೇವಾಡದ ಜೀವನದಲ್ಲಿ ಇದನ್ನು ನಾನೇ ಕಂಡಿದ್ದೆ. ಆ ಹಳ್ಳಿಗರ ಕಣ್ಣುಗಳಲ್ಲಿ ಕಾಂತಿಯಿತ್ತು. ಕೈಕಾಲುಗಳಲ್ಲಿ ಈಗಿನದಕ್ಕಿಂತ ಹೆಚ್ಚು ಕಸುವಿತ್ತು. ತಾವು ಅರಿಯದಿದ್ದರೂ ಗ್ರಾಮಸ್ಥರ ಅಂದಿನ ಜೀವನ ಅಹಿಂಸೆಯ ತಳಹದಿಯ ಮೇಲೆ ಇತ್ತು.

ದೈಹಿಕ ಪರಿಶ್ರಮದ ಮೇಲೆ ಆಗಿನ ಉದ್ಯೋಗಗಳೂ ಕೈಗಾರಿಕೆಗಳೂ ನಿರ್ಮಿತವಾಗಿದ್ದವು. ದೊಡ್ಡ ಯಂತ್ರಗಳಿರಲೇ ಇಲ್ಲ. ತನ್ನ ಸ್ವಂತ ದುಡಿಮೆಯಿಂದ ತಾನೆಷ್ಟು ಭೂಮಿಯಲ್ಲಿ ವ್ಯವಸಾಯ ಮಾಡಬಹುದೋ ಅಷ್ಟರಲ್ಲಿ ತೃಪ್ತನಾಗಿದ್ದುದರಿಂದ ಇತರರದನ್ನು ಆಕ್ರಮಿಸುವ ಅವಶ್ಯಕತೆಯೇ ಇರಲಿಲ್ಲ. ಕರಕುಶಲ ಕೈಗಾರಿಕೆಯಲ್ಲಿ ಶೋಷಣೆಯಾಗಲಿ ಜೀತಪದ್ಧತಿಯಾಗಲಿ ಇರಲಾರದು.

ಯಂತ್ರವ್ಯವಸ್ಥೆಯಲ್ಲಾದರೋ ಎಲ್ಲ ಸಂಪತ್ತೂ ಒಬ್ಬನ ಸ್ವಾಮ್ಯಕ್ಕೆ ಸೇರಿಬಿಡುತ್ತದೆ. ಇತರರನ್ನು ದುಡಿಮೆಯ ದಾಸರನ್ನಾಗಿ ಮಾಡಿಕೊಳ್ಳುತ್ತಾನೆ. ಅವರಿಗೆ ಕರುಣೆಯಿಂದ ಬೇಕಾದಷ್ಟು ಜೀವನಾನುಕೂಲಗಳನ್ನು ನಿರ್ಮಿಸಿಕೊಡಬಹುದು; ಆದರೆ ಆ ಪದ್ಧತಿಯಲ್ಲೇ ಶೋಷಣೆ ಇದೆ. ಅದೂ ಒಂದು ರೀತಿಯ ಹಿಂಸೆಯೇ.

ಶೋಷಣಾರಹಿತ ಮತ್ತು ನ್ಯಾಯಪೂರ್ಣ ಪದ್ಧತಿ ಒಂದು ಕಾಲಕ್ಕೆ ಸಮಾಜದಲ್ಲಿ ಇತ್ತು ಎಂದಾಗ ಅದು ಕೇವಲ ಒಬ್ಬೊಬ್ಬ ವ್ಯಕ್ತಿಗತ ಗುಣವಾಗಿತ್ತು ಎಂದಲ್ಲ ನನ್ನ ಭಾವನೆ; ಇಡೀ ಸಮುದಾಯವೇ ಅಂಥ ಅಹಿಂಸಾ ಧರ್ಮಕ್ಕೆ ಬದ್ಧವಾಗಿತ್ತು ಎನ್ನುತ್ತೇನೆ, ಕೇವಲ ಒಬ್ಬ ವ್ಯಕ್ತಿಯ ಗುಣವಿಶೇಷ ಎನ್ನುವುದಾದರೆ, ಆತನಿಗೆ ಮಾತ್ರ ಅದರ ಆಚರಣೆ ಸಾಧ್ಯ ಎಂದರೆ ಅಂಥ ಗುಣಗಳಿಗೆ ಏನೂ ಬೆಲೆಯೇ ಇಲ್ಲ ಎಂದು ನನ್ನ ಮತ.

(ಹರಿಜನ, 01-09-1940)

ಸಹಕಾರಿ ಗೋಸೇವಾ ಕ್ಷೇತ್ರಗಳು

ಒಬ್ಬೊಬ್ಬ ರೈತನೂ ತನ್ನ ಮನೆಯಲ್ಲೇ ದನಕರುಗಳನ್ನಿಟ್ಟುಕೊಂಡು ವೈಜ್ಞಾನಿಕ ರೀತಿಯಲ್ಲಿ ಪೋಷಣೆ ಮಾಡುವುದು ಸಾಧ್ಯವಾಗುವುದಿಲ್ಲ. ಗೋಸಂರಕ್ಷಣೆಯ ಕಾರ್ಯದಲ್ಲಿ ಸಾಮೂಹಿಕ ಪರಿಶ್ರಮ ಅಗತ್ಯ. ಅದಿಲ್ಲದಿರುವುದು ನಮ್ಮ ಗೋಸಂಪತ್ತು ಬಲಹೀನವಾಗಲು ಒಂದು ಕಾರಣ.

ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಈಗ ಪ್ರಪಂಚದಲ್ಲೆಲ್ಲ ಸಾಮೂಹಿಕ ಅಥವಾ ಸಹಕಾರಿ ಪ್ರಯತ್ನದ ಆದರ್ಶವೇ ಪ್ರಚಲಿತವಾಗುತ್ತಿದೆ. ಬೇಕಾದಷ್ಟು ಪ್ರಗತಿಯೂ ಈ ದಿಸೆಯಲ್ಲಿ ಆಗಿದೆ. ನಮ್ಮ ದೇಶಕ್ಕೂ ಈ ಪದ್ಧತಿ ಬಂದಿದೆ. ಆದರೆ ಅದರ ಸ್ವರೂಪವೇ ವಕ್ರವಾಗಿದೆ. ಬಡವರಿಗೆ

ಪ್ರಯೋಜನವಾಗುವಂತೆ ರೂಪಿತವಾಗಿಲ್ಲ. ಜನಸಂಖ್ಯೆ ಹೆಚ್ಚಿದಂತೆ ಭೂಹಿಡುವಳಿಗಳ ಪ್ರಮಾಣ ಕಡಿಮೆಯಾಗುತ್ತಿದೆ. ತೀರ ಸಣ್ಣ ಹಿಡುವಳಿಗಳಾಗುತ್ತಿವೆ. ಅಂಥ ರೈತರು ದನಗಳನ್ನು ಸಾಕುವುದು ತುಂಬ ನಷ್ಟದ ಉದ್ಯಮವಾಗುತ್ತದೆ. ಆದರೂ ಈ ಕುತ್ತಿಗೆ ಅವರು ವಿಧಿಯಿಲ್ಲದೆ ತುತ್ತಾಗಿದ್ದಾರೆ. ಅರ್ಥಶಾಸ್ತ್ರಜ್ಞರು ಈ ದನಗಳಿಗೆ ಮೇವಿನ ವೆಚ್ಚವನ್ನು ಭರಿಸಲಾರದೆ ಕುಸಿದುಹೋಗಿದ್ದಾನೆ, ಅವುಗಳಿಂದ ಬರುವ ಉತ್ಪಾದನೆಗೂ ವೆಚ್ಚಕ್ಕೂ ಅಜಗಜಾಂತರ. ಆದ್ದರಿಂದ ಉಪಯುಕ್ತವಿಲ್ಲದೆ ರಾಸುಗಳನ್ನೆಲ್ಲ ಕೊಂದು ನಾಶಮಾಡದೇ ಇರುವುದು ದೊಡ್ಡ ತಪ್ಪು ಎಂದು ಕೇವಲ ಜಡ ಆರ್ಥಿಕ ದೃಷ್ಟಿಯಿಂದ ಬೊಬ್ಬೆಯಿಡುತ್ತಿದ್ದಾರೆ. ಧಾರ್ಮಿಕ, ನೈತಿಕ ಮತ್ತು ಮಾನವೀಯ ಮೌಲ್ಯಗಳಿಗೆ ಅವರು ಏನೂ ಬೆಲೆ ಕೊಡುವುದಿಲ್ಲ.

ಆದ್ದರಿಂದ ಮಾನವೀಯತೆಯ ದೃಷ್ಟಿಯುಳ್ಳವರು ಏನು ಮಾಡಬಹುದು? ದುಡಿದು ಮುದಿಯಾದ ರಾಸುಗಳನ್ನು ರಕ್ಷಿಸಿಕೊಂಡು ಅವು ರೈತನಿಗೆ ಹೊರಲಾರದ ಭಾರವಾಗದಂತೆ ವ್ಯವಸ್ಥೆ ಮಾಡುವುದೊಂದೇ ಇದಕ್ಕೆ ಪರಿಹಾರ ಮಾರ್ಗ. ಸಹಕಾರಿ ಉದ್ಯಮಗಳು ಈ ದಿಸೆಯಲ್ಲಿ ಬೇಕಾದಷ್ಟು ಸಹಾಯಕವಾಗಬಲ್ಲವು. ತುಲನಾತ್ಮಕವಾಗಿ ವಿಮರ್ಶಿಸಿದರೆ ಇದರಿಂದ ಅನೇಕ ಅನುಕೂಲಗಳನ್ನೂ ಗುರುತಿಸಬಹುದು.

(1) ರೈತ ತನ್ನ ಮನೆಯಲ್ಲೇ ದನಗಳನ್ನು ಕಟ್ಟಿಕೊಳ್ಳಬೇಕಾಗಿಲ್ಲ. ಈಗಿನಂತೆ ಅವನ ಗುಡಿಸಲು ಅರ್ಧ ಕೊಟ್ಟಿಗೆಯಾಗಿ ಹೊಲಸನ್ನೆಲ್ಲ ತುಂಬಿಕೊಂಡು ನಾರಬೇಕಾಗಿಲ್ಲ. ಪಶುಗಳ ಜೊತೆಯಲ್ಲೇ ಸತತವೂ ಜೀವಿಸುವುದರಲ್ಲಿ ಯಾವ ಮಹತ್ವದ ಕರುಣೆಯಾಗಲಿ ಬುದ್ಧಿವಂತಿಕೆಯಾಗಲಿ ನನಗೆ ಕಾಣದು. ಮಾನವನ ಬಾಳು ಹೆಚ್ಚು ಸ್ವಚ್ಛವಾಗಿರಬೇಕಾದುದು ಅಗತ್ಯ.

ಈಗ ದನಗಳಿಗೆ ಮೀಸಲಾಗಿರುವ ಮನೆಯ ಅರ್ಧಭಾಗ ರೈತನ ಕುಟುಂಬಕ್ಕೇ ಒದಗಬೇಕಾದರೆ ಸಹಕಾರಿ ಗೋಶಾಲೆಗಳ ವ್ಯವಸ್ಥೆಯೇ ಸರಿಯಾದುದು.

(2) ದನಗಳ ಸಂಖ್ಯೆ ಹೆಚ್ಚಿದಂತೆ ಮನೆಯೂ ಸಾಲದಾಗಿ ಜೀವಿಸಲು ದುರ್ಭರವೆನಿಸುತ್ತದೆ. ಹೋರಿಕರುಗಳನ್ನು ಮಾಡುತ್ತಾನೆ, ಎಮ್ಮೆಗಳಿದ್ದರೆ ಕೋಣಮರಿಗಳನ್ನು ಕೊಲ್ಲುತ್ತಾನೆ ಅಥವಾ ಬೀದಿಗಟ್ಟಿಬಿಡುತ್ತಾನೆ. ಅವು ಹಸಿವಿನಿಂದಲೇ ಸಾಯುತ್ತವೆ. ಈ ಅಮಾನುಷ ರೀತಿಯ ನಡವಳಿಕೆ ಸಾಮೂಹಿಕ ಗೋಶಾಲೆಯಿಂದ ತಪ್ಪಬಹುದು.

(3) ಪಶುವೈದ್ಯರ ಸಹಾಯ ದೊರಕಿಸಿಕೊಂಡು ದನಗಳಿಗೆ ಬರುವ ಖಾಯಿಲೆಗಳನ್ನು ಗುಣಪಡಿಸುವುದು ಈಗ ಒಬ್ಬೊಬ್ಬ ರೈತನಿಗೂ ಸಾಧ್ಯವಿಲ್ಲ. ಸಹಕಾರಿ ವ್ಯವಸ್ಥೆಯಲ್ಲಿ ಇದು ಸಾದ್ಯ.

(4) ಬೀಜದ ಹೋರಿಯನ್ನು ಚೆನ್ನಾಗಿ ಇಟ್ಟುಕೊಂಡು ಈ ಸಾಮೂಹಿಕ ಗೋಶಾಲೆಯ ವೃದ್ಧಿಮಾಡಬಹುದು. ಈಗಿನಂತೆ ಒಬ್ಬೊಬ್ಬರೂ ಬೇರೆಯವರ ಔದಾರ್ಯಕ್ಕೆ ಕೈಚಾಚಬೇಕಾಗಿಲ್ಲ.

(5) ಒಟ್ಟಿನಲ್ಲಿ ದನ ಮೇಯಿಸುವ ಗೋಮಾಳ ಸಹಕಾರಿ ಗೋಶಾಲೆಗೆ ಸುಲಭವಾಗಿ ಲಭ್ಯವಾಗುತ್ತದೆ. ಈ ಸೌಲಭ್ಯ ಬಿಡಿಬಿಡಿಯಾಗಿ ಸಾಕುವವರಿಗೆ ದೊರೆಯಲಾರದು.

(6) ಸಾಮೂಹಿಕ ಪೋಷಣೆಯಲ್ಲಿ ಮೇವಿನ ವೆಚ್ಚವೂ ಕಡಿಮೆ.

(7) ಹಾಲಿಗೆ ಒಳ್ಳೆಯ ಬೆಲೆ ದೊರಕಿಸಿಕೊಂಡು ಮಾರಬಹುದು. ಅದಕ್ಕಾಗಿ ಮಾರುಕಟ್ಟೆಯ ಅನುಕೂಲ ಮಾಡಿಕೊಳ್ಳಬಹುದು. ಕಲಬೆರಕೆ ಮಾಡುವ ಚಾಳಿಯೂ ನಿಲ್ಲುತ್ತದೆ.

(8) ತಳಿಗಳ ಪರೀಕ್ಷೆ ಮಾಡಲು ಹೆಚ್ಚು ಅನುಕೂಲವಾಗುತ್ತದೆ. ಇಡೀ ಗ್ರಾಮದ ಗೋಶಾಲೆಯಾದರೆ ಪ್ರಯೋಗಗಳಿಂದ ಅವುಗಳ ಸಾಮರ್ಥ್ಯ ಹೆಚ್ಚುವಂತೆ ಒಳ್ಳೆಯ ತಳಿಗಳನ್ನು ರೂಢಿಸಿಕೊಳ್ಳಬಹುದು.

(9) ಇಷ್ಟು ಕಾರಣಗಳೇ ಬಹುಶಃ ಸಾಮೂಹಿಕ ಗೋಶಾಲೆಗಳ ಪರವಾಗಿ ವಾದಮಾಡಲು ಸಾಕು. ವೈಯಕ್ತಿಕವಾಗಿ ಮಾಡುತ್ತಿರುವ ಈಗಿನ ಪದ್ಧತಿಯಿಂದ ನಮ್ಮ ಹಾಗೂ ದನಗಳ ಸ್ಥಿತಿ ಕರುಣಾಜನಕವಾಗಿರುವುದೇ ಎಲ್ಲಕ್ಕಿಂತ ಪ್ರಬಲವಾದ ಕಾರಣ. ಸಹಕಾರಿ ಗೋರಕ್ಷಣೆಯ ಮೂಲಕವೆ ನಾವೂ ನಮ್ಮ ದನಕರುಗಳೂ ಈ ಸಂಕಷ್ಟದಿಂದ ಪಾರಾಗಲು ಸಾಧ್ಯ.

ಕೃಷಿಯಲ್ಲಿಯೂ ಸಹಕಾರೀ ಪದ್ಧತಿ ಒಂದಲ್ಲದೆ ನಮಗೆ ಪೂರ್ಣ ಲಾಭ ದೊರಕಲಾರದು ಎಂದು ನಾನು ದೃಢವಾಗಿ ನಂಬಿದ್ದೇನೆ. ಒಂದು ನೂರು ಕುಟುಂಬಗಳಲ್ಲಿ ಹೇಗೆಹೇಗೋ ಹರಿದು ಹಂಚಿಹೋದ ತುಣುಕು ಜಮೀನುಗಳಲ್ಲಿ ಬೇರೆ ಬೇರೆಯಾಗಿಯೇ ಪರಿಶ್ರಮ ಮಾಡಿ ಬೆಳೆಯುವುದಕ್ಕಿಂತ ಅವರೆಲ್ಲರೂ ಕೂಡೊಕ್ಕಲಿನ ಪದ್ಧತಿ ಅನುಸರಿಸಿದರೆ ಹೆಚ್ಚು ಅನುಕೂಲ ಎನ್ನುವುದು ಸುಲಭವಾಗಿ ಹೊಳೆಯಲಾರದೇ? ವ್ಯವಸಾಯಕ್ಕೆ ಸರಿಹೋಗುವ ಪದ್ಧತಿಯೇ ಹೈನುಗಾರಿಕೆಗೂ ಸರಿ.

ಈ ಕೂಡಲೇ ಸಹಕಾರಿ ಪದ್ಧತಿಗೆ ಬದಲಾಯಿಸಿಬಿಡಿ ಎನ್ನುವುದು ಕಷ್ಟವಾದ ಕೆಲಸ ಎಂದು ನಾನು ಬಲ್ಲೆ. ಕಡಿದಾದ ನೇರ ರಸ್ತೆಯಲ್ಲಿ ಹೋಗುವುದು ಕಷ್ಟ. ಗೋಸೇವೆಯ ಪ್ರತಿಯೊಂದು ಹೆಜ್ಜೆಯಲ್ಲೂ ಅನೇಕ ಸಮಸ್ಯೆಗಳು ಬಂದಾವು. ಅವನ್ನೆದುರಿಸಿ ದಾರಿಯನ್ನು ಸುಗಮ ಮಾಡಿಕೊಳ್ಳಬೇಕು. ಒಬ್ಬೊಬ್ಬರು ಮಾಡುವುದಕ್ಕಿಂತ ಸಾಮೂಹಿಕ ಪ್ರಯತ್ನ ಲಾಭಕರ ಎಂದು ತೋರಿಸಿಕೊಡುವುದಷ್ಟೇ ನನ್ನ ವಾದ.

ಅದೇ ಸರಿಯಾದ ಮಾರ್ಗ. ಬೇರೆಯದು ತಪ್ಪು ಎನ್ನುತ್ತೇನೆ. ವಾಸ್ತವವಾಗಿ ಒಳ್ಳೆಯ ಸಹಕಾರಿ ಪದ್ಧತಿಯಿಂದ ಮಾತ್ರ ವ್ಯಕ್ತಿ ತನ್ನ ಸ್ವಾತಂತ್ರ್ಯವನ್ನು ನಿಜವಾಗಿ ಕಾಪಾಡಿಕೊಳ್ಳಬಲ್ಲ. ಗೋರಕ್ಷಣೆಯಲ್ಲಂತೂ ಈಗಿನ ಪದ್ಧತಿಯಿಂದ ಸ್ವಾರ್ಥ ಮತ್ತು ನಿರ್ದಯತೆ ಹೆಚ್ಚಿದೆ. ಸಹಕಾರದಿಂದ ಇವೆರಡೂ ದುರ್ಗುಣಗಳು ಪೂರ್ತಿ ತೊಡೆದುಹೋಗದಿದ್ದರೂ ಬಹಳಮಟ್ಟಿಗೆ ಕಡಿಮೆಯಾಗುತ್ತವೆ.

(ಹರಿಜನ, 15-02-1942)

ನನ್ನ ಗ್ರಾಮಸ್ವರಾಜ್ಯದ ಸ್ವರೂಪ

ಗ್ರಾಮ ಸ್ವರಾಜ್ಯ ಎಂದರೆ ನನ್ನ ಕಲ್ಪನೆಯಲ್ಲಿ ಒಂದು ಪೂರ್ಣ ರೂಪದ ಗಣರಾಜ್ಯ. ಜೀವನದ ಅತ್ಯಾವಶ್ಯಕ ವಸ್ತುಗಳನ್ನು ಅದು ಸ್ವತಂತ್ರವಾಗಿ ಒದಗಿಸಿಕೊಳ್ಳುತ್ತದೆ. ಎಲ್ಲಿ ಅವಶ್ಯಕವೋ ಅಲ್ಲಿ ಪರಸ್ಪರಾವಲಂಬಿ. ಆದ್ದರಿಂದ ತನಗೆ ಬೇಕಾಗುವ ಧಾನ್ಯ ಮತ್ತು ಬಟ್ಟೆಗೆ ಬೇಕಾಗುವ ಹತ್ತಿ ಬೆಳೆದುಕೊಳ್ಳುವುದು ಅವರ ಮೊದಲ ಆದ್ಯತೆ. ದನಗಳಿಗಾಗಿ ಹುಲ್ಲುಗಾವಲು, ಮಕ್ಕಳಿಗೂ ದೊಡ್ಡವರಿಗೂ ಉಪಯುಕ್ತವಾಗುವ ಆಟದ ಮೈದಾನ ಬಿಟ್ಟುಕೊಂಡಿರುತ್ತದೆ. ಇಷ್ಟಕ್ಕೂ ಆಗಿ ಮಿಕ್ಕ ಜಮೀನಿದ್ದಲ್ಲಿ ಮಾತ್ರ ಅಗತ್ಯವಾದ ವ್ಯಾಪಾರೀ ಬೆಳೆಗಳನ್ನು ಬೆಳೆದೀತು. ಆದರೆ ಗಾಂಜ, ಹೊಗೆಸೊಪ್ಪು, ಅಫೀಮು ಮುಂತಾದುವನ್ನು ಸಂಪೂರ್ಣವಾಗಿ ನಿಷೇಧಿಸಿರುತ್ತದೆ. ಒಂದು ಸಾಮುದಾಯಕ ರಂಗಸ್ಥಳ, ಶಾಲೆ ಮತ್ತು ಸಮುದಾಯ ಭವನ ಇರುತ್ತದೆ. ನೀರಿನ ಸರಬರಾಜಿಗೆ ತನ್ನದೇ ವ್ಯವಸ್ಥೆಯನ್ನು ಸುರಕ್ಷಿತ ಬಾವಿಗಳು ಮತ್ತು ಕೆರೆಗಳಿಂದ ಮಾಡಿಕೊಳ್ಳುತ್ತದೆ. ಮೂಲಶಿಕ್ಷಣ ಕ್ರಮದ ಕೊನೆಯ ತರಗತಿವರೆಗೆ ಕಡ್ಡಾಯ ಶಿಕ್ಷಣ ಹಳ್ಳಿಯಲ್ಲೇ ಇರುತ್ತದೆ. ಸಾಧ್ಯವಾದ ಚಟುವಟಿಕೆಗಳೆಲ್ಲವೂ ಸಹಕಾರ ಪದ್ಧತಿಯಲ್ಲಿ

ನಡೆಯುತ್ತದೆ. ಈಗಿರುವಂತೆ ಬೇರೆ ಬೇರೆ ಹಂತಗಳಲ್ಲಿ ಕಾಣುವ ಜಾತಿ ಜಾತಿಗಳ ಪ್ರತ್ಯೇಕತೆ ಮತ್ತು ಅಸ್ಪೃಶ್ಯತೆಗಳಿರಲಾರವು. ಹಳ್ಳಿಯ ಜನತೆಗೆ ಸಾಮೂಹಿಕವಾಗಿ ನಡೆಸುವ ಅಹಿಂಸಾತ್ಮಕ ಸತ್ಯಾಗ್ರಹ ಮತ್ತು ಅಸಹಕಾರ ಚಳುವಳಿಗಳೇ ಪ್ರಧಾನ ಅಸ್ತ್ರಶಕ್ತಿ. ಸರದಿಯ ಮೇಲೆ ಕೆಲಸ ಮಾಡುವ ಗ್ರಾಮಸ್ಥರ ಗೃಹರಕ್ಷಕ ದಳದ ಸೇವೆ ಸರ್ವರಿಗೂ ಕಡ್ಡಾಯ. ಇದಕ್ಕಾಗಿ ಒಂದು ದಾಖಲೆ ಪುಸ್ತಕ ಇದ್ದು ಅರ್ಹರಾದವರ ಪಟ್ಟಿ ಇಡಲಾಗುತ್ತದೆ.

ಪ್ರತಿ ವರ್ಷ ಐದು ಜನರನ್ನು ಚುನಾವಣೆಯ ಮೂಲಕ ಆರಿಸಲಾದ ಪಂಚಾಯಿತಿಯ ಮೂಲಕ ಸರ್ಕಾರ ನಡೆಯುತ್ತದೆ. ವಯಸ್ಕರೂ ಮತದಾನಕ್ಕೆ ಅರ್ಹರೂ ಆದ ಸ್ತ್ರೀ ಪುರುಷರೆಲ್ಲ ಈ ಚುನಾವಣೆಯಲ್ಲಿ ಭಾಗವಹಿಸುತ್ತಾರೆ. ಎಲ್ಲ ಅಧಿಕಾರವನ್ನೂ ಪಂಚಾಯಿತಿಗೆ ವಹಿಸಲಾಗುವುದು. ನಾವೀಗ ಕಾಣುವ ಶಿಕ್ಷೆಗಳ ಪದ್ಧತಿ ಇರುವುದಿಲ್ಲವಾದ್ದರಿಂದ ಪಂಚಾಯಿತಿಯೇ ಹಳ್ಳಿಯ ಶಾಸನ ಸಭೆ, ನ್ಯಾಯಾಲಯ ಮತ್ತು ಕಾರ್ಯಾಂಗವಾಗಿ ಒಂದು ವರ್ಷ ಅಧಿಕಾರದಲ್ಲಿರುತ್ತದೆ.

ಯಾವುದೇ ಗ್ರಾಮ ಈ ಕೂಡಲೇ ಬೇಕಾದರೂ ಇಂಥ ಗಣರಾಜ್ಯವಾಗಲು ಯಾವ ಅಡ್ಡಿಯೂ ಬರಲಾರದು. ಈಗಿನ ಬ್ರಿಟಿಷ್ ಸರ್ಕಾರಕ್ಕೆ ಹಳ್ಳಿಗಳಿಂದ ಬರಬೇಕಾದ ಕಂದಾಯ ವಸೂಲಿಯೊಂದರಲ್ಲೇ ಆಸಕ್ತಿ. ಬೇರೆ ಯಾವುದೂ ಬೇಕಿಲ್ಲ. ಹಳ್ಳಿಗಳಿಗೂ ರಾಷ್ಟ್ರೀಯ ಸರ್ಕಾರಕ್ಕೂ ಇರಬೇಕಾದ ಬಾಂಧವ್ಯವನ್ನು ನಾನಿಲ್ಲಿ ಚರ್ಚಿಸಿಲ್ಲ. ಒಂದು ಗ್ರಾಮಸರ್ಕಾರ ಹೇಗಿರಬೇಕು ಎಂಬುದಷ್ಟೇ ಇಲ್ಲಿ ನನ್ನ ಉದ್ದೇಶ. ವ್ಯಕ್ತಿಸ್ವಾತಂತ್ರ್ಯದ ಮೇಲೆ ಆಧಾರಿತವಾದ ಪ್ರಜಾಪ್ರಭುತ್ವದ ಆದರ್ಶ ಸ್ಥಿತಿ ಇದು. ವ್ಯಕ್ತಿಯೇ ತನ್ನ ಸರ್ಕಾರದ ಶಿಲ್ಪಿ. ಅಹಿಂಸಾ ಧರ್ಮವೇ ಪ್ರಜೆಗೂ ಸರ್ಕಾರಕ್ಕೂ ಅನ್ವಯವಾಗುತ್ತದೆ. ಜಗತ್ತಿನ ಶಕ್ತಿಗಳನ್ನೆದುರಿಸಿ ನಿಲ್ಲುವ ಸಾಮರ್ಥ್ಯ ಗ್ರಾಮ ರಾಜ್ಯಕ್ಕೆ ತಾನಾಗಿ

ಬರುತ್ತದೆ. ಕಾರಣ ತನ್ನ ಹಾಗೂ ತನ್ನ ಗ್ರಾಮದ ಆತ್ಮಗೌರವವನ್ನು ರಕ್ಷಿಸಿಕೊಳ್ಳಲು ಪ್ರತಿ ಪ್ರಜೆಯೂ ನಿಸ್ಸೀಮ ಬಲಿದಾನಕ್ಕೆ ಸಿದ್ಧ.

ಈ ಚಿತ್ರಣ ಅವ್ಯವಹಾರಿಕವೇನೂ ಅಲ್ಲ. ಮಾದರಿಯೊಂದನ್ನು ನಿರ್ಮಿಸಲು ಒಂದು ಜೀವಮಾನವೇ ಬೇಕಾದೀತು. ಪ್ರಜಾಪ್ರಭುತ್ವ ಪ್ರೇಮಿಯಾಗಿ ಗ್ರಾಮವನ್ನು ಪ್ರೀತಿಸುವ ಯಾರಾದರೂ ಈ ಪ್ರಯೋಗದಲ್ಲಿ ತಲ್ಲೀನರಾಗಬಹುದು. ತನ್ನ ಜೀವಿತೋದ್ದೇಶವೇ ಅದೆಂದು ನಂಬಿ ಕೆಲಸ ಮಾಡಿದರೆ ಒಳ್ಳೆಯ ಪರಿಣಾಮ ಆಗಿಯೇ ತೀರುತ್ತದೆ. ಗ್ರಾಮಸೇವಕ ಅಲ್ಲಿನ ಭಂಗಿ, ನೂಲುವವ, ಕಾವಲುಗಾರ, ವೈದ್ಯ, ಶಿಕ್ಷಕನಾಗಿ ಒಂದೇ ಸಾರಿ ಕರ್ತವ್ಯ ಮಾಡಲು ಪ್ರಾರಂಭಿಸಬೇಕು. ತನ್ನ ಬಳಿ ಯಾರೂ ಸುಳಿಯದಿದ್ದರೂ ಧೃತಿಗೆಡದೆ ಸ್ವಚ್ಛತೆ ಮತ್ತು ಚರಕದಲ್ಲಿ ನೂಲುವುದು ಅವನ ದಿನಚರಿಯಾಗಿಟ್ಟುಕೊಂಡು ತೃಪ್ತಿಯಿಂದ ಸೇವೆ ಮಾಡಬೇಕು.

(ಹರಿಜನ, 26–07–1942)

ಸಮಗ್ರ ಗ್ರಾಮಸೇವೆ

ಸಮಗ್ರ ಗ್ರಾಮಸೇವಕನಾದವನು ಗ್ರಾಮದ ಎಲ್ಲ ನಿವಾಸಿಗಳನ್ನೂ ಬಲ್ಲವನಾಗಿದ್ದು ಅವರಿಗೆ ತನ್ನ ಕೈಲಾದಷ್ಟು ಸೇವೆ ಸಲ್ಲಿಸಬೇಕು. ಒಬ್ಬನೇ ಎಲ್ಲವನ್ನೂ ಮಾಡಲು ಸಾಧ್ಯ ಎಂದೇನೂ ಅಲ್ಲ. ಗ್ರಾಮಸ್ಥರು ತಮ್ಮ ಕಾರ್ಯಗಳನ್ನು ತಾವೇ ಮಾಡಿಕೊಳ್ಳುವಂತೆ ನೆರವು ನೀಡಿ ಎಲ್ಲಿಂದ ಸಹಾಯವನ್ನೂ, ಸರಂಜಾಮುಗಳನ್ನೂ ಪಡೆಯಬಹುದೆಂಬ ಬಗ್ಗೆ ಆತ ಮಾರ್ಗದರ್ಶನ ಮಾಡುತ್ತಾನೆ. ತನ್ನ ಸಹಾಯಕರನ್ನೂ ತರಬೇತಿ ಮಾಡಿಕೊಳ್ಳುತ್ತಾನೆ. ತನ್ನ ಮಾತಿನಲ್ಲಿ ವಿಶ್ವಾಸ ಬರುವಂತೆ ಎಲ್ಲರನ್ನೂ ಒಲಿಸಿಕೊಳ್ಳುತ್ತಾನೆ. ನಾನೇ ಒಂದು ಗಾಣವನ್ನು ಇಟ್ಟುಕೊಂಡು ಹಳ್ಳಿಯ ನಿವಾಸಿಯಾದರೆ ಕೇವಲ ಇನ್ನೊಬ್ಬ ಸಾಧಾರಣ

ಗಾಣಿಗನಾಗುವುದಿಲ್ಲ. ಬೇರೆಯಾದ ಒಬ್ಬ 'ಮಹಾತ್ಮ' ಗಾಣಿಗನೇ ಆದೇನು. ತಮಾಷೆಗಾಗಿ 'ಮಹಾತ್ಮ' ಎಂದೆ. ನನ್ನ ಅರ್ಥ ಹೀಗೆ; ಗಾಣಿಗನೇ ಆದರೂ ಒಬ್ಬ ಒಳ್ಳೆಯ ಮಾದರಿ ಗಾಣಿಗನಾದೇನು. ಇತರರು ನನ್ನ ಮಾದರಿಯನ್ನನುಸರಿಸಿಯಾರು. ಭಗವದ್ಗೀತೆ, ಕೊರಾನ್‌ಗಳಂತಹ ಧರ್ಮಗ್ರಂಥಗಳನ್ನು ಅಭ್ಯಾಸ ಮಾಡುತ್ತೇನೆ. ಮಕ್ಕಳಿಗೆ ಶಿಕ್ಷಣ ಕೊಡುವಷ್ಟು ವಿದ್ಯೆ ಕಲಿತಿರುತ್ತೇನೆ. ನನಗೆ ಹೆಚ್ಚು ಸಮಯವಿಲ್ಲದೆ ಶಿಕ್ಷಕನಾಗದಿರಬಹುದು. ಆದರೆ ಹಳ್ಳಿಗರು ಬಂದು ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸದ ಏರ್ಪಾಡು ಮಾಡಿಕೊಡಿ ಎಂದರೆ ಒಳ್ಳೆಯ ಒಬ್ಬ ಶಿಕ್ಷಕನನ್ನು ಹುಡುಕಿ ಕೊಡುತ್ತೇನೆ. "ನೀವೇ ಆತನ ವೆಚ್ಚವನ್ನು ಭರಿಸಬೇಕು" ಎಂದೇನು. ಹಳ್ಳಿಗರು ಸಂತೋಷದಿಂದಲೇ ಒಪ್ಪುತ್ತಾರೆ. ಹಾಗೆಯೇ ಗ್ರಾಮದಲ್ಲಿ ನೂಲುವುದನ್ನು ಹೇಳಿಕೊಡುತ್ತೇನೆ. ಚರಕದ ಶಿಕ್ಷಣ ನಾನೇ ಕೊಡುತ್ತೇನೆ. ನೂಲನ್ನು ಬಟ್ಟೆ ಮಾಡಲು ಒಬ್ಬ ನೇಯ್ಗೆಯವನನ್ನು ಗೊತ್ತುಮಾಡಿಯೇನು. ಅವನೂ ಶಿಕ್ಷಕನಂತೆ ಹಳ್ಳಿಯವರ ಸಹಕಾರ ಪಡೆದು ಜೀವಿಸುತ್ತಾನೆ. ಮಗ್ಗದ ಮೇಲೆ ನೇಯುವುದನ್ನೂ ಆತ ಇತರರಿಗೆ ಕಲಿಸುತ್ತಾನೆ. ಇನ್ನೂ ಹೆಚ್ಚು ಆಸಕ್ತಿ ವಹಿಸಿ ಗ್ರಾಮದ ಸ್ವಚ್ಛತೆ ಮತ್ತು ಆರೋಗ್ಯ ನಿಯಮಗಳ ಬಗ್ಗೆ ತಿಳುವಳಿಕೆ ಕೊಡುತ್ತೇನೆ. ಗುಡಿಸುವವರು ಬೇಕು ಎಂದರೆ ನಾನೇ ಮೊಟ್ಟ ಮೊದಲನೆಯ ಗುಡಿಸುವವನಾಗಿ ಇತರರಿಗೂ ಪ್ರೇರಣೆ ಕೊಡುತ್ತೇನೆ. ಇದು ಸಮಗ್ರ ಗ್ರಾಮಸೇವೆಯ ನನ್ನ ಕಲ್ಪನೆ.

(ಹರಿಜನ, 17-03-1946)

ರಾಷ್ಟ್ರೀಯ ಮಂತ್ರಿಮಂಡಲಗಳ ಕರ್ತವ್ಯ

ಈಗ ಕಾಂಗ್ರೆಸ್ ಮಂತ್ರಿಮಂಡಳಗಳು ಅಧಿಕಾರ ವಹಿಸಿಕೊಂಡಿರುವುದರಿಂದ (1936ರಲ್ಲಿ) ಖಾದಿ ಮತ್ತು ಗ್ರಾಮಕೈಗಾರಿಕೆಗಳಿಗೆ ಏನು ನೆರವು ನೀಡುತ್ತವೆ ಎಂದು

ನ್ಯಾಯವಾಗಿಯೇ ಕೇಳಬಹುದು. ಅದಕ್ಕಾಗಿ ಒಂದು ಪ್ರತ್ಯೇಕ ಸಚಿವಾಲಯವೇ ಇರಬಹುದು. ಇಲ್ಲದಿದ್ದರೂ ಒಂದು ಇಲಾಖೆ ಅಗತ್ಯ. ಈಗಿನ ಆಹಾರ ಮತ್ತು ಬಟ್ಟೆಯ ಅಭಾವದ ದಿನಗಳಲ್ಲಿ ಈ ಇಲಾಖೆ ನಿಜವಾಗಿಯೂ ಅಮೂಲ್ಯ ಸೇವೆ ಮಾಡಬಹುದು. ಅಖಿಲ ಭಾರತ ಚರಕ ಸಂಘ ಮತ್ತು ಗ್ರಾಮೋದ್ಯೋಗ ಸಂಘಗಳಲ್ಲಿ ನುರಿತ ತಜ್ಞರು ಈಗ ಈ ಮಂತ್ರಿಗಳಾಗಲು ಲಭ್ಯವಿದ್ದಾರೆ. ಅತ್ಯಂತ ಕಡಿಮೆ ಬಂಡವಾಳ ತೊಡಗಿಸಿ ಅತ್ಯಂತ ಕ್ಷಿಪ್ರವಾಗಿ ಇಡೀ ದೇಶಕ್ಕೆ ಬೇಕಾಗುವಷ್ಟು ಖಾದಿ ವಸ್ತ್ರಗಳನ್ನು ತಯಾರಿಸುವುದು ಖಂಡಿತ ಸಾಧ್ಯ. ತನ್ನ ಬಳಕೆಗಾಗಿ ತಾನೇ ಖಾದಿಬಟ್ಟೆ ತಯಾರಿಸಿಕೊಳ್ಳಲು ಗ್ರಾಮವಾಸಿಗಳಿಗೆಲ್ಲ ಪ್ರತಿಯೊಂದು ಪ್ರಾಂತೀಯ ಸರ್ಕಾರವೂ ತಿಳಿಸಬೇಕು. ಸ್ಥಳೀಯ ಉತ್ಪಾದನೆ ಮತ್ತು ವಿತರಣೆ ಇದರಿಂದ ಆಗುತ್ತದೆ. ಹೆಚ್ಚುವರಿ ಉತ್ಪಾದನೆ ಸ್ವಲ್ಪವಾದರೂ ಇರುತ್ತದೆ. ಇದು ಪಟ್ಟಣಗಳಿಗೆ ಸರಬರಾಜಾಗಿ ಗಿರಣಿಗಳ ಮೇಲಿನ ವಿಪರೀತ ಒತ್ತಡ ಕಡಿಮೆಯಾದೀತು. ಇತರ ದೇಶಗಳಿಗೆ ಈ ಗಿರಣಿ ಬಟ್ಟೆಗಳನ್ನು ರಫ್ತು ಮಾಡಲೂಬಹುದು.

ಈ ರೀತಿಯ ವ್ಯವಸ್ಥೆ ಹೇಗಾದೀತು?

ತಮ್ಮ ಹಳ್ಳಿಗಳ ಅವಶ್ಯಕತೆಗೆ ಬೇಕಾಗುವಷ್ಟು ಖಾದಿಯನ್ನು ಒಂದು ನಿರ್ದಿಷ್ಟ ತಾರೀಕಿನೊಳಗೆ ಹಳ್ಳಿಗರೇ ಒದಗಿಸಿಕೊಳ್ಳಬೇಕೆಂದೂ, ಆ ದಿನದ ನಂತರ ಹೊರಗಿನಿಂದ ಬಟ್ಟೆ ಸರಬರಾಜನ್ನು ನಿಲ್ಲಿಸಲಾಗುವುದೆಂದೂ ಸರ್ಕಾರ ಆಜ್ಞೆ ಹೊರಡಿಸಬೇಕು. ಸರ್ಕಾರವೇ ಹತ್ತಿಬೀಜವನ್ನು ಮೂಲ ಬೆಲೆಗೆ ಒದಗಿಸಬೇಕು, ಅಥವಾ ಅಗತ್ಯವಾದ ಕಡೆ ಅವರಿಗೆ ಬೇಕಾದಾಗ ಚರಕಗಳು ಮತ್ತು ಇತರ ಸರಂಜಾಮುಗಳನ್ನು ಉತ್ಪಾದನಾ ವೆಚ್ಚದ ಬೆಲೆಗೇ ಒದಗಿಸಬೇಕು. ಈ ಬೆಲೆಯನ್ನು ಸರ್ಕಾರ ಮುಂದೆ ಹಲವು ವರ್ಷಗಳ ಕಂತುಗಳಲ್ಲಿ ಹಿಂದಕ್ಕೆ ಪಡೆಯಬೇಕು.

ಎಲ್ಲೆಲ್ಲಿ ಅಗತ್ಯವೋ ಅಲ್ಲೆಲ್ಲ ತರಬೇತಿ ನೀಡುವ ಶಿಕ್ಷಕರನ್ನು ಸರ್ಕಾರವೇ ನೇಮಿಸಬೇಕು. ಹಳ್ಳಿಯವರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಂಡ ಮೇಲೆ ಉಳಿಯುವ ಬಟ್ಟೆಯ ದಾಸ್ತಾನನ್ನು ಸರ್ಕಾರ ಕೊಳ್ಳಲು ಬದ್ಧವಾಗಬೇಕು. ಈಗಿರುವ ಬಟ್ಟೆಯ ಅಭಾವ ಹೆಚ್ಚು ಪೆಟ್ಟವಿಲ್ಲದೆ ಸುಲಭವಾಗಿ ನೀಗಬಹುದು.

ಗ್ರಾಮಗಳಲ್ಲಿ ಸರ್ವೇಕ್ಷಣೆ ನಡೆಸಿ ಯಾವ ವಸ್ತುಗಳನ್ನು ಅಲ್ಲಿಯೇ ಸುಲಭವಾಗಿ ಉತ್ಪಾದಿಸಬಹುದೆಂದು ಒಂದು ಪಟ್ಟಿ ಸಿದ್ಧಮಾಡಬೇಕು. ದಿನ ಬಳಕೆಗೆ ಅಗತ್ಯವಾದ ಅಂಥ ವಸ್ತುಗಳು ಅತ್ಯಂತ ಕಡಿಮೆ ಅಥವಾ ಯಾವ ಹೊರಗಿನ ಸಹಾಯವನ್ನೂ ಯಾಚಿಸದೆ ಮಾಡುವಂತಿರಬೇಕು. ಹೊರಗೆ ಮಾರಾಟಕ್ಕೂ ಆಗುವಂತಿರಬೇಕು. ಉದಾಹರಣೆಗೆ ಗಾಣದ ಎಣ್ಣೆ, ಕೊಟ್ಟಣದ ಅಕ್ಕಿ, ತಾಳೆಬೆಲ್ಲ, ಜೇನುತುಪ್ಪ, ಆಟಿಕೆಗಳು, ಚಾಪೆಗಳು, ಕೈಕಾಗದ, ಗ್ರಾಮೀಣ ಸಾಬೂನು ಮುಂತಾದುವು.

ಸಾಕಷ್ಟು ಮುಂಜಾಗ್ರತೆ ವಹಿಸಿ ನಡೆಸುವುದಾದರೆ ಈ ಕೈಗಾರಿಕೆಗಳಿಂದ ಈಗ ನಾಶವಾಗುತ್ತಿರುವ ಹಳ್ಳಿಯ ಆರ್ಥಿಕ ವ್ಯವಸ್ಥೆ ಮತ್ತೆ ಜೀವಂತವಾಗುತ್ತದೆ. ಸತ್ತಿರುವ ಅಥವಾ ಸಾಯುವ ಸ್ಥಿತಿಗೆ ಬಂದಿರುವ ಹಳ್ಳಿಗಳು ಚೇತರಿಸಿಕೊಂಡು ಪ್ರಾಣ ಪಡೆದು ಚಟುವಟಿಕೆಗಳ ಜೇನುಗೂಡಾಗುತ್ತವೆ. ತಮ್ಮ ಜೀವನಕ್ಕೂ ನಗರ ಜೀವಿಗಳಿಗೂ ಜೀವನಾವಶ್ಯಕ ವಸ್ತುಗಳನ್ನು ಉತ್ಪಾದಿಸುವ ಭಾರತದ ಪ್ರಚಂಡ ಗ್ರಾಮಶಕ್ತಿ ಪ್ರಜ್ವಲಿಸಿ ನಿಲ್ಲುತ್ತದೆ, ಉಸಿರು ತುಂಬಿಕೊಳ್ಳುತ್ತದೆ.

ಅಪರಿಮಿತ ಗೋಸಂಪತ್ತು ಭಾರತದಲ್ಲಿರುವ ಮತ್ತೊಂದು ಶಕ್ತಿ. ಈಗ ಕ್ರೂರ ಅಸಡ್ಡೆಯಿಂದ ದನಗಳು ಕಂಗಾಲಾಗಿವೆ. ಗೋಸೇವಾ ಸಂಘ ಈ ಕ್ಷೇತ್ರದಲ್ಲಿ ಹೆಚ್ಚು ಅನುಭವವನ್ನು ಇನ್ನೂ ಗಳಿಸಿಕೊಂಡಿಲ್ಲ. ಆದರೂ ಅಮೂಲ್ಯ ಸಲಹೆಗಳನ್ನು ನೀಡಬಲ್ಲದು.

ಯಾವ ರೀತಿಯ ಶಿಕ್ಷಣ ವ್ಯವಸ್ಥೆಯೂ ಇಲ್ಲದೆ ನಮ್ಮ ಹಳ್ಳಿಗಳು ಮೂಲ ತಳಹದಿಯಾದ ವಿದ್ಯೆಯಿಂದ ವಂಚಿತವಾಗಿವೆ. ಈ ಕೊರತೆಯನ್ನು ಹಿಂದೂಸ್ತಾನಿ ತಾಲಿಮಿ ಸಂಘ ಪೂರೈಸಿ ಕೊಡಬಹುದು.

(ಹರಿಜನ, 28-04-1946)

ಗ್ರಾಮಗಳಲ್ಲಿ ಶಾಂತಿದಳಗಳು

ಕೆಲವು ದಿನಗಳ ಹಿಂದೆ ನನ್ನ ಸಲಹೆಯ ಮೇರೆಗೆ 'ಶಾಂತಿದಳ'ಗಳನ್ನು ರಚಿಸಲು ಪ್ರಯತ್ನ ಮಾಡಲಾಯಿತು. ಆದರೆ ಅದು ಮುಂದುವರೆಯಲಿಲ್ಲ. ಈ ಅನುಭವದಿಂದ ಒಂದು ಮಾತು ತಿಳಿಯಿತು. ಇಂಥಹ ಸಂಸ್ಥೆಗಳ ಸದಸ್ಯ ಸಂಖ್ಯೆ ಬಹಳ ಹೆಚ್ಚಾಗಿರಬಾರದು. ಅದರ ರೀತಿಯೇ ಹಾಗೆ. ಸಾಧಾರಣವಾಗಿ ದಂಡಶಕ್ತಿಯಿಂದ ಶಿಸ್ತನ್ನು ರೂಢಿಸುವ ಸ್ವಯಂಸೇವಕ ಸಂಸ್ಥೆಗಳು ಅಶಿಸ್ತಿನ ಸಂದರ್ಭಗಳಲ್ಲಿ ಹೆಚ್ಚಾಗಿ ಬಲಾತ್ಕಾರದ ದಂಡಶಕ್ತಿಯ ಪ್ರಯೋಗ ಮಾಡಬೇಕೆಂದು ಗ್ರಹಿಸುತ್ತವೆ. ಅಂಥ ಸಂಸ್ಥೆಗಳಲ್ಲಿ ಕಾರ್ಯಕರ್ತನ ಚಾರಿತ್ರ್ಯಕ್ಕೆ ಯಾವ ಪ್ರಾಶಸ್ತ್ಯವೂ ಇರುವುದಿಲ್ಲ. ಅವನಿಗೆ ಇರಬೇಕಾದುದು ದೇಹದಾರ್ಢ್ಯ ಮಾತ್ರ. ಆದರೆ ಅಹಿಂಸಾಪ್ರಧಾನ ದಳಗಳಲ್ಲಿ ಸೇವಕನ ಶೀಲ, ಅವನ ಆತ್ಮಶಕ್ತಿ ಎಲ್ಲಕ್ಕಿಂತ ಮುಖ್ಯ ಅರ್ಹತೆ. ಅಲ್ಲಿ ದೈಹಿಕ ಶಕ್ತಿ ಎರಡನೇ ಸ್ಥಾನ ಪಡೆದೀತು. ಇಂಥ ಮನುಷ್ಯರು ಸಿಗುವುದು ಸ್ವಲ್ಪ ಕಷ್ಟ. ಹೆಚ್ಚು ಸಂಖ್ಯೆಯಲ್ಲಿ ಸಿಗಲಾರರು. ಆದ್ದರಿಂದಲೇ ಅಹಿಂಸಕ ಶಾಂತಿದಳ ಚಿಕ್ಕದಾಗಿಯೇ ಇರಬೇಕು. ಆಗಲೇ ಅದು ದಕ್ಷವಾಗಿ ಕೆಲಸ ಮಾಡೀತು. ಇಂಥ ದಳಗಳು ದೇಶದಲ್ಲೆಲ್ಲ ಹರಡಿರಬೇಕು. ಪ್ರತಿ ಹಳ್ಳಿಗೆ ಪ್ರತಿ ಮೊಹಲ್ಲೆಗೆ ಒಂದು ಸಣ್ಣ ದಳ ಬೇಕು. ಕಾರ್ಯಕರ್ತರಿಗೆ ಪರಸ್ಪರ ನಿಕಟ ಪರಿಚಯವಿರಬೇಕು.

ಪ್ರತಿಯೊಂದು ದಳವೂ ತನ್ನ ನಾಯಕನನ್ನಾರಿಸಿಕೊಳ್ಳುತ್ತದೆ. ಎಲ್ಲ ಸದಸ್ಯರಿಗೂ ಸಮಾನ ಸ್ಥಾನ. ಆದರೆ ಒಂದೇ ಕೆಲಸದಲ್ಲಿ ಹಲವಾರು ಜನ ತೊಡಗಿದಾಗ ಒಬ್ಬ ನಾಯಕನ ಕಟ್ಟುಪಾಡಿಗೆ ಒಳಗಾಗಿ ಕೆಲಸ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಕೆಲಸ ಚೆನ್ನಾಗಿ ಆಗದು. ಎರಡು ಮೂರು ದಳಗಳು ಕೆಲಸ ಮಾಡುವ ಕಡೆ ನಾಯಕರು ಕಲೆತು ಎಲ್ಲರೂ ಒಪ್ಪುವ ದಾರಿಯನ್ನು ಒಟ್ಟಿಗೆ ತುಳಿಯಬೇಕು. ಆಗ ಮಾತ್ರವೇ ಯಶಸ್ಸು ದೊರೆತೀತು. ಹೀಗೆ ರಚನೆಯಾದ ಅಹಿಂಸಕ ಸೇವಾದಳ ಸಂಘರ್ಷಗಳನ್ನು ಸುಲಭವಾಗಿ ತಡೆಯಬಹುದು. ಈ ದಳಗಳಿಗೆ ಕುಸ್ತಿ ಅಖಾಡದ ಎಲ್ಲ ತರಬೇತಿಯೂ ಬೇಕಾಗುವುದಿಲ್ಲ. ಕೆಲವು ಮಾತ್ರ ಅಗತ್ಯವಾದೀತು.

ಸರ್ವರಿಗೂ ಸಮಾನವಾಗಿರಬೇಕಾದ ಒಂದು ಮುಖ್ಯ ಗುಣ ಈಶ್ವರನಲ್ಲಿ ಅಚಲವಾದ ನಂಬಿಕೆ. ಸರ್ವಶಕ್ತನಾದ ಭಗವಂತನೇ ನಮ್ಮ ಸಂಗಾತಿ. ಆತನೇ ನಿಜವಾದ ಕರ್ತೃ. ಅವನಲ್ಲಿ ವಿಶ್ವಾಸವಿಲ್ಲದೆ ಇಂಥ ಶಾಂತಿದಳಗಳು ಪ್ರಾಣಹೀನವಾಗಿಬಿಡುತ್ತವೆ. ದೇವರನ್ನು ಯಾವ ಹೆಸರಿನಿಂದ ಕರೆದರೂ ಸರಿ ಅವನ ಶಕ್ತಿವಿಶೇಷದಿಂದ ಮಾತ್ರವೇ ಮಾನವ ತನ್ನ ಕಾರ್ಯ ಮಾಡಬಲ್ಲ ಅನ್ಯಥಾ ಇಲ್ಲ. ಇದನ್ನರಿಯಬೇಕಾದುದು ಅಗತ್ಯ. ಅಂಥವನು ಎಂದೂ ಮತ್ತೊಬ್ಬರನ್ನು ಕೊಲ್ಲಲಾರ. ಅಗತ್ಯ ಬಂದರೆ ತಾನೇ ಮೃತ್ಯುವಿಗೆ ಬಲಿಯಾಗಿ ಆ ಬಲಿದಾನದ ವಿಜಯದಿಂದ ಅಮರನಾಗುತ್ತಾನೆ.

ಈ ದೈವನಿಯಮವನ್ನು ಸಾಕ್ಷಾತ್ಕರಿಸಿಕೊಂಡ ಮನುಷ್ಯನ ಮನಸ್ಸು ಎಂತಹ ಭಯಂಕರ ಪರಿಸ್ಥಿತಿಯಲ್ಲೂ ದಿಕ್ಕೆಡಲಾರದು. ಒಂದು ಅಚಲ ಜೀವಂತ ಆತ್ಮವಿಶ್ವಾಸ ಅವನಿಗಿರುತ್ತದೆ. ಸಹಜ ಸ್ಫೂರ್ತಿಯಿಂದ ಆತನಿಗೆ ಆ ಸನ್ನಿವೇಶದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಹೊಳೆಯುತ್ತದೆ.

ಆದರೂ ನನ್ನ ಅನುಭವದ ಹಿನ್ನೆಲೆಯಲ್ಲಿ ಕೆಲವು ಸೂಕ್ತ ನಿಯಮಗಳನ್ನೂ ಸಲಹೆ ಮಾಡುತ್ತೇನೆ.

1. ಸ್ವಯಂಸೇವಕ ಯಾವ ಆಯುಧವನ್ನೂ ಧರಿಸಬಾರದು.
2. ದಳದ ಪ್ರತಿಯೊಬ್ಬ ಸದಸ್ಯನನ್ನೂ ಸುಲಭವಾಗಿ ಗುರ್ತಿಸುವಂತಿರಬೇಕು.
3. ಪ್ರಥಮ ಚಿಕಿತ್ಸೆಗೆ ಬೇಕಾದ ಕಟ್ಟುಬಟ್ಟೆ (ಬ್ಯಾಂಡೇಜ್), ಕತ್ತರಿ, ಸೂಜಿ, ದಾರ, ಶಸ್ತ್ರಚಿಕಿತ್ಸೆಯ ಚಾಕು ಮುಂತಾದ ಸಲಕರಣೆಗಳನ್ನು ಪ್ರತಿಯೊಬ್ಬ ಸ್ವಯಂಸೇವಕನೂ ತನ್ನ ಬಳಿ ಇಟ್ಟುಕೊಂಡಿರಬೇಕು.
4. ಗಾಯಾಳುಗಳನ್ನು ಹೇಗೆ ಎತ್ತಬೇಕು, ಹೇಗೆ ಸಾಗಿಸಬೇಕೆಂದು ಆತನಿಗೆ ತಿಳಿದಿರಬೇಕು.
5. ಬೆಂಕಿ ಆರಿಸುವುದು, ಬೆಂಕಿ ಬಿದ್ದಿರುವ ಸ್ಥಳಕ್ಕೆ ಸುರಕ್ಷಿತವಾಗಿ ಪ್ರವೇಶಿಸುವುದು, ಮೇಲಕ್ಕೆ ಹತ್ತಿ ಸಿಕ್ಕಿಕೊಂಡಿರುವವರನ್ನು ರಕ್ಷಿಸುವುದು, ಅವರನ್ನು ಅಗತ್ಯವಾದರೆ ಹೊತ್ತುಕೊಂಡೋ ಅಥವಾ ಇಲ್ಲದೆಯೋ ಸುರಕ್ಷಿತವಾಗಿ ಮೇಲಿನಿಂದ ಇಳಿಯುವುದು ಮುಂತಾದ ಕೆಲಸಗಳನ್ನು ಕಲಿತಿರಬೇಕು.
6. ತನ್ನ ಊರಿನ ಎಲ್ಲ ಜನರ ಪರಿಚಯವನ್ನು ನಿಕಟವಾಗಿ ಮಾಡಿಕೊಂಡಿರಬೇಕು. ಇದೇ ಒಂದು ದೊಡ್ಡ ಸೇವಾಕಾರ್ಯವಾದೀತು.
7. ಹೃದಯದಲ್ಲಿ ಸತತವಾಗಿ ದೇವರನಾಮ ಜಪಿಸುತ್ತಿರಬೇಕು. ನಂಬಿದವರೆಲ್ಲರೂ ಅದನ್ನನುಸರಿಸುವಂತೆ ಒಲಿಸಿಕೊಳ್ಳಬೇಕು.

ಕೇವಲ ಗಿಳಿಪಾಠದಂತೆ ಯಾಂತ್ರಿಕವಾಗಿ ಕೆಲವರು ದೇವನಾಮವನ್ನು ಜಪಿಸುತ್ತಾ ಅದರ ಫಲವನ್ನು ಬಯಸುತ್ತಾರೆ. ಇಂಥ ಮೂಢತನದ ಜಪ ಅಸತ್ಯವೆಂದರಿತು ಅದನ್ನು

ದೂರಮಾಡುವಂತಹ ಸತ್ಯನಿಷ್ಠ ಜೀವಂತ ನಂಬಿಕೆಯನ್ನು ನಿಜವಾದ ಸಾಧಕನಾದವನು ಬೆಳೆಸಿಕೊಳ್ಳಬೇಕು. ಅಷ್ಟೇ ಅಲ್ಲ, ಇತರರಲ್ಲೂ ಗಳಿಪಾಠದ ಮೂಢನಂಬಿಕೆಗಳು ಅಳಿಸಿಹೋಗುವಂತೆ ಪ್ರಯತ್ನಿಸಬೇಕು.

(ಹರಿಜನ, 05-05-1946)

ಗ್ರಾಮ ಸ್ವಚ್ಛತೆ

ಗ್ರಾಮದ ಕೆರೆ, ಕಟ್ಟೆಗಳು, ಬಾವಿಗಳು ಮುಂತಾದ ನೀರಿನ ಆಸರೆಗಳನ್ನು ಆಗಾಗ್ಗೆ ಸ್ವಚ್ಛಮಾಡಿ ಸುತ್ತಲಿನ ಕಸದ ಗುಂಡಿಗಳನ್ನು ತೆಗೆದು ನಿರ್ಮಲವಾಗಿಡುವುದು ಅಗತ್ಯ. ಈ ಕೆಲಸ ಮಾಡಲು ತಾವೇ ಮುಂದಾಗಿ ಸ್ವಯಂಸೇವಕರು ಸಂಬಳದ ನೌಕರರಂತೆ ಪ್ರಾರಂಭಿಸಿಬಿಡಬೇಕು. ದಿನದಿನವೂ ಅದು ನಡೆಯುತ್ತ ಗ್ರಾಮಸ್ಥರೂ ತಮ್ಮೊಡನೆ ಸೇರಿಕೊಳ್ಳಲು ಪ್ರೋತ್ಸಾಹಿಸಿದರೆ ಕ್ರಮೇಣ ಅವರೇ ಗ್ರಾಮನೈರ್ಮಲ್ಯ ಕಾರ್ಯ ಮಾಡಿಕೊಳ್ಳುತ್ತಾರೆಂಬುದರಲ್ಲಿ ಸಂದೇಹವಿಲ್ಲ.

ಬೀದಿಯಲ್ಲಿನ ಕಸ ಗುಡಿಸಿಹಾಕಬೇಕು. ಅದನ್ನು ವಿಂಗಡಿಸಿಕೊಳ್ಳಬೇಕು. ಅವುಗಳಿಂದ ಒಳ್ಳೆಯ ಗೊಬ್ಬರವಾದೀತು. ಕೆಲವನ್ನು ಬೇರೆ ಉಪಯುಕ್ತ ವಸ್ತುಗಳನ್ನಾಗಿ ಪರಿವರ್ತಿಸಬಹುದು. ಮಿಕ್ಕದ್ದನ್ನು ಹೂಳಬೇಕು. ಮೂಳೆಯ ಚೂರುಗಳಿಂದ ಅನೇಕ ವಸ್ತುಗಳನ್ನು ತಯಾರಿಸುವುದು ಸಾಧ್ಯ. ಅಥವಾ ಅದನ್ನು ಪುಡಿಮಾಡಿದರೆ ಸೊಗಸಾದ ಗೊಬ್ಬರವಾದೀತು. ಬಟ್ಟೆಯ ಮತ್ತು ಕಾಗದದ ಚೂರುಗಳು ಹೊಸ ಕಾಗದಕ್ಕೆ ಕಚ್ಚಾವಸ್ತುಗಳಾಗುತ್ತವೆ. ವಿಸರ್ಜಿತ ಮಲದಿಂದ ಗೊಬ್ಬರವಾದೀತು. ಗಟ್ಟಿಯಾದ ಮತ್ತು ನೀರಾದ ಮಲವನ್ನು ಮಣ್ಣಿನೊಡನೆ ಚೆನ್ನಾಗಿ ಬೆರಸಿ ಒಂದಡಿಯಷ್ಟು ಗುಂಡಿಯಲ್ಲಿ ಮುಚ್ಚಿಡಬೇಕು. ಡಾ॥ ಪೂರೆ ಅವರು ವೈಜ್ಞಾನಿಕವಾಗಿ ಸಂಶೋಧಿಸಿ ಇದನ್ನು ಹೇಳಿದ್ದಾರೆಂದು ನೆನಪಿದೆ. ಮೇಲೆ ಹಾಕಿದ

ಮಣ್ಣಿನಲ್ಲಿ ಸೇರಿದ ಸಣ್ಣ ಜೀವಾಣುಗಳು ಬೆಳಕು ಮತ್ತು ಗಾಳಿಗಳೊಡನೆ ಪ್ರತಿಕ್ರಿಯಿಸಿ ಒಂದು ವಾರದಲ್ಲಿ ಸುವರ್ಣ ಗೊಬ್ಬರವಾಗುತ್ತದೆ. ವಾಸನೆಯೂ ಇರುವುದಿಲ್ಲ. ಹಳ್ಳಿಗರೇ ಈ ಪ್ರಯೋಗ ಮಾಡಿ ನೋಡಬಹುದು. ಇದಕ್ಕಾಗಿ ಸರಿಯಾದ ಕಕ್ಕಸುಗಳಿರಬೇಕು. ಪಾತ್ರೆಗಳಲ್ಲಿ ಮಲ ಶೇಖರಿಸಬಹುದು ಅಥವಾ ನೆಲದಲ್ಲಿ ಗುಂಡಿ ಮಾಡಿ ಅದರ ಸುತ್ತಲೂ ಮರೆಕಟ್ಟಿ ಮಣ್ಣು ತುಂಬುತ್ತಾ ಆ ಮರೆಯನ್ನು ಬೇರೆ ಬೇರೆ ಜಾಗಕ್ಕೆ ನೂಕುವಂತಿರಬಹುದು. ಇವನ್ನು ಸಂಚಾರೀ ಕಕ್ಕಸುಗಳೆನ್ನಬಹುದು. ಕೊನೆಗೆ ತಮ್ಮ ತಮ್ಮ ಜಮೀನುಗಳಲ್ಲೇ ಗುಂಡಿಗಳನ್ನು ತೋಡುತ್ತಾ ವಿಸರ್ಜಿತ ಮಲವನ್ನು ದಿನವೂ ಮಣ್ಣಿನಿಂದ ಮುಚ್ಚುತ್ತಿರಬಹುದು. ಸಮುದಾಯದ ಕಕ್ಕಸುಗಳನ್ನೂ ನಿರ್ಮಿಸಿಕೊಳ್ಳಬಹುದು. ಗ್ರಾಮವಾಸಿಗಳ ಸಹಕಾರದಿಂದ ಮಾತ್ರವೇ ಇದು ಕಾರ್ಯಗತವಾದೀತು. ಈ ಬಗ್ಗೆ ಉತ್ಸಾಹವಿರುವ ಒಬ್ಬರಾದರೂ ಮಾಡಬಹುದು. ಮಲವನ್ನು ಒಳ್ಳೇ ಸಂಪತ್ತನ್ನಾಗಿ ಪರಿವರ್ತಿಸಬಹುದು. ಈಗ ಇಂಥ ಒಳ್ಳೆಯ ಗೊಬ್ಬರ ನಾಶವಾಗಿ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿದೆ. ಅದೂ ಅಲ್ಲದೆ ಸುತ್ತಲೂ ದುರ್ನಾತವನ್ನು ದಿನವೂ ಹರಡುತ್ತಾ ನಾನಾ ರೋಗಗಳಿಗೂ ಕಾರಣವಾಗಿದೆ.

ಕೆರೆಗಳನ್ನು ಬಳಸಿಕೊಳ್ಳುತ್ತಿರುವ ರೀತಿಯೂ ಹೊಲಸನ್ನು ಹೆಚ್ಚಿಸುತ್ತದೆ. ಸ್ನಾನ, ಬಟ್ಟೆ ಒಗೆಯುವುದು, ಕುಡಿಯುವುದು, ಅಡಿಗೆ ಮಾಡುವುದು ಎಲ್ಲವೂ ಸಣ್ಣ ಕಟ್ಟೆಗಳ ಶೇಖರಣೆಯಲ್ಲೇ ನಡೆದಿರುತ್ತದೆ. ದನಗಳಿಗೂ ಅದೇ ನೀರು. ಎಮ್ಮೆಗಳು ಆರಾಮವಾಗಿ ಅದರೊಳಗೆ ಬಿದ್ದುಕೊಂಡಿರುತ್ತವೆ. ಇಷ್ಟು ವಿಧವಾದ ಹೊಲಸು ತುಂಬುತ್ತಿದ್ದರೂ ನಮ್ಮ ಹಳ್ಳಿಗಳು ಸಾಂಕ್ರಾಮಿಕ ರೋಗಗಳಿಂದ ಸಂಪೂರ್ಣವಾಗಿ ನಾಶವಾಗದಿರುವುದೇ ಒಂದು ಆಶ್ಚರ್ಯ. ವೈದ್ಯರು ಹೇಳುವಂತೆ ಸುರಕ್ಷಿತ ಕುಡಿಯುವ ನೀರಿನ ಸರಬರಾಜಿಲ್ಲದುದರಿಂದಲೇ ಹಳ್ಳಿಗರು ಅನೇಕ ರೋಗಗಳಿಂದ ನರಳುತ್ತಾರೆ.

ಈ ಗ್ರಾಮಸೇವೆ ಅತ್ಯಂತ ಉತ್ಸಾಹಯುತ ಆಸಕ್ತಿ ಕೆರಳಿಸುವಂತಹ ಕಾರ್ಯ ಎನ್ನುವುದು ಸ್ಪಷ್ಟ. ಅಲ್ಲದೆ ಭಾರತದ ಅಸಂಖ್ಯಾತ ಜನಕೋಟಿ ಸಂಕಷ್ಟಗಳಿಗೆ ತುತ್ತಾಗಿರುವಾಗ ಅವರಿಗೆ ಅಮೂಲ್ಯ ಲಾಭವಾಗುವಂತೆ ಮಾಡುತ್ತದೆ. ಈ ಕಾರ್ಯ ಕೈಗೊಳ್ಳುವ ವಿಧಾನಗಳನ್ನು ನಾನು ವಿವರಿಸಿದ್ದೇನೆ. ಅದರಲ್ಲಿ ಒಂದು ವಿಷಯ ಸ್ಪಷ್ಟವಾಗಿದೆ ಎಂದು ತಿಳಿದಿದ್ದೇನೆ. ತಮ್ಮ ಲೇಖನಿಗಳನ್ನೂ ಸೀಸದಕಡ್ಡಿಗಳನ್ನೂ ಎಷ್ಟು ಸುಗಮವಾಗಿ ಯಾವ ಹೆಮ್ಮೆಯಿಂದ ಬಳಸುತ್ತಾರೆಯೋ ಅದೇ ರೀತಿಯಾಗಿ ಕಸಬರಿಕೆಯನ್ನೂ ಗುದ್ದಲಿಯನ್ನೂ ಬಳಸಲು ಹೆಮ್ಮೆಪಡುವ, ಆತ್ಮಸಂತೋಷದಿಂದ ಕರ್ತವ್ಯನಿಷ್ಠರಾಗುವ ಕಾರ್ಯಕರ್ತರು ದೊರೆಯುವುದಾದರೆ, ಯಾವ ವೆಚ್ಚವೂ ಬೇಕಾಗಲಾರದು. ಒಂದು ಪೊರಕೆ, ಒಂದು ಬುಟ್ಟಿ, ಒಂದು ಗುದ್ದಲಿ, ಒಂದು ಪಿಕಾಶಿ ಮತ್ತು ಬಹುಶಃ ಸ್ವಲ್ಪ ಕ್ರಿಮಿನಾಶಕ ಔಷಧಿಗಳು ಇಷ್ಟಾದರೆ ಆಯಿತು. ಒಣಬೂದಿ ಬಹುಶಃ ವೆಚ್ಚವಿಲ್ಲದ ಕ್ರಿಮಿನಾಶಕವಾಗಬಹುದು. ರಸಾಯನ ಶಾಸ್ತ್ರಜ್ಞರು ಈ ಬಗ್ಗೆ ನೆರವು ನೀಡಿ ಹಳ್ಳಿಯ ಜನ ತಮ್ಮ ಪರಿಸರದಲ್ಲೇ ಅಗ್ಗವಾಗಿ ತಯಾರಿಸಿಕೊಂಡು ಬಳಸಬಹುದಾದ ಔಷಧಿಗಳ ಬಗ್ಗೆ ಔದಾರ್ಯದಿಂದ ತಿಳಿಹೇಳಬೇಕು.

ದೈಹಿಕ ಚಿಕಿತ್ಸೆ

ಶರೀರ ನೈರ್ಮಲ್ಯ, ಮನೆಯ ಮತ್ತು ಹಳ್ಳಿಯ ಸ್ವಚ್ಛತೆಗಳನ್ನು ನಿಯಮಿತವಾಗಿ ಅಭ್ಯಾಸಮಾಡಿ ಆಹಾರ ಮತ್ತು ವ್ಯಾಯಾಮಗಳನ್ನು ಎಚ್ಚರಿಕೆಯಿಂದ ನಿಯಂತ್ರಿಸಿಕೊಂಡಲ್ಲಿ ಯಾವ ರೋಗಗಳಿಗೂ ಬಲಿಯಾಗಬೇಕಾಗಿಲ್ಲ ಎಂದೇ ನನ್ನ ಖಚಿತ ನಂಬಿಕೆ. ಆಂತರಿಕ ಮತ್ತು ಬಾಹ್ಯಶುದ್ಧಿ ಎಲ್ಲಿ ಸಹಜವಾಗುತ್ತದೆಯೋ ಅಲ್ಲಿ ಯಾವ ಖಾಯಿಲೆಯೂ ಬರಲಾರದು. ಹಳ್ಳಿಯ ಜನಕ್ಕೆ ಇದು ಮನದಟ್ಟಾದರೆ ಡಾಕ್ಟರುಗಳಾಗಲೀ ಹಕೀಮರಾಗಲೀ ವೈದ್ಯರಾಗಲೀ ಬೇಕಾಗುವುದೇ ಇಲ್ಲ.

(ಹರಿಜನ, 26–05–1946)

ಪ್ರಕೃತಿ ಚಿಕಿತ್ಸೆ

ಅತ್ಯಂತ ಸರಳ ಅತ್ಯಂತ ಅಗ್ಗವಾಗಿರಬೇಕು ಪ್ರಕೃತಿ ಚಿಕಿತ್ಸೆ. ಹಳ್ಳಿಗಳಲ್ಲಿ ಚಿಕಿತ್ಸೆ ಮಾಡಲು ಸಾಧ್ಯವಾಗಬೇಕೆಂಬುದೇ ಗುರಿ. ಸಾಧನಗಳು ಸಲಕರಣೆಗಳನ್ನೆಲ್ಲ ಹಳ್ಳಿಯವರು ಒದಗಿಸಿ-ಕೊಳ್ಳುವಂತಿರಬೇಕು, ಅಲ್ಲಿ ದೊರೆಯದಿದ್ದುದನ್ನು ಮಾತ್ರ ಹೊರಗಿನಿಂದ ತರಬೇಕು. ಸಮಗ್ರ ಜೀವನದೃಷ್ಟಿ ಹೆಚ್ಚು ಆರೋಗ್ಯದ ಕಡೆಗೆ ಪರಿವರ್ತಿತವಾಗಬೇಕೆನ್ನುವುದು ಪ್ರಕೃತಿ ಚಿಕಿತ್ಸೆಯ ಉದ್ದೇಶ. ಆರೋಗ್ಯ ನಿಯಮಗಳಿಗೆ ಅನುಗುಣವಾಗಿ ಜೀವನವೆಲ್ಲ ನಿಯಂತ್ರಿತವಾಗಿರಬೇಕು. ಉಚಿತವಾಗಿಯೋ ಹಣ ಕೊಟ್ಟೋ ಆಸ್ಪತ್ರೆಗಳಿಂದ ಔಷಧೋಪಚಾರ ಪಡೆಯುವುದಲ್ಲ ಗುರಿ. ಉಚಿತ ಚಿಕಿತ್ಸೆ ಎಂದರೆ ಇನ್ನೊಬ್ಬರ ಔದಾರ್ಯಕ್ಕೆ ಕೈಚಾಚಬೇಕು. ಪ್ರಕೃತಿ ಚಿಕಿತ್ಸೆಯನ್ನಂಗೀಕರಿಸಿದವನು ಭಿಕ್ಷೆ ಬೇಡಲಾರ. ಸ್ವಸಹಾಯದಿಂದ ಆತ್ಮಗೌರವ ಹೆಚ್ಚೀತು. ತನ್ನ ದೇಹದಿಂದ ವಿಷಪದಾರ್ಥಗಳನ್ನು ಹೊರಕ್ಕೆ ಹಾಕಿ ಮುಂದೆ ಖಾಯಿಲೆ ಬೀಳದಂತೆ ಎಚ್ಚರವಹಿಸುವುದು ಪ್ರಕೃತಿ ಚಿಕಿತ್ಸೆಯ ರೀತಿ.

ಪುಷ್ಟಿಕರವಾದ ಮತ್ತು ಸಮತೋಲನದ ಆಹಾರ ಸೇವನೆ ಅಗತ್ಯ. ಈಗ ಹಳ್ಳಿಗರೂ ನಮ್ಮಂತೆಯೇ ದಿವಾಳಿಯಾಗಿದ್ದಾರೆ. ಹಳ್ಳಿಯಲ್ಲಿಯೇ ಸಾಕಷ್ಟು ತರಕಾರಿ ಹಣ್ಣುಗಳು ಮತ್ತು ಹಾಲು ಉತ್ಪಾದನೆ ಮಾಡುವುದೂ ಪ್ರಕೃತಿ ಚಿಕಿತ್ಸೆಯ ಯೋಜನೆಯ ಭಾಗ. ಇದಕ್ಕಾಗಿ ವಿನಿಯೋಗಿಸುವ ಕಾಲ ವ್ಯರ್ಥವಲ್ಲ. ಎಲ್ಲ ಹಳ್ಳಿಗಳಿಗೂ ಇದು ಲಾಭದಾಯಕ. ಹಾಗೆಯೇ ದೇಶಕ್ಕೂ ಒಳ್ಳೆಯದು.

(ಹರಿಜನ, 02-06-1946)

ಸ್ವತಂತ್ರ ಭಾರತದಲ್ಲಿ ಗ್ರಾಮಪಂಚಾಯಿತಿಗಳು

ಸ್ವಾತಂತ್ರ್ಯ ಎಂದರೆ ಭಾರತದ ಜನತೆಯ ಸ್ವಾತಂತ್ರ್ಯ. ಈಗ ಆಳುತ್ತಿರುವ ವರ್ಗದವರ ಸ್ವಾತಂತ್ರ್ಯ ಎಂದಾಗಬಾರದು. ಈಗ ದಾಸ್ಯದಲ್ಲಿರುವ ಜನತೆಯ ಇಚ್ಛೆಯ ಬಲದಿಂದಲೇ ಆಡಳಿತಗಾರರು ಅಧಿಕಾರ ನಡೆಸಬೇಕು. ಅವರು ಜನರ ಸೇವಕರಾಗಿರಬೇಕಾಗುತ್ತದೆ. ಅವರ ಇಚ್ಛೆಗಳನ್ನು ನೆರವೇರಿಸಲು ಸದಾ ಸಿದ್ಧರಾಗಿರಬೇಕು.

ತಳಹದಿಯಿಂದ ಪ್ರಾರಂಭವಾಗಬೇಕು ಸ್ವಾತಂತ್ರ್ಯ. ಆಗ ಪೂರ್ಣ ಅಧಿಕಾರವುಳ್ಳ ಪಂಚಾಯಿತಿಯ ಗಣರಾಜ್ಯವಾಗುತ್ತದೆ ಪ್ರತಿಯೊಂದು ಹಳ್ಳಿ. ಆದ್ದರಿಂದ ಪ್ರತಿ ಗ್ರಾಮವೂ ಸ್ವಂತ ಸಾಮರ್ಥ್ಯ ಪಡೆಯಬೇಕಾಗುತ್ತದೆ. ತನ್ನ ವ್ಯವಹಾರಗಳನ್ನೆಲ್ಲ ತಾನೇ ನಿರ್ವಹಿಸುತ್ತ ಇಡೀ ಪ್ರಪಂಚದೆದುರು ತನ್ನ ರಕ್ಷಣೆ ಮಾಡಿಕೊಳ್ಳುವ ಶಕ್ತಿ ಗಳಿಸುತ್ತದೆ. ಹೊರಗಿನಿಂದ ತನ್ನ ಮೇಲೆ ಎರಗಿ ಬರುವ ಯಾವುದೇ ಧಾಳಿಯನ್ನೆದುರಿಸಿ ನಿಂತು ರಕ್ಷಿಸಿಕೊಳ್ಳುವ ಸಾಮರ್ಥ್ಯಗಳನ್ನು ಪಡೆದು ಎಲ್ಲ ಬಲಿದಾನಕ್ಕೂ ಸಿದ್ಧವಾಗುತ್ತದೆ. ಈ ವ್ಯವಸ್ಥೆಯ ಮೂಲ ಬಿಂದು ಮಾನವ. ಹೀಗೆಂದ ಮಾತ್ರಕ್ಕೆ ನೆರೆಹೊರೆಯವರ ಅಥವಾ ಸುತ್ತಲಿನ ವಿಶ್ವದ ಸ್ನೇಹಪೂರ್ಣ ಸಹಕಾರದ ಅವಲಂಬನೆಯನ್ನು ತ್ಯಜಿಸಬೇಕೆಂದು ಅರ್ಥವಲ್ಲ. ಸ್ವಯಂಪ್ರೇರಿತ ಪಾರಸ್ಪರಿಕ ಶಕ್ತಿಗಳ ಮುಕ್ತಕ್ರಿಯೆ ಯಾವಾಗಲೂ ಪಸರಿಸುತ್ತಲೇ ಇರುತ್ತದೆ. ಇಂಥ ಸಮಾಜ ಅತ್ಯುತ್ತಮ ಸಂಸ್ಕೃತಿಯ ತಳಹದಿಯನ್ನು ಅಗತ್ಯವಾಗಿ ಹೊಂದಿರುತ್ತದೆ. ಪ್ರತಿ ವ್ಯಕ್ತಿಯೂ ತನ್ನ ಅವಶ್ಯಕತೆಗಳನ್ನರಿತಿರುತ್ತಾನೆ. ಸಾಮಾನ್ಯ ಶ್ರಮಕ್ಕೆ ಇತರರಿಗೆ ದೊರೆಯಲಾರದ ಯಾವ ಅನುಕೂಲಗಳನ್ನೂ ಅವನು ಬಯಸುವುದೇ ಇಲ್ಲ.

ಇಂಥ ಸಮಾಜಕ್ಕೆ ಸತ್ಯ ಅಹಿಂಸೆಗಳೇ ಅಡಿಗಲ್ಲುಗಳು. ಈ ಗುಣಗಳು ಭಗವಂತನಲ್ಲಿ ನಾವಿಡುವ ಗಾಢನಂಬಿಕೆಯಿಂದ ಹೊರಹೊಮ್ಮುತ್ತವೆ ಎಂದು ನನ್ನ ಮತ. ದೇವರು ಅಂದರೆ ನಮಗೆ

ತಿಳಿದಿರುವ ಸಮಸ್ತ ಶಕ್ತಿ ವಿಶೇಷಗಳನ್ನೂ ಒಳಗೊಂಡಿರುವ ಸ್ವಯಂಭೂಯಿಷ್ಠವಾದ ಸರ್ವಸಾಕ್ಷಿಯಾದ ಜೀವಂತ ಶಕ್ತಿ. ಅವಿನಾಶಿಯಾದ ಈ ಶಕ್ತಿ ನಮ್ಮ ಸುತ್ತಲಿನ ಸರ್ವವೂ ನಾಶವಾಗುತ್ತಿದ್ದರೂ ಅನಂತವಾಗಿ ಅಚಲವಾಗಿ ನಿಂತಿರುತ್ತದೆ. ಈ ಸರ್ವವ್ಯಾಪಕ ಜೀವಂತ ಶಕ್ತಿಯಲ್ಲಿ ನಂಬಿಕೆಯಿಲ್ಲದೆ ನನ್ನ ಬದುಕಿನ ಅರ್ಥವನ್ನು ನಾನು ವಿವರಿಸಲಾರೆ.

ಹೀಗೆ ಅಸಂಖ್ಯಾತ ಹಳ್ಳಿಗಳನ್ನೊಳಗೊಂಡ ಈ ರಚನೆ ವಿಸ್ತಾರವಾಗಿ ಹರಡುವ ವೃತ್ತಗಳಂತೆ ಇರುತ್ತದೆ. ಒಂದರ ಮೇಲೊಂದು ಇಟ್ಟಂತಲ್ಲ. ಪಿರಮಿಡ್ಡಿನಂತೆ ಒಂದು ಉದ್ದದ ತಳದ ಮೇಲೆ ಎದ್ದು ನಿಲ್ಲುವ ಶಿಖರದಂತೆ ಇಲ್ಲಿ ಜೀವನರಚನೆ ಇರುವುದಿಲ್ಲ. ಸಾಗರದ ಅಲೆಗಳಂತೆ ಸಮಾನಾಂತರ ವೃತ್ತಗಳಂತಿರುತ್ತದೆ. ಅದರ ಕೇಂದ್ರ ಬಿಂದು ಬಿಡಿ ವ್ಯಕ್ತಿ. ಆತ ಅಥವಾ ಅವಳು ತನ್ನ ಗ್ರಾಮದ ಒಳಿತಿಗಾಗಿ ಮಡಿಯಲೂ ಸಿದ್ಧ. ಹಾಗೆಯೇ ಒಂದು ಗ್ರಾಮ ತನ್ನ ಸುತ್ತಲಿನ ಗ್ರಾಮ ಸಮುದಾಯಕ್ಕಾಗಿ, ಆ ಸಮುದಾಯ ದೇಶಕ್ಕಾಗಿ ಸರ್ವತ್ಯಾಗಕ್ಕೂ ಸಿದ್ಧ. ಕೊನೆಗೆ ಜೀವನವೆಲ್ಲವೂ ಒಂದು ಪೂರ್ಣತೆಯ ಸಿದ್ಧಿಗಾಗಿ ಸ್ವಾರ್ಥವನ್ನು ಅಳಿಸಿ ಬಲಿದಾನಕ್ಕೆ ಸಿದ್ಧವಾಗಿರುತ್ತದೆ. ಸದಾ ವಿನಿಮ್ರರಾಗಿ ಯಾವ ಆಕ್ರಮಣವನ್ನೂ ಮಾಡದಿರುವ ಅಹಂಕಾರರಹಿತ ಮಾನವರು ಈ ಮಹಾ ಸಾಗರ ಸ್ವರೂಪದ ಗಾಂಭೀರ್ಯದಲ್ಲಿ ಪಾಲುಗೊಂಡಿರುತ್ತಾರೆ. ಆದುದರಿಂದ ಹೊರಗಿನ ವೃತ್ತಗಳು ಒಳಗಿನದನ್ನು ತುಳಿಯಲು ಅಧಿಕಾರ ಬಳಸುವುದಿಲ್ಲ. ಬದಲಾಗಿ ತಾನು ಅದಕ್ಕೆ ಶಕ್ತಿ ನೀಡಿ ತಾನೂ ಅದರಿಂದಲೇ ಶಕ್ತಿ ಪಡೆಯುತ್ತದೆ. ಭಾರತದ ಪ್ರತಿಯೊಂದು ಹಳ್ಳಿ ಎಂದಾದರೊಂದು ದಿನ ಪ್ರಜಾರಾಜ್ಯದ ಅಡಿಗಲ್ಲಾಗಲು ನನ್ನ ಕಲ್ಪನೆಯ ಈ ಚಿತ್ರವೇ ಸೂಕ್ತ ಎನಿಸುತ್ತದೆ. ಇದರಲ್ಲಿ ಮೇಲು-ಕೀಳು, ಪ್ರಥಮ-ಅಂತಿಮ ಇಂತಹ ಪ್ರಭೇದಗಳಿರದು. ಎಲ್ಲವೂ ಸಮಾನ. ಎಲ್ಲ ಪ್ರಜೆಗಳಿಗೂ ಸಮಾನ ಗೌರವ.

ಈ ಕಲ್ಪನೆ ಕೇವಲ ಆದರ್ಶಸ್ವಪ್ನ ಎಂದು ನನ್ನನ್ನು ಮೂದಲಿಸಬಹುದು. ರೇಖಾಗಣಿತದಲ್ಲಿ ಯೂಕ್ಲಿಡ್ಡನ ಬಿಂದು ಯಾವ ಮಾನವ ಪ್ರಯತ್ನದಿಂದಲೂ ಬರೆದು ತೋರಿಸಲು ಬರುವುದಿಲ್ಲ. ಆದರೆ ಅವಕ್ಕೆ ಅಮೂಲ್ಯ ಸ್ಥಾನವಿದೆ. ಹಾಗೆಯೇ ಈ ನನ್ನ ಚಿತ್ರ ಮಾನವ ಕುಟುಂಬ ಬದುಕಿ ಬಾಳಲು ಇದಕ್ಕೆ ಬೆಲೆಯುಂಟು. ಅದನ್ನು ಪೂರ್ಣವಾಗಿ ಸಾಧಿಸದೇ ಹೋದರೂ ಭಾರತ ಈ ಆದರ್ಶಕ್ಕಾಗಿ ಬದುಕಲಿ ನಾವು ಪ್ರಯತ್ನ ಮಾಡುವ ಮುನ್ನ ನಮ್ಮ ಆಕಾಂಕ್ಷೆಯ ಒಂದು ಪೂರ್ಣ ಚಿತ್ರ ಕಣ್ಣ ಮುಂದೆ ಇರುವುದು ಅತ್ಯಗತ್ಯ.

ಈ ಆದರ್ಶರಾಜ್ಯದಲ್ಲಿ ಸರ್ವಧರ್ಮಗಳಿಗೂ ಸಮಾನವಾದ ಉಚಿತ ಸ್ಥಾನವುಂಟು. ಆಳವಾಗಿ ಬೇರುಬಿಟ್ಟು ಈ ಭೂಮಿಯಲ್ಲಿ ತಲೆಯೆತ್ತಿ ನಿಂತ ಬೃಹದ್‌ವೃಕ್ಷದ ಪ್ರಬಲವಾದ ಕೊಂಬೆಗಳ ಮೇಲಿನ ಎಲೆಗಳು ನಾವು. ಯಾವ ಬಿರುಗಾಳಿಯೂ ಇದನ್ನು ಅಲ್ಲಾಡಿಸುವುದು ಅಸಾಧ್ಯ.

ಗ್ರಾಮರಾಜ್ಯದಲ್ಲಿ ಕೇವಲ ಕೆಲವರ ಕೈಯಲ್ಲಿ ಕೇಂದ್ರಿತ ಅಧಿಕಾರ ನೀಡುವಂತಹ ಮತ್ತು ಮಾನವ ಪರಿಶ್ರಮವನ್ನು ನಿರ್ಮೂಲ ಮಾಡುವ ಯಂತ್ರಗಳಿಗೆ ಅವಕಾಶವಿರುವುದಿಲ್ಲ. ಸುಸಂಸ್ಕೃತ ಮಾನವ ಕುಟುಂಬದಲ್ಲಿ ದುಡಿಮೆಗೆ ಶ್ರೇಷ್ಠ ವಿಶಿಷ್ಟ ಸ್ಥಾನವುಂಟು. ವ್ಯಕ್ತಿಗಳಿಗೆ ಸಹಾಯಕವಾಗುವ ಸಣ್ಣ ಯಂತ್ರಗಳಿಗೂ ಸ್ಥಾನವಿದೆ. ಅಂಥ ಉಪಯುಕ್ತ ಯಂತ್ರದ ಬಗ್ಗೆ ಯೋಚಿಸಲು ನನಗೆ ವ್ಯವಧಾನವಾಗಿಲ್ಲ. ಹೊಲಿಗೆಯ ಯಂತ್ರ ಅಂಥ ಒಂದು ಸಾಧನೆ ಎಂದಿದ್ದೇನೆ. ಆದರೆ ಅದೂ ನಿದರ್ಶನ ಮಾತ್ರ. ನನ್ನ ಸಮಗ್ರ ಚಿತ್ರಣಕ್ಕೆ ಈ ಕೊರತೆ ಏನೂ ಬಾಧಕವಲ್ಲ.

(ಹರಿಜನ, 28-07-1946)

ಪಂಚಾಯತ್ ರಾಜ್ಯ ಸ್ಥಾಪನೆಯಾದ ನಂತರ ಯಾವ ಹಿಂಸಾಚಾರವೂ ಸಾಧಿಸಲಾರದ್ದನ್ನು ಸಾರ್ವಜನಿಕ ಅಭಿಪ್ರಾಯ

ಸಾಧಿಸುತ್ತದೆ. ಸಾಮಾನ್ಯ ಜನತೆ ತಮ್ಮ ಸಾಂಘಿಕ ಶಕ್ತಿಯನ್ನು ಅರಿಯುವತನಕ ಈಗಿನ ಜಮೀನದಾರರ, ಬಂಡವಾಳಗಾರರ ಮತ್ತು ರಾಜರುಗಳ ಅಧಿಕಾರ ನಡೆದೀತು. ಜನ ಅವರೊಡನೆ ಅಸಹಕಾರ ಮಾಡಿದ ಕೂಡಲೇ ಬಿದ್ದುಹೋಗುತ್ತಾರೆ. ಪಂಚಾಯತ್ ರಾಜ್ಯದಲ್ಲಿ ಪಂಚಾಯತಿಯದೇ ಪರಮಾಧಿಕಾರ. ಅದು ಅಂಗೀಕೃತ ನಿಯಮಗಳ ಮೂಲಕವೇ ಕೆಲಸ ಮಾಡಬಲ್ಲದು.

ಗ್ರಾಮೀಣ ವಸ್ತುಪ್ರದರ್ಶನಗಳು

ಗ್ರಾಮಾಭಿಮುಖ ಮನೋಧರ್ಮದಿಂದ ಎಲ್ಲವನ್ನೂ ವಿವೇಚನೆ ಮಾಡಬೇಕು. ನಮ್ಮ ಹಳ್ಳಿಗಳು ಕೇವಲ ಉಸಿರು ಹಿಡಿದುಕೊಂಡು ಉಳಿಯುವುದಷ್ಟೇ ಅಲ್ಲ, ಅವು ಬಲಾಢ್ಯವೂ ಸುಸಮೃದ್ಧವೂ ಆಗಬೇಕಾದರೆ ಈ ದೃಷ್ಟಿಯೊಂದೇ ಸುಸಂಗತ. ಆದ್ದರಿಂದ ಗ್ರಾಮಗಳಲ್ಲಿನ ವಸ್ತುಪ್ರದರ್ಶನಗಳಲ್ಲಿ ನಗರಗಳ ಆಡಂಬರಕ್ಕೂ ಅದ್ದೂರಿಗಳಿಗೂ ಸ್ಥಾನವಿರುವುದಿಲ್ಲ. ಆಟಗಳು, ಮನರಂಜನೆಗಳು ಅಸಂಗತ. ಪ್ರದರ್ಶನ ಒಂದು ತಮಾಷೆಯ ಆಟವಲ್ಲ. ಲಾಭಕ್ಕಾಗಿ ಮಾಡುವ ದಂಧೆಯೂ ಅಲ್ಲ. ವ್ಯಾಪಾರಿಗಳ ಜಗಮಗಿಸುವ ಜಾಹಿರಾತುಗಳಿಗೆ ಅದು ಮಾಧ್ಯಮ ಮಾತ್ರವಾಗಬಾರದು. ಮಾರುಕಟ್ಟೆಗಳು ಬೇರೆ, ಪ್ರದರ್ಶನಗಳು ಬೇರೆ. ಖಾದಿ ಮತ್ತು ಗ್ರಾಮೋದ್ಯೋಗ ವಸ್ತುಗಳಿಗೂ ಅಷ್ಟೆ. ವಸ್ತುಪ್ರದರ್ಶನ ಪ್ರಧಾನವಾಗಿ ಒಂದು ಶಿಕ್ಷಣ ಮಾಧ್ಯಮ. ಆಕರ್ಷಣೀಯವಾಗಿರಬೇಕಾದುದು ಸರಿ. ಗ್ರಾಮಸ್ಥರು ಸ್ಫೂರ್ತಿಗೊಂಡು ಅಲ್ಲಿನ ಯಾವುದಾದರೊಂದು ಹೊಸ ಉದ್ಯಮದಲ್ಲಿ ತಾವೇ ತೊಡಗುವಂತಾಗಬೇಕು. ಈಗಿನ ಅನೇಕ ಪದ್ಧತಿಗಳಲ್ಲಿರುವ ಲೋಪದೋಷಗಳನ್ನು ಎತ್ತಿ ತೋರಿಸಿ ನಮ್ಮ ಗ್ರಾಮಜೀವನ ಸುಧಾರಿಸಲು ಅಗತ್ಯವಾದ ಮಾರ್ಗಗಳನ್ನು ತೋರಿಸಿಕೊಡಬೇಕು. ಗ್ರಾಮಾಭಿವೃದ್ಧಿಯ ಅಭಿಕ್ರಮ

ಪ್ರಾರಂಭವಾದಾಗಿನಿಂದ ಆ ದಿಸೆಯಲ್ಲಿ ಆಗಿರುವ ಸಾಧನೆಗಳನ್ನು ಮನದಟ್ಟು ಮಾಡಿಕೊಡಬೇಕು. ಹಳ್ಳಿಯ ಜೀವನ ಹೇಗೆ ಕಲಾತ್ಮಕವಾಗಿ ಪರಿವರ್ತಿತವಾಗಬೇಕು, ಆನಂದದಾಯಕವಾಗಬೇಕು ಎಂದು ಪ್ರೇಕ್ಷಕರು ಅರಿಯುವಂತಾಗಬೇಕು.

ಈ ಗುರಿಗಳನ್ನಿಟ್ಟುಕೊಂಡು ಏರ್ಪಡಿಸಲಾಗುವ ವಸ್ತು ಪ್ರದರ್ಶನಗಳು ಹೇಗಿದ್ದಾವು ಎಂದು ಸ್ವಲ್ಪ ಚಿಂತಿಸೋಣ.

1. ಹಳ್ಳಿಯ ಎರಡು ಮಾದರಿಗಳು ಅಲ್ಲಿರಬೇಕು. ಒಂದು ಈಗಿರುವಂತೆ, ಮತ್ತೊಂದು ಉತ್ತಮ ರೀತಿಯಲ್ಲಿರಬೇಕಾದಂತೆ– ಸುಧಾರಿಸಿದ ಗ್ರಾಮದಲ್ಲಿ ಎಲ್ಲವೂ ಸ್ವಚ್ಛ. ಮನೆಗಳು, ರಸ್ತೆಗಳು, ವಾತಾವರಣ ಮತ್ತು ಜಮೀನು ಎಲ್ಲವೂ ಕಳಕಳಿಸುವಂತಿರಬೇಕು. ದನಗಳು ಪುಷ್ಟಿಗೊಂಡಿರಬೇಕು. ಯಾವ ಯಾವ ಗ್ರಾಮೋದ್ಯೋಗಗಳಲ್ಲಿ ಹೇಗೆ ಉತ್ಪಾದನೆ–ವರಮಾನ ಹೆಚ್ಚಿಸಬಹುದು ಎಂದು ತಿಳಿಸುವ ಭಿತ್ತಿಚಿತ್ರಗಳು ನಕ್ಷೆಗಳು ಮತ್ತು ಪುಸ್ತಕಗಳನ್ನು ಬಳಸಿಕೊಳ್ಳಬೇಕು.
2. ಗ್ರಾಮೋದ್ಯೋಗಗಳನ್ನು ನಡೆಸುವ ಬಗೆ ಹೇಗೆ? ಅವುಗಳಿಗೆ ಬೇಕಾದ ಸರಂಜಾಮುಗಳನ್ನು ಒದಗಿಸಿಕೊಳ್ಳುವುದು ಹೇಗೆ? ಅವುಗಳನ್ನು ಮಾಡಿಕೊಳ್ಳುವುದು ಹೇಗೆ? ಎಂದು ಪ್ರದರ್ಶಿಸಬೇಕು. ಪ್ರತಿಯೊಂದು ಸಲಕರಣೆಯನ್ನೂ ಉಪಯೋಗಿಸಿ ನಡೆಸುವ ಪ್ರಾತ್ಯಕ್ಷಿಕೆಗಳಿರಬೇಕು. ಇವುಗಳಲ್ಲದೆ ಕೆಳಕಂಡ ಇತರ ವಿಷಯಗಳಿಗೂ ಸ್ಥಾನವಿರಬೇಕು.

(ಅ) ಗ್ರಾಮಸ್ಥರಿಗೆ ಬೇಕಾದ ಆದರ್ಶ ಆಹಾರ ಪದ್ಧತಿ

(ಆ) ಯಂತ್ರ ಕೈಗಾರಿಕೆ ಮತ್ತು ಗ್ರಾಮೋದ್ಯೋಗ ಇವುಗಳ ತುಲನಾತ್ಮಕ ವಿಮರ್ಶೆ.

(ಇ) ಪಶುಸಂಗೋಪನೆಯ ಒಳ್ಳೆಯ ಒಂದು ಮಾದರಿ.

(ಈ) ಕಲಾ ವಿಭಾಗ.

(ಉ) ಹಳ್ಳಿಯ ಶೌಚಾಲಯದ ಮಾದರಿ.

(ಊ) ಕೊಟ್ಟಿಗೆ ಗೊಬ್ಬರ, ರಾಸಾಯನಿಕ ಗೊಬ್ಬರ.

(ಋ) ಪ್ರಾಣಿಗಳ ಚರ್ಮ, ಮೂಳೆಗಳ ಉಪಯೋಗ.

(ಎ) ಗ್ರಾಮೀಣ ಆಟಗಳು, ಕುಸ್ತಿ ಅಖಾಡ ಮತ್ತಿತರ ವ್ಯಾಯಾಮಗಳು.

(ಏ) ನೂತನ ಶಿಕ್ಷಣಪದ್ಧತಿ 'ನಯೀ ತಾಲೀಮ್'.

(ಐ) ಹಳ್ಳಿಯ ಔಷಧ ಶಾಸ್ತ್ರ.

(ಒ) ಹಳ್ಳಿಯ ಪ್ರಸೂತಿ ಗೃಹ.

ಹೀಗೆ ಈ ಪಟ್ಟಿಯನ್ನು ಬೆಳೆಸಬಹುದು. ಆದರೆ ಮೇಲೆ ಹೇಳಿದ ಆದರ್ಶ ನಮ್ಮ ದಿಕ್ಸೂಚಿಯಾಗಿರಬೇಕು. ನಾನು ಕೆಲವನ್ನು ಉದಾಹರಿಸಿದ್ದೇನೆ ಅಷ್ಟೆ. ಇಷ್ಟೇ ಪೂರ್ಣವಾದ ಪಟ್ಟಿಯಲ್ಲ. ಚರಕ ಮತ್ತಿತರ ಗ್ರಾಮಕೈಗಾರಿಕೆಗಳ ಬಗ್ಗೆ ನಾನು ಹೇಳಿಲ್ಲ. ಅವು ಇದ್ದೇ ಇರುತ್ತವೆ ಎಂದು ನನ್ನ ಭಾವನೆ. ಅವುಗಳಿಲ್ಲದೆ ಬೇರೆಲ್ಲವೂ ವ್ಯರ್ಥ ಪ್ರಯತ್ನ.

(ಗ್ರಾಮೋದ್ಯೋಗ ಪತ್ರಿಕೆ, ಜುಲೈ 1946)

ಸಮಗ್ರವಾದ ಗ್ರಾಮಾಭಿವೃದ್ಧಿ

ನನ್ನ ಕಲ್ಪನೆಯ ಇಂಥ ಗ್ರಾಮ ಘಟಕ ಅತ್ಯಂತ ಸಮರ್ಥ ಗ್ರಾಮಕ್ಕೆ ಸರಿಗಟ್ಟುವಂಥದು. ಇದರಲ್ಲಿ ಸುಮಾರು ಸಾವಿರ ಜನಸಂಖ್ಯೆ ಇರುತ್ತದೆ. ಸ್ವಪರಿಪೂರ್ಣವಾದ ಅಂಥ ಗ್ರಾಮ ರೂಪಿತವಾದರೆ ಎಲ್ಲದರಲ್ಲೂ ಪ್ರಥಮ ದರ್ಜೆಯದಾದೀತು.

ಕಾರ್ಯಕುಶಲತೆಯಲ್ಲಿ ಹೆಚ್ಚು ಹೆಚ್ಚು ಪರಿಣತಿ ಪಡೆದ ಗ್ರಾಮ ಕೈಗಾರಿಕೆಗಳ ವಸ್ತುಗಳಿಗೆ ತಾನಾಗಿ ಮಾರುಕಟ್ಟೆಯ ಬೇಡಿಕೆ ಇರುವಂತಾಗಬೇಕು. ತನ್ನ ಪೂರ್ಣ ವಿಕಾಸ ಸಾಧಿಸಿದ ಹಳ್ಳಿಗಳಲ್ಲಿ

ಅತ್ಯಂತ ಕುಶಲರೂ ಕಲಾತ್ಮಕ ಪ್ರತಿಭೆಯುಳ್ಳವರೂ ಆದ ಕೆಲಸಗಾರರಿಗೆ ಏನೂ ಕೊರತೆ ಇರುವುದಿಲ್ಲ. ಜಾನಪದ ಕವಿಗಳು, ಕಲೆಗಾರರು, ಶಿಲ್ಪಿಗಳು, ಬಹುಭಾಷಾ ಪರಿಣತರೂ ಮತ್ತು ಸಂಶೋಧಕರೂ ಹಳ್ಳಿಯಲ್ಲೇ ಇರುತ್ತಾರೆ. ಒಳ್ಳೆಯ ಜೀವನಕ್ಕಾಗಿ ನಾವು ಬಯಸುವ ಸಮಸ್ತ ಸಾಮಾಗ್ರಿಗಳಿಗೂ ಹಳ್ಳಿಯಲ್ಲಿ ಯಾವ ಕೊರತೆಯೂ ಇರುವುದೇ ಇಲ್ಲ. ಆದರೆ ಈಗಿನ ಗ್ರಾಮಗಳು ತಿಪ್ಪೆಯ ಗುಂಡಿಗಳಾಗಿವೆ. ನಾಳೆ ಅವು ನಂದವನಗಳಾದಾವು. ಬುದ್ಧಿವಂತರೂ ಅತ್ಯಂತ ಚತುರರೂ ಅಲ್ಲಿ ವಾಸಿಸಿಯಾರು. ಅವರನ್ನಾರೂ ಶೋಷಿಸಲು ಅಥವಾ ವಂಚಿಸಲು ಸಾಧ್ಯವಾಗುವುದಿಲ್ಲ.

ಈ ದಿಸೆಯಲ್ಲಿ ಸಾಗುವ ಗ್ರಾಮಪುನರ್ರಚನೆ ಈಗಿನಿಂದಲೇ ಪ್ರಾರಂಭವಾಗಬೇಕು. ಕೇವಲ ತಾತ್ಕಾಲಿಕ ಯೋಜನೆಗಳಿಂದಲ್ಲ. ಶಾಶ್ವತ ಅಭಿವೃದ್ಧಿ ಕಾರ್ಯಗಳಿಂದ ಪುನರ್ರಚನೆಯ ವ್ಯವಸ್ಥೆಯಾಗಬೇಕು.

ಈ ಯೋಜನೆಯಲ್ಲಿ ಕೈಗಾರಿಕೆ, ಕಲೆ, ಆರೋಗ್ಯ ಮತ್ತು ಶಿಕ್ಷಣ ಒಳಗೊಂಡಿರಬೇಕು. 'ನಯೀ ತಾಲೀಮ್' ಅಥವಾ ಜೀವನ ಶಿಕ್ಷಣ ಈ ನಾಲ್ಕರ ಸುಂದರ ಮಿಶ್ರಣ ತೊಟ್ಟಿಲಿನಿಂದ ಗೋರಿಯವರೆಗೂ ನಡೆಯಬೇಕಾದ ಸಂಪೂರ್ಣ ಶಿಕ್ಷಣ ಪ್ರತಿ ವ್ಯಕ್ತಿಗೂ ಇದರಲ್ಲಿ ದೊರೆಯುತ್ತದೆ. ಆದ್ದರಿಂದ ಹಳ್ಳಿಗಳ ಅಭಿವೃದ್ಧಿ ಕ್ಷೇತ್ರಗಳನ್ನು ನಾನು ಹೋಳು ಹೋಳು ಮಾಡದೆ ಪ್ರಾರಂಭದಿಂದಲೇ ಸಮಗ್ರವಾಗಿ ಕಂಡು ಯಾವುದೇ ಕಾರ್ಯಕ್ರಮದಲ್ಲೂ ಈ ನಾಲ್ಕು ಅಂಶಗಳನ್ನೂ ಅಳವಡಿಸಿರುವಂತೆ ಮಾಡಿಯೇನು. ಕಸುಬು ಮತ್ತು ಉದ್ಯೋಗಗಳನ್ನು ಶಿಕ್ಷಣದಿಂದ ಪ್ರತ್ಯೇಕಿಸಿದರೆ ಅವುಗಳ ಮೂಲಕವೇ ಶಿಕ್ಷಣ ವ್ಯವಸ್ಥೆ ಮಾಡಲು ಪ್ರಯತ್ನಿಸುತ್ತೇನೆ. ಆದ್ದರಿಂದ ನಯೀ ತಾಲೀಮ್ ಇಂಥ ಸಮಗ್ರ ಗ್ರಾಮಾಭಿವೃದ್ಧಿಯ ಒಂದು ಮುಖ್ಯ ಅಂಗವಾಗುತ್ತದೆ.

(ಹರಿಜನ, 10-11-1946)

ಕೊಟ್ಟಿಗೆ ಗೊಬ್ಬರ

ಪಶುಗಳ ಮತ್ತು ಮನುಷ್ಯರ ಮಲಗಳನ್ನು ಊರಿನ ಕಸರಾಶಿಯೊಡನೆ ಬೆರಸಿ ಒಪ್ಪಮಾಡಿ ಸುವರ್ಣ ಗೊಬ್ಬರ ಪಡೆಯಬಹುದು. ಜಮೀನಿನ ಸಾರವೂ ಹೆಚ್ಚಿ ಇಳುವಳಿ ಹೆಚ್ಚುತ್ತಾ ಹೋಗುತ್ತಿತ್ತು. ಈ ಗೊಬ್ಬರ ಮಾಡುವುದು ಒಂದು ಗ್ರಾಮೋದ್ಯೋಗವೇ ಆಗಿತ್ತು. ಇದಕ್ಕೂ ಲಕ್ಷಾಂತರ ದೇಶಬಾಂಧವರ ಸಹಕಾರವಿಲ್ಲದೆ ಊರ್ಜಿತವಾಗಲಾರದು. ಪುನರುಜ್ಜೀವಿತ ಗ್ರಾಮಕೈಗಾರಿಕೆಗಳಿಂದ ಮಾತ್ರವೇ ಭಾರತ ಸಂಪತ್ಸಮೃದ್ಧವಾಗಬಲ್ಲದು.

(ದೆಹಲಿ ದಿನಚರಿ, 1947)

ಗ್ರಾಮದಲ್ಲಿನ ಗುಂಪುಗಾರಿಕೆ

ನಗರಗಳಲ್ಲಿದ್ದಂತೆಯೇ ಗ್ರಾಮಗಳಲ್ಲಿಯೂ ಪಕ್ಷ ಪಂಗಡಗಳ ತಿಕ್ಕಾಟ ಬೆಳೆದಿರುವುದು ಭಾರತದ ದುರ್ದೈವ. ಅಧಿಕಾರದ ರಾಜಕೀಯ ಪ್ರವೇಶಿಸಿ ಅದನ್ನು ಹಳ್ಳಿಯ ಒಟ್ಟಿನ ಮೇಲ್ಮೆಗಿಂತ ಪಕ್ಷದ ಬಲವರ್ಧನೆಗಾಗಿಯೇ ಬಳಸಿದರೆ ಗ್ರಾಮಾಭಿವೃದ್ಧಿಗೆ ಅದೊಂದು ಪಿಡುಗಾಗಿ ಪರಿಣಮಿಸುತ್ತದೆ. ಸಹಾಯವಾಗಲಾರದು. ಏನೇ ಆಗಲಿ ಸ್ಥಳೀಯ ಸಹಾಯವನ್ನೇ ನಾವು ಅವಲಂಬಿಸಬೇಕು. ಅಧಿಕಾರಲಾಲಸೆಯ ರಾಜಕಾರಣಕ್ಕೆ ಬಲಿಯಾಗದೆ ಎಲ್ಲರಲ್ಲೂ ಸಮನಾಗಿ ವ್ಯವಹರಿಸುವುದಾದರೆ ನಾವು ಎಂದೂ ತಪ್ಪು ದಾರಿಗೆ ಹೋಗಲಾರೆವು. ನಗರಗಳಲ್ಲಿರುವ ಇಂಗ್ಲಿಷ್ ಕಲಿತ ಜನ ಭಾರತದ ಅಸಂಖ್ಯಾತ ಹಳ್ಳಿಗಳನ್ನು ದಾರುಣ ಅಸಡ್ಡೆಗೆ ಗುರಿಮಾಡುವ ಪಾಪದಲ್ಲಿ ಭಾಗಿಯಾಗಿದ್ದಾರೆ. ದೇಶದ ಬೆನ್ನುಮೂಳೆಯಂತಿರುವ ಗ್ರಾಮಜೀವನವನ್ನು ಹಾಳುಮಾಡಿದ್ದಾರೆ. ಈ ಪಾಪಪ್ರಜ್ಞೆಯಿಂದಲೇ

ನಾವು ಸಹನೆಯನ್ನು ಕಲಿಯಬೇಕಾಗಿದೆ. ಯಾವುದೇ ಹಳ್ಳಿಗೆ ಹೋದರೂ ಒಬ್ಬನಾದರೂ ಪ್ರಾಮಾಣಿಕ ಕಾರ್ಯಕರ್ತ ದೊರೆತೇ ದೊರೆಯುತ್ತಾನೆ. ಗ್ರಾಮಗಳಲ್ಲಿನ ಬಾಳಿನಲ್ಲಿಯೂ ಗುಣಗ್ರಹಣ ಮಾಡುವ ವಿನಯಶೀಲತೆ ಇಲ್ಲದಿದ್ದರೆ ನಮಗೆ ಅಂತಹವರು ಕಾಣಿಸದೇ ಹೋದಾರು. ಸ್ಥಳೀಯ ರಾಜಕೀಯದಿಂದ ನಾವು ದೂರವಿರಬೇಕಾದುದು ಅಗತ್ಯ. ಎಲ್ಲ ಪಕ್ಷಗಳಿಂದಲೂ ಪಕ್ಷೇತರದಿಂದಲೂ ನಾವು ಸಹಾಯ ಸಹಕಾರಗಳನ್ನು ಪಡೆಯಲು ಸಿದ್ಧವಾಗಬೇಕು. ಒಳ್ಳೆಯದನ್ನು ಎಲ್ಲಿದ್ದರೂ ಗುರುತಿಸಿಕೊಳ್ಳಬೇಕು. ಆಗ ನಾವು ತಪ್ಪು ಮಾಡಲಾರೆವು....ಒಂದು ಮಾತನ್ನು ನಾನು ನಿಶ್ಚಿತವಾಗಿ ಮುಖ್ಯ ಕಾರ್ಯಕರ್ತನಿಗೆ ಹೇಳಬಯಸುತ್ತೇನೆ. ಹೊರಗಿನಿಂದ ಸಹಾಯ ಪಡೆಯುವುದನ್ನಾತ ಕೂಡಲೇ ತ್ಯಜಿಸಬೇಕು. ಸಮಸ್ತ ಸಹಾಯವನ್ನೂ ಸ್ಥಳೀಯವಾಗಿಯೇ ಪಡೆದುಕೊಳ್ಳಬೇಕು. ಬುದ್ಧಿವಂತಿಕೆಯಿಂದ, ಧೈರ್ಯವಾಗಿ, ಒಬ್ಬೊಂಟಿಗನಾಗಿ ಕೆಲಸ ಮಾಡುವ ಸಾಮರ್ಥ್ಯ ಬೇಕು. ಯಶಸ್ವಿಯಾಗದಿದ್ದಲ್ಲಿ ಬೇರಾರೂ ಕಾರಣರಲ್ಲ, ಬೇರಾವುದೂ ಕಾರಣವಲ್ಲ, ನಮ್ಮನ್ನು ನಾವೇ ದೂಷಿಸಿಕೊಳ್ಳಬೇಕು.

(ಹರಿಜನ, 02-03-1947)

ಸ್ವಯಂಪ್ರೇರಿತರಾಗಿ ಸಂತೋಷದಿಂದ ಸಹಕಾರ ನೀಡುವ ಭಾರತದ ಮಹಾಜನತೆಯ ಬೆಂಬಲವಿದ್ದರೆ ನಮ್ಮ ಆಹಾರದ ಕೊರತೆ ಇಲ್ಲವಾಗಿ ಇನ್ನೂ ಹೆಚ್ಚು ಉತ್ಪಾದನೆ ಸಾಧ್ಯ. ಈ ಕೊಟ್ಟಿಗೆ ಗೊಬ್ಬರ ಸತತವಾಗಿ ಭೂಸಾರವನ್ನು ಉತ್ತಮಪಡಿಸುತ್ತದೆಯೇ ಹೊರತು ಎಂದಿಗೂ ಬರಡುಮಾಡುವುದಿಲ್ಲ. ದಿನನಿತ್ಯ ವಿಸರ್ಜಿಸುವ ಕಸ ಒಳ್ಳೆಯ ಗೊಬ್ಬರವಾಗಿ ಮತ್ತೆ ಭೂಮಿಗೆ ಸೇರಿ ರೈತನಿಗೆ ಲಕ್ಷಾಂತರ ರೂಪಾಯಿಯ ಉಳಿತಾಯವಾದೀತು. ಧಾನ್ಯಗಳ, ಕಾಳುಗಳ ಉತ್ಪತ್ತಿಯೂ ಅನೇಕ ಪಟ್ಟು ಹೆಚ್ಚಾದೀತು. ಹೀಗೆ ಕಸ ಮತ್ತು

ಮಲಗಳನ್ನು ಬಳಸುವುದರಿಂದ ಗ್ರಾಮದ ನೈರ್ಮಲ್ಯದ ರಕ್ಷಣೆಯೂ ಆಗುತ್ತದೆ. ದೈವಭಕ್ತಿಯ ಸಂಗಾತಿಯೇ ಅಲ್ಲದೆ ಸ್ವಚ್ಛತೆ ಆರೋಗ್ಯವನ್ನೂ ರಕ್ಷಿಸುತ್ತದೆ. ಅದೊಂದು ಅಪೂರ್ವ ವರ.

(ಹರಿಜನ, 28-12-1947)

ಇತರ ಗ್ರಾಮ ಕೈಗಾರಿಕೆಗಳು

ಖಾದಿ ಬಿಟ್ಟು ಇತರ ಗ್ರಾಮಕೈಗಾರಿಕೆಗಳದು ಬೇರೆ ಸ್ಥಾನ. ಅವುಗಳೆಲ್ಲ ಪೂರ್ಣಕಾಲದ ವೃತ್ತಿಗಳು. ಸೇವಾಕಾರ್ಯದ ದುಡಿಮೆಗೆ ಹೆಚ್ಚು ಅವಕಾಶವಿರುವುದಿಲ್ಲ. ಸೀಮಿತವಾದ ಕೈಗಳಿಗೆ ಒಂದೊಂದು ಉದ್ಯೋಗವೂ ಕೆಲಸ ನೀಡುತ್ತದೆ. ಇವೆಲ್ಲವೂ ಖಾದಿ ಉದ್ಯಮಕ್ಕೆ ಪೋಷಕ ಕೈಗಾರಿಕೆಗಳು. ಖಾದಿ ಉದ್ಯಮ ನಡೆಯದೆ ಅವುಗಳೂ ನಡೆಯಲಾರವು. ಇತರ ಕೈಗಾರಿಕೆಗಳಿಲ್ಲದೆ ಖಾದಿಗೂ ಘನತೆ ಬರಲಾರದು. ಗ್ರಾಮದಲ್ಲಿ ಬೀಸುವುದು, ಕುಟ್ಟುವುದು, ಸಾಬೂನು ತಯಾರಿಕೆ, ಕಾಗದ ಉತ್ಪಾದನೆ, ಬೆಂಕಿಕಡ್ಡಿ ಕೈಗಾರಿಕೆ, ಚರ್ಮ ಹದ ಮಾಡುವುದು, ಎಣ್ಣೆಯ ಗಾಣ ಮುಂತಾದ ಪ್ರಮುಖ ಕೈಗಾರಿಕೆಗಳಿಲ್ಲದೆ ಅಲ್ಲಿನ ಆರ್ಥಿಕ ರಚನೆ ಸಂಪೂರ್ಣವಾಗಲಾರದು. ದೇಶಭಕ್ತ ಸ್ವಯಂಸೇವಕರು ಈ ಕೈಗಾರಿಕೆಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು. ಅವುಗಳಿಗೆ ಹೊಸ ಜೀವ ತುಂಬಿ ಹೊಸ ಮೆರುಗು ಕೊಡಲು ಆಯಾ ಹಳ್ಳಿಗಳಲ್ಲಿ ನೆಲಸಿ ಕೆಲಸ ಮಾಡುವವರು ಗಮನ ಕೊಡಬೇಕು. ಎಲ್ಲೆಲ್ಲಿ ಯಾವ ಯಾವ ವಸ್ತುಗಳು ಗ್ರಾಮ ಕೈಗಾರಿಕೆಗಳಲ್ಲಿ ಉತ್ಪಾದನೆಯಾಗುತ್ತದೆಯೋ ಅವುಗಳನ್ನು ಕೊಂಡು ಬಳಸುವುದು ನಮಗೆಲ್ಲ ಹೆಮ್ಮೆಯೆನಿಸುವಂತಾಗಬೇಕು. ದೇಶಭಕ್ತನಾದವನ ಗೌರವ ಎನಿಸಬೇಕು. ಬೇಡಿಕೆಗಳು ಸಾಕಷ್ಟಿದ್ದರೆ ಯಾವ ವಸ್ತುವನ್ನಾದರೂ ಗ್ರಾಮಗಳಿಂದ ಪಡೆಯಬಹುದೆಂಬುದರಲ್ಲಿ ಸಂಶಯವಿಲ್ಲ. ಗ್ರಾಮ ಸಂಸ್ಕೃತಿಯ ದೃಷ್ಟಿ ನಮ್ಮಲ್ಲಿ ಬೆಳೆದರೆ ವಿದೇಶೀ ಅನುಕರಣೆಯ ಅಥವಾ ಯಂತ್ರಗಳಿಂದ ತಯಾರಾದ ವಸ್ತುಗಳಿಗೆ ನಾವೆಂದೂ

ಮೋಹಗೊಳ್ಳುವುದಿಲ್ಲ. ನಮ್ಮ ರಾಷ್ಟ್ರೀಯ ಅಭಿರುಚಿ ನವೀನವಾಗುತ್ತದೆ. ಭವಿಷ್ಯ ಭಾರತದಲ್ಲಿ ದಾರಿದ್ರ್ಯ, ಹಸಿವು, ನಿರುದ್ಯೋಗಗಳು ಅಳಿಸಿಹೋಗುವಂತಹ ಹೊಸ ಭವ್ಯಕಲ್ಪನೆ ಹೆಪ್ಪುಗಟ್ಟಿ ನಿಲ್ಲುತ್ತದೆ.

(ರಚನಾತ್ಮಕ ಕಾರ್ಯಕ್ರಮ, 1948)

ಲೋಕ ಸೇವಕ ಸಂಘ

[ತಮ್ಮ ನಿಧನದ ಹಿಂದಿನ ದಿನ ತಾ॥ 29-1-1948ರಂದು ಗಾಂಧೀಜಿ 'ಲೋಕ ಸೇವಕ ಸಂಘ'ಕ್ಕಾಗಿ ಒಂದು ಕರುಡು ಸಂವಿಧಾನವನ್ನು ಸಿದ್ಧಮಾಡಿದ್ದರು. ಭಾರತದ ರಾಷ್ಟ್ರೀಯ ಕಾಂಗ್ರೆಸ್ಸನ್ನು ವಿಸರ್ಜಿಸಿ ಈ ಸೇವಕರ ಸಂಘದೊಳಗೆ ವಿಲೀನಗೊಳಿಸಲು ಅವರು ಉದ್ದೇಶಿಸಿದ್ದರು. ಈ ಸಂಘದ ಸದಸ್ಯರಾಗುವವರಿಗೆ ಇರಬೇಕಾದ ಅರ್ಹತೆಗಳನ್ನು ಗಾಂಧೀಜಿ ಹೀಗೆ ನಮೂದಿಸಿದ್ದರು.]

1. ತಾನೇ ಚರಕದಲ್ಲಿ ತೆಗೆದ ದಾರದಿಂದ ನೆಯ್ದ ಖಾದಿ ಅಥವ ಅಖಿಲ ಭಾರತ ಚರಕ ಸಂಘದವರಿಂದ ಪ್ರಾಮಾಣಿತವಾದ ಖಾದಿಯನ್ನು ಸರ್ವದಾ ಧರಿಸುವವರಾಗಿರಬೇಕು. ಯಾವ ಮಾದಕ ಪಾನೀಯಗಳನ್ನೂ ಸೇವಿಸಬಾರದು. ಹಿಂದೂ ಆದರೆ ಅಸ್ಪೃಶ್ಯತೆಯ ಯಾವುದೇ ರೀತಿಯ ಆಚರಣೆಯನ್ನು ತಾನೂ ತನ್ನ ಕುಟುಂಬದವರೂ ವರ್ಜಿಸಿರಬೇಕು. ಜಾತೀಯ ಐಕ್ಯತೆಯ ಆದರ್ಶದಲ್ಲಿ ನಂಬಿಕೆಯಿರಬೇಕು. ಸರ್ವಧರ್ಮಗಳಲ್ಲಿ ಸಮಾನ ಗೌರವ ಹೊಂದಿರಬೇಕು. ಸರ್ವರಿಗೂ ಸಮನಾದ ಜೀವನಾವಕಾಶಗಳು ಮತ್ತು ಗೌರವ ಸ್ಥಾನಗಳು ಜನಾಂಗ, ಜಾತಿ ಮತ್ತು ಲಿಂಗಬೇಧಗಳಿಲ್ಲದೆ ದೊರೆಯಬೇಕೆಂಬ ವಿಶ್ವಾಸವುಳ್ಳವರಾಗಿರಬೇಕು.
2. ತನ್ನ ಕ್ಷೇತ್ರದ ಪ್ರತಿಯೊಬ್ಬ ಗ್ರಾಮನಿವಾಸಿಯನ್ನೂ ಆತ್ಮೀಯವಾಗಿ ಬಲ್ಲವನಾಗಿರಬೇಕು.

3. ಗ್ರಾಮಸ್ಥರೊಳಗೆ ಆರಿಸಿಕೊಂಡ ಕಾರ್ಯಕರ್ತರನ್ನು ನೋಂದಾಯಿಸಿ ಅವರಿಗೆ ಶಿಕ್ಷಣ ಕೊಟ್ಟು ಅಂಥವರೆಲ್ಲರ ಹೆಸರಿನ ದಾಖಲೆ ಪುಸ್ತಕ ಇಟ್ಟಿರಬೇಕು.

4. ದಿನದಿನದ ಕಾರ್ಯಗಳ ವರದಿಗಳನ್ನು ದಾಖಲೆ ಇಡಬೇಕು.

5. ಹಳ್ಳಿಗಳು ಸ್ವಯಂಪೂರ್ಣವಾಗುವಂತೆಯೂ, ವ್ಯವಸಾಯ ಮತ್ತು ಗ್ರಾಮಕೈಗಾರಿಕೆಗಳಿಂದ ಸ್ವಾವಲಂಬಿಗಳಾಗುವಂತೆಯೂ ಸಂಘಟನೆ ಕೈಗೊಳ್ಳಬೇಕು.

6. ಸ್ವಚ್ಛತೆ ಮತ್ತು ಶರೀರನೈರ್ಮಲ್ಯಗಳು ಶಿಕ್ಷಣ ಕೊಟ್ಟು ಗ್ರಾಮವಾಸಿಗಳ ಅನಾರೋಗ್ಯ ತಡೆಗಟ್ಟಿ ಅವರು ರೋಗಗಳಿಗೆ ತುತ್ತಾಗದಂತೆ ನೋಡಿಕೊಳ್ಳಬೇಕು.

7. ಹುಟ್ಟಿನಿಂದ ಸಾವಿನವರೆಗೂ ಆಯಾ ಘಟ್ಟದಲ್ಲಿ ಸಿಗಬೇಕಾದ ಶಿಕ್ಷಣದ ವ್ಯವಸ್ಥೆ ಮಾಡಬೇಕು. ಹಿಂದೂಸ್ತಾನಿ ತಾಲಿಮಿ ಸಂಘದ ನಿಯಮಗಳಂತೆ ನಯಿ ತಾಲಿಮ್ ಅಥವಾ ನೂತನ ಜೀವನ ಶಿಕ್ಷಣದಂತೆ ವಿದ್ಯಾಭ್ಯಾಸದ ರಚನೆಯನ್ನು ಸಂಘಟಿಸಬೇಕು.

(ಹರಿಜನ, 15–02–1948)

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1883
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ ಬೊಂಬಾಯಿ, ರಾಜ್‌ಕೋಟೆಯಲ್ಲಿ ವಕೀಲಿ ವೃತ್ತಿ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899 ಮತ್ತು 1906
ಭಾರತಕ್ಕೆ ವಾಪಸ್ಸು	1901
ಭಾರತದಲ್ಲಿ ವ್ಯಾಪಕವಾದ ಪ್ರವಾಸ, ಕಲ್ಕತ್ತದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ಪಾಲ್ಗೊಂಡಿದ್ದು, ಬೊಂಬಾಯಿಲ್ಲಿ ಲಾಯರ್ ಆಫೀಸ್ ಪ್ರಾರಂಭ	1901
ಭಾರತೀಯರ ಕೋರಿಕೆಯಂತೆ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ	1902
ಟ್ರಾನ್ಸ್‌ವಾಲ್ ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್	1903
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1904
ಫೀನಿಕ್ಸ್ ಆಶ್ರಮ ಸ್ಥಾಪನೆ	1904

ಸೆಪ್ಟಂಬರ್ ವೀರಾಗಾಂನಲ್ಲಿ ಸಮುದ್ರ ಪ್ರಯಾಣಿಕರ ಶೋಷಣೆಯ ವಿರುದ್ಧ ಸತ್ಯಾಗ್ರಹ ಮಾಡುವ ಬೆದರಿಕೆ	1905
ಟ್ರಾನ್ಸ್‌ವಾಲ್‌ನ ಭಾರತೀಯ ವಲಸೆಗಾರರ ಮೇಲೆ ಪ್ರಯೋಗಿಸಲಾಗುವ "ಏಸಿಯಾಟಿಕ್ ಆರ್ಡಿನೆನ್ಸ್ ವಿರುದ್ಧ ಚಳುವಳಿ	1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906
ಜೂನ್, ಸತ್ಯಾಗ್ರಹ ಏಷಿಯನ್ನರ ಬಲತ್ಕಾರದ ನೋಂದಾವಣೆ (ಕರಾಳ ಕಾನೂನು) ವಿರುದ್ಧ ಸತ್ಯಾಗ್ರಹ	1907
ಸತ್ಯಾಗ್ರಹ ನಡೆಸಿದ್ದಕ್ಕೆ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ಪ್ರಥಮ ಜೈಲುವಾಸ	1908
ಇಂಗ್ಲೆಂಡಿಗೆ ಪ್ರಯಾಣ, ಭಾರತೀಯ ವಲಸೆಗಾರರ ಪರವಾದಗಳು, ಸ್ತ್ರೀ ಸ್ವಾತಂತ್ರ್ಯ ಹೋರಾಟ ಪರಿಶೀಲನೆ	1909
ಮೇ ಜೋಹಾನ್ಸ್‌ಬರ್ಗ್‌ನಲ್ಲಿ ಟಾಲ್‌ಸ್ಟಾಯ್ ಫಾರ್ಮ್ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಆಗಮನ	1914
ಮೇ ಅಹಮದಾಬಾದ್ ಬಳಿ ಸತ್ಯಾಗ್ರಹ ಆಶ್ರಮ ಸ್ಥಾಪನೆ	1915
ಸಬರಮತಿ ಆಶ್ರಮ ಸ್ಥಾಪನೆ	1917
ಫೆಬ್ರವರಿ ಅಹಮದಾಬಾದ್ ಮಿಲ್ ಕೂಲಿಗಾರರ ಪರ ಹೋರಾಟ, ಮೂರು ದಿನ ಉಪವಾಸ ಸತ್ಯಾಗ್ರಹ, ಭರತದಲ್ಲಿ ಇದೇ ಮೊದಲ ಉಪವಾಸ ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918

ಜಲಿಯನ್ ವಾಲಾಬಾಗ್ ಹತ್ಯಾಕಾಂಡ	
ವಿರೋಧಿಸಿ ಏಪ್ರಿಲ್ 13-14ರಂದು ಉಪವಾಸ	1919
ಯಂಗ್ ಇಂಡಿಯಾ ಮತ್ತು	
ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಚಳುವಳಿ, ಖಿಲಾಫತ್ ಚಳುವಳಿ	
ಅಖಿಲ ಭಾರತ ಹೋಂರೂಲ್ ಲೀಗ್ ಅಧ್ಯಕ್ಷತೆ	1920
ಖಾದಿಯ ಪಂಚೆ ಉಡುವ ನಿರ್ಧಾರ ಮತ್ತು	
ಖಾದಿ ಪ್ರಚಾರ ಆರಂಭ	1921
ಚೌರಿಚೌರಾ ಹತ್ಯಾಕಾಂಡ, ಅಸಹಕಾರ ಸತ್ಯಾಗ್ರಹ	
ನಿಲುಗಡೆ, ಬಾರ್ದೋಲಿಯಲ್ಲಿ ಐದು ದಿನದ	
ಉಪವಾಸ, ಯಂಗ್ ಇಂಡಿಯಾ	
ಲೇಖನಗಳಿಗಾಗಿ ರಾಜದ್ರೋಹದ ಆಪಾದನೆ	
ಮೇಲೆ ದಸ್ತಗಿರಿ ಭಾರತದಲ್ಲಿ ಪ್ರಥಮ ಜೈಲುವಾಸ	1922
ಫೆಬ್ರವರಿ ಯರವಾಡಾ ಜೈಲಿನಿಂದ ಬಿಡುಗಡೆ	1924
ಹಿಂದೂ ಮುಸ್ಲಿಂ ಏಕತೆಗಾಗಿ 21 ದಿನ ಉಪವಾಸ	1924
ಬೆಳಗಾವಿ ಕಾಂಗ್ರೆಸ್ ಅಧಿವೇಶನ	1924
ಚರಖಾ ಸಂಘದ ಸ್ಥಾಪನೆ	1925
ಬಾರ್ದೋಲಿ ಸತ್ಯಾಗ್ರಹ ಅನ್ಯಾಯದ ತೆರಿಗೆ ವಿರುದ್ಧ	1928
ಮೂರನೇ ಅಖಿಲ ಭಾರತ ಸತ್ಯಾಗ್ರಹ	
ಜನವರಿ 26 ರಾಷ್ಟ್ರದಿನವೆಂದು ಸೂಚನೆ	
ಉಪ್ಪಿನ ಸತ್ಯಾಗ್ರಹ ಮತ್ತು ದಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು	
ದುಂಡು ಮೇಜಿನ ಪರಿಷತ್ತು ವಿಫಲ	1931

ಹರಿಜನರಿಗೆ ಪ್ರತ್ಯೇಕ ಚುನಾವಣೆಗಳನ್ನು ಏರ್ಪಡಿಸುವ ಬ್ರಿಟಿಷ್ ಯೋಜನೆಗಳನ್ನು ವಿರೋಧಿಸಿ ಉಪವಾಸ ಸತ್ಯಾಗ್ರಹ	
ಹರಿಜನ ವಾರ ಪತ್ರಿಕೆ ಆರಂಭ	
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ, ಮೂರು ಸಲ ಗಾಂಧೀಜಿಯ ಕೊಲೆಯ ಪ್ರಯತ್ನಗಳು	
ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಆರಂಭ	1934
ವಾರ್ಧಾ ಸಮೀಪ ಸೇವಾಗ್ರಾಮ ಆಶ್ರಮ ಆರಂಭ	1936
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
21 ದಿನಗಳ ಉಪವಾಸ ಸತ್ಯಾಗ್ರಹ ಆರಂಭ	1943
ಫೆ. 22 ಕಸ್ತೂರಬಾ ಮರಣ, 23ರಂದು ಆಗಾಖಾನ್ ಅರಮನೆ ಆವರಣದಲ್ಲಿ ದಹನ	1944
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	
ಕ್ಯಾಬಿನೆಟ್ ಮಿಷನ್, ಶಿಮ್ಲಾ ಸಮ್ಮೇಳನ	1945
ಕ್ಯಾಬಿನೆಟ್ ಅಂಗೀಕಾರ, ನೌಖಾಲಿ ಶಾಂತಿ ಪಾದಯಾತ್ರೆ	1946
ಭಾರತಕ್ಕೆ ಸ್ವಾತಂತ್ರ್ಯ ಮತ್ತು ದೇಶ ವಿಭಜನೆ	1947
ದೆಹಲಿಯಲ್ಲಿ ಕೋಮುವಾರು ಸೌಹಾರ್ದಕ್ಕಾಗಿ ಕೊನೆಯ ಉಪವಾಸ	1948
ಹಂತಕನ ಗುಂಡೇಟಿಗೆ ಹುತಾತ್ಮರು	30-1-1948
ರಾಜ್‌ಘಾಟದಲ್ಲಿ ದಹನ	31-1-1948

ಕಸ್ತೂರ್‌ಬಾ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	11. 04. 1869
ಗಾಂಧಿ ಅವರೊಡನೆ ವಿವಾಹ	1888
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1896
ಗಾಂಧಿ ಅವರ ಮೇಲೆ ಆಕ್ರಮಣ ಖಂಡನೆ	1897
ಜೋಹನ್ಸ್‌ಬರ್ಗ್‌ನಲ್ಲಿ ಪ್ಲೇಗ್ ಪೀಡಿತರ ಸೇವೆ	1904
ಜೋಹನ್ಸ್‌ಬರ್ಗ್‌ನಲ್ಲಿ ಭಾರತೀಯ ಮಹಿಳೆಯರಿಗೆ ಸಂದೇಶ	1909
ಗುಜರಾತಿನ ಕೊಚರ್ಬಾದಲ್ಲಿ ಆಶ್ರಮ ಸ್ಥಾಪನೆ	25. 05. 1915
ಗಾಂಧೀಜಿ ಅವರೊಡನೆ ಭಾರತದಾದ್ಯಂತ ಪ್ರವಾಸ	1916
ಗಾಂಧೀಜಿ ಅವರೊಡನೆ ಚಂಪಾರಣ್ಯ ಚಳುವಳಿಯಲ್ಲಿ ಭಾಗಿ	1917
ಸಾಬರಮತಿ ಆಶ್ರಮದ ನಿರ್ವಹಣೆಯ ಜವಾಬ್ದಾರೆ	1920
ಗಾಂಧೀಜಿ ಅವರೊಡನೆ ವಿದೇಶಿ ವಸ್ತ್ರಗಳ ನಾಶ	1921
ವಿದೇಶಿ ವಸ್ತ್ರ ಬಹಿಷ್ಕಾರ ಮತ್ತು ನೂಲು ನೇಯಲು ಕರೆ	23. 03. 1922
ಅಸಹಕಾರ ಚಳುವಳಿಯಲ್ಲಿ ಭಾಗಿ	1930
ಭಾರತೀಯ ಮಹಿಳೆಯರಿಂದ ಕಸ್ತೂರ್‌ಬಾಗೆ ಹಣ ನೀಡಿಕೆ	1931
ಅಸಹಕಾರ ಚಳುವಳಿಗಾಗಿ 6 ವಾರಗಳ ಸೆರೆಮನೆ ವಾಸ	1932
ಬ್ರಿಟಿಷರಿಂದ ಬಂಧನ ಮತ್ತೆ ಸೆರೆವಾಸ	1933
ಸಾಬರಮತಿ ಆಶ್ರಮ ಮುತ್ತಿಗೆ	1933

ಗಾಂಧಿಯವರೊಡನೆ ಪೂನಾದ ಮುನಿಸಿಪಲ್ ಹಾಲ್‌ಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ನಾಡಬಾಂಬ್ ಎಸೆತ	1934
ಸೇವಾಗ್ರಾಮ ಆಶ್ರಮ ಸ್ಥಾಪನೆ	1936
ರಾಜ್‌ಕೋಟ್‌ನಲ್ಲಿ ಠಾಕೂರ ದಬ್ಬಾಳಿಕೆ ವಿರುದ್ಧ ಮಹಿಳಾ ಹೋರಾಟಗಾರರಿಗೆ ನೆರವು	1939
ಬಂಧನ, ಕತ್ತಲ ಜೈಲಿನಲ್ಲಿ ಸೆರೆಮನೆವಾಸ	03. 02. 1939
ಕಸ್ತೂರ್‌ಬಾ ಕುರಿತು ಹರಿಜನ ಪತ್ರಿಕೆಯಲ್ಲಿ ಗಾಂಧೀಜಿ ಅವರ ಲೇಖನ ಪ್ರಕಟ	06. 02. 1939
ಕಾಂಗ್ರೇಸ್ ಅಧಿವೇಶನಕ್ಕೆ ಗಾಂಧೀಜಿ ಅವರೊಡನೆ ಮುಂಬೈಗೆ ಪಯಣ	1942
ಶಿವಾಜಿ ಪಾರ್ಕ್‌ನಲ್ಲಿ ಬೃಹತ್ ಸಾರ್ವಜನಿಕ ಸಮಾವೇಶದಲ್ಲಿ ಮಾಡಿದ ಭಾಷಣಕ್ಕೆ ಬಂಧನ	09. 08. 1942
ಸೆರೆಮನೆಯಲ್ಲಿ 2 ಬಾರಿ ಹೃದಯಾಘಾತ	1944
ಸೆರೆಮನೆಯಲ್ಲಿ ತಮ್ಮ 74ನೇ ವಯಸ್ಸಿನಲ್ಲಿ ನಿಧನ	22.02.1944

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	40–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	22–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	63–00
24.	ಸ್ವಾತಂತ್ರ್ಯ	42–00
25.	ಅಸ್ಪೃಶ್ಯತೆ	45–00
26.	ಒಳ್ಳೆಯ ಜೀವನ	60–00
27.	ಗಾಂಧೀ ಮತ್ತು ಕರ್ನಾಟಕ	200–00
28.	ಸತ್ಯ	38–00
29.	ವಿದ್ಯಾರ್ಥಿಗಳಿಗಾಗಿ	30–00

30.	ಸರ್ವೋದಯ	30–00
31.	ಖಾದಿ ಗ್ರಾಮೋದ್ಯೋಗ	58–00
32.	ನನ್ನ ಬಾಲ್ಯದ ನೆನಪುಗಳು	52–00
33.	ಗ್ರಾಮರಾಜ್ಯ ಆಡಳಿತ	5–00
34.	ನನ್ನ ಕನಸಿನ ಸ್ವರಾಜ್ಯ	42–00
35.	ಹಾಸ್ಯ ಮತ್ತು ಗಾಂಧೀ	44–00
36.	ನನ್ನ ಆದರ್ಶಗ್ರಾಮ	5–00
37.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ದತಿ	48–00
38.	ಸತ್ಯಾಗ್ರಹಿ	40–00
39.	ಗ್ರಾಮದಾನ ಗ್ರಾಮ ಸ್ವರಾಜ್ಯ	25–00
40.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
41.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5–00
42.	ಸತ್ಯಾಗ್ರಹ	5–00
43.	ಹಿಂದ್ ಸ್ವರಾಜ್	5–00
44.	ಆರೋಗ್ಯ	5–00
45.	ಮಹಾತ್ಮ ಗಾಂಧಿ ಪ್ರಸ್ತುತತೆ	10–00
46.	ಬಹುರೂಪಿ ಗಾಂಧಿ	35–00
47.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30–00
48.	ಕೃತಯುಗಿ ವಿನೋಬಾ ಭಾವೆ	15–00
49.	ಮೋಹನ ತರಂಗ	40–00
50.	ನಮ್ಮ ಗಾಂಧಿ ತಾತ	22–00
51.	ಗೀತಾ ಪ್ರವಚನ	80–00
52.	ಜೆ.ಪಿ. ಜೀವನ ಹಾದಿ	45–00
53.	ಗಣ್ಯರು ಕಂಡಂತೆ ಗಾಂಧಿ	20.0
54.	ಗೀತಾಮಾತೆ	80.00
55.	ಲೋಕ ಚಿಂತಕರು	145.00
56.	ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00
57.	ಮಹದೇವ ದೇಸಾಯಿ	63.00

58.	ಸಮಾಜವಾದ : ಗಾಂಧೀ ದೃಷ್ಟಿಕೋನ	15.00
59.	ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ	28.00
60.	ಗಾಂಧೀ ಬಳಗದ ವಿದೇಶಿಯರು	89.00
61.	ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ	33.00
62.	ಮಹಾತ್ಮ ಗಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ	80.00
63.	ಹುಕ್ಕೇರಿಕರ ರಾಮರಾಯರು	110.00
64.	ಮಹಿಳೆಯರು	63.00
65.	ನನ್ನ ಬಾಲ್ಯದ ನೆನಪುಗಳು	52.00
66.	ನಯೀ ತಾಲೀಂ	58.00
67.	ಚರಕ ಸಂಹಿತೆ	68.00
68.	ಸ್ವಚ್ಛ ಭಾರತಿ	82.00
69.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	66.00
70.	ಗಾಂಧಿಯೊಳಗಿನ ಪತ್ರಕರ್ತ ಮರು ವೀಕ್ಷಣೆ	68.00
71.	ಅಂದಿಗೂ-ಇಂದಿಗೂ ಪ್ರಸ್ತುತ ಗಾಂಧೀಜಿ	94.00
72.	ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ	92.00
73.	ಆಧ್ಯಾತ್ಮಿಕ ಸುಸ್ಥಿರತೆ	72.00
74.	Nayi Talim	58.00
75.	Temple & Mosque	10–00
76.	Rastrapita Mahatma Gandhi	25–00
77.	Swarajya of My Dreams	5–00
78.	Gandhi My Grand Father	5–00
79.	Grand Pa Gandhi	5–00
80.	Relevance of Gandhi	20–00
81.	Vinoba Sage of the Age	20.00
82.	Kasturba	33.00
83.	Mahatma Gandhi and his Foreign Associates	87.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08-05-1915
● ಬೆಳಗಾವಿ	ದಿ. 27-04-1916 ರಿಂದ ದಿ. 01-05-1916 ರವರೆಗೆ
● ಬಿಜಾಪುರ (ವಿಜಯಪುರ)	ದಿ. 05-05-1918 ರಿಂದ ದಿ. 06-05-1918 ರವರೆಗೆ
● ಕಾಸರಗೋಡು	ದಿ. 19-08-1920
● ಮಂಗಳೂರು	ದಿ. 20-08-1920
● ಬೆಂಗಳೂರು	ದಿ. 21-08-1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08-11-1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09-11-1920
● ಧಾರವಾಡ	ದಿ. 10-11-1920
● ಹುಬ್ಬಳ್ಳಿ, ಗದಗ	ದಿ. 11-11-1920
● ಸಾಂಗಲಿ	ದಿ. 12-11-1920
● ಬಾಗಲಕೋಟೆ	ದಿ. 27-05-1921
● ಬಿಜಾಪುರ (ವಿಜಯಪುರ), ಸೊಲ್ಲಾಪುರ	ದಿ. 28-05-1921
● ಬಳ್ಳಾರಿ	ದಿ. 30-09-1921
● ಬೆಳಗಾವಿ	ದಿ. 21-12-1924 ರಿಂದ ದಿ. 30-12-1924 ರವರೆಗೆ
● ಗುಲ್ಬರ್ಗಾ	ದಿ. 22-02-1927 ರಿಂದ ದಿ. 23-02-1927 ರವರೆಗೆ
● ನಿಪ್ಪಾಣಿ	ದಿ. 27-03-1927 ರಿಂದ ದಿ. 31-03-1927 ರವರೆಗೆ

● ಬೆಳಗಾವಿ	ದಿ. 01-04-1927
	ದಿ. 18-04-1027 ರಿಂದ
	ದಿ. 19-04-1927ರವರೆಗೆ
● ಬೆಂಗಳೂರು	ದಿ. 06-06-1927 ರಿಂದ
	ದಿ. 13-07-1927 ರವರೆಗೆ
● ತುಮಕೂರು	ದಿ. 14-07-1927
● ತುಮಕೂರು, ಮಧುಗಿರಿ	ದಿ. 15-07-1927
● ತುಮಕೂರು	ದಿ. 16-07-1927
● ಬೆಂಗಳೂರು	ದಿ. 17-07-1927
● ಬೆಂಗಳೂರು	ದಿ. 18-07-1927
● ಮೈಸೂರು	ದಿ.19-07-1927 ರಿಂದ
	ದಿ. 21-07-1927 ರವರೆಗೆ
● ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್	ದಿ. 21-07-1927
● ಮೈಸೂರು	ದಿ. 23-07-1927
● ಬೆಂಗಳೂರು	ದಿ. 24-07-1927 ರಿಂದ
	ದಿ. 30-07-1927 ರವರೆಗೆ
● ಕ್ಲೊಸ್‌ಪೇಟೆ (ರಾಮನಗರ) ಕಾನಕಾನಹಳ್ಳಿ (ಕನಕಪುರ)	ದಿ. 31-07-1927
● ಬೆಂಗಳೂರು	ದಿ. 01-08-1927
● ಅರಸೀಕರೆ, ಹಾಸನ	ದಿ. 02-08-1927
● ಹಾಸನ	ದಿ. 03-08-1927
● ಹಾಸನ, ಹೊಳೆನರಸೀಪುರ	ದಿ. 04-08-1927
● ಬೆಂಗಳೂರು	ದಿ. 05-08-1927 ರಿಂದ
	ದಿ. 11-08-1927 ರವರೆಗೆ
● ದಾವಣಗೆರೆ	ದಿ. 12-08-1927

• ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927
• ಶಿವಮೊಗ್ಗ	ದಿ. 14-08-1927 ರಿಂದ ದಿ. 15-08-1927 ರವರೆಗೆ
• ಆಯ್ಯನೂರು, ಕುಂಸಿ, ಸಾಗರ ಶಿವಮೊಗ್ಗ	ದಿ. 16-08-1927
• ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
• ಭದ್ರಾವತಿ, ತರೀಕೆರೆ ಬೀರೂರು, ಕಡೂರು	ದಿ. 18-08-1927
• ಚಿಕ್ಕಮಗಳೂರು	ದಿ. 19-08-1927
• ಬೇಲೂರು, ಹಳೇಬೀಡು ಅರಸೀಕೆರೆ	ದಿ. 20-08-1927
• ತಿಪಟೂರು	ದಿ. 21-08-1927
• ಬೆಂಗಳೂರು	ದಿ. 22-08-1927
• ಬೆಂಗಳೂರು	ದಿ. 23-08-1927
• ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24-08-1927
• ಬೆಂಗಳೂರು	ದಿ. 25-08-1927 ರಿಂದ ದಿ. 30-08-1927 ರವರೆಗೆ
• ಹಿಂದೂಪುರ, ವಿಧುರಾಶ್ವತ್ಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04-01-1934
• ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05-01-1934

● ಮಂಡ್ಯ, ಚನ್ನಪಟ್ಟಣ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06-01-1934
● ಬೆಂಗಳೂರು	ದಿ. 07-01-1934 ರಿಂದ ದಿ. 09-01-1934 ರವರೆಗೆ
● ಪೊನ್ನಂಪೇಟೆ, ಹುದಿಕೇರಿ	ದಿ. 22-02-1934
● ವಿರಾಜಪೇಟೆ, ಬೆಳ್ಳೂರು ಸೋಮವಾರ ಪೇಟೆ, ಗುಂಡುಕಟ್ಟೆ	ದಿ. 23-02-1934
● ಮಡಿಕೇರಿ, ಸಂಪಾಜೆ, ಸುಳ್ಯ ಪುತ್ತೂರು, ಉಪ್ಪಿನಂಗಡಿ ವಿಠಲಗಬ್ಬ, ಕಲ್ಲಡ್ಕ, ಪಾಣೆ ಮಂಗಳೂರು, ಬಂಟ್ವಾಳ, ಮಂಗಳೂರು	ದಿ. 24-02-1934
● ಮಂಗಳೂರು, ಗುರುಪುರ, ಬಜ್ಪೆ ಯಕ್ಕೂರು, ಕಟೀಲು, ಕಿನ್ನಗೋಳಿ ಮೂಲ್ಕಿ, ಪಡುಬಿದ್ರಿ, ಕಟಪಾಡಿ ಗುರುಪುರ, ಉದ್ಯಾವರ ಉಡುಪಿ, ಬ್ರಹ್ಮಾವರ, ಸಿದ್ದಾಪುರ	ದಿ. 25-02-1934
● ಕುಂದಾಪುರ	ದಿ. 26-02-1934
● ಕುಂದಾಪುರ, ಭಟ್ಕಳ ಹೊನ್ನಾವರ, ಕಾರವಾರ	ದಿ. 27-02-1934
● ಕಾರವಾರ, ಕುಮುಟಾ, ಅಂಕೋಲ ಚಂದಿಯಾ, ಶಿರಸಿ	ದಿ. 28-02-1934
● ಶಿರಸಿ, ಸಿದ್ದಾಪುರ, ದಾಸನಕೊಪ್ಪ ಇಸಲೂರು, ಏಕಾಂಬಿ, ಆಲೂರು ಬ್ಯಾಡಗಿ, ಮೋಟೆಬೆನ್ನೂರು	ದಿ. 01-03-1934
● ಹಾವೇರಿ, ರಾಣೆಬೆನ್ನೂರು, ಹರಿಹರ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ ಸೊಂಡೂರು	ದಿ. 02-03-1934

- ಸೊಂಡೂರು, ಬಳ್ಳಾರಿ, ಹೊಸಪೇಟೆ ದಿ. 03-03-1934
  ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ
- ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ದಿ. 04-03-1934
  ಹಿರೇಉಳ್ಳಗೇರಿ, ಬೈಲಹೊಂಗಲ
  ಉಪ್ಪಿನ, ಬೆಟಗೇರಿ, ಸೌಂದತ್ತಿ
  ಸಂಪಗಾಂವ್, ಹೊಸೂರು, ಬೆಳಗಾವಿ
- ಬೆಳಗಾವಿ ದಿ. 05-03-1934
- ಬೆಳಗಾವಿ ದಿ. 06-03-1934
- ಬೆಳಗಾವಿ, ಯಮಕನಮರಡಿ, ವಂಟಮರಿ ದಿ. 07-03-1934
  ಹುಕ್ಕೇರಿ, ಗೋಕಾಕ, ಸಂಕೇಶ್ವರ
  ನವಲೀಹಾಳ, ಚಿಕ್ಕೋಡಿ, ಅಂಕಲಿ
- ಶೆಡಬಾಳ, ಬನಹಟ್ಟಿ, ಅಥಣಿ ದಿ. 08-03-1934
  ಬಿಜಾಪುರ (ವಿಜಯಪುರ),
  ತಿಕೋಟ, ತೊರವಿ ಇಳಕಲ್
- ನಂದಿ ಬೆಟ್ಟ 10-05-1936 ರಿಂದ
  30-05-1936 ರವರೆಗೆ
- ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, 31-05-1936
  ಚಿಂತಾಮಣಿ, ಕೋಲಾರ,
  ಬಂಗಾರ ಪೇಟೆ, ಕೆ.ಜಿ.ಎಫ್
- ಬೆಂಗಳೂರು 01-06-1936 ರಿಂದ
  12-06-1936 ರವರೆಗೆ
- ಬೆಳಗಾವಿ ಜಿಲ್ಲೆಯ ಹುದಲಿ 16-04-1937 ರಿಂದ
  21-04-1937ರವರೆಗೆ

ಗಾಂಧಿ ಅವರ ನೀತಿ ಮಾರ್ಗ ಸೂಚಿ

ಏಕಾದಶ ವ್ರತಗಳು

ಸತ್ಯ	Truth
ಅಹಿಂಸೆ	Ahimsa or Love
ಅಸ್ತೇಯ (ಕದಿಯದಿರುವುದು)	Non-Stealing
ಬ್ರಹ್ಮಚರ್ಯ	Brahmacharya or Chastity
ಅಸಂಗ್ರಹ (ಅಪರಿಗ್ರಹ)	Non-Possession
ಶರೀರ ಶ್ರಮ	Physical Labour
ಅಸ್ವಾದ (ನಾಲಿಗೆ ಚಪಲ)	Control on the Palate
ಸರ್ವತ್ರ ಭಯವರ್ಜನ (ಅಭಯ)	Fearlessness
ಸರ್ವಧರ್ಮ ಸಮಾನತ್ವ	Equality of Religion
ಸ್ವದೇಶಿ	Swadeshi
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	Removal of Untouchability

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	Politics without Principles
ದುಡಿಮೆ ಇಲ್ಲದ ಸಂಪತ್ತು	Wealth without Work
ಆತ್ಮಸಾಕ್ಷಿ ಇಲ್ಲದ ಸಂತೋಷ	Pleasure without Conscience
ಚಾರಿತ್ರ್ಯವಿಲ್ಲದ ಶಿಕ್ಷಣ	Education without Character
ನೀತಿ ಇಲ್ಲದ ವ್ಯಾಪಾರ	Commerce without Morality
ಮಾನವೀಯತೆ ಇಲ್ಲದ ವಿಜ್ಞಾನ	Science without Humanity
ತ್ಯಾಗ ಇಲ್ಲದ ಪೂಜೆ	Worship without Sacrifice

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗಗಳು	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿಗಳು	**Students**

ದೇಶದಲ್ಲಿ ಪ್ರಜಾರಾಜ್ಯ ಬೇರೂರಿ ನಮ್ಮ ಗ್ರಾಮೀಣ ಜನಕೋಟಿ ಅದರಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಪೂರ್ಣ ಸ್ವರಾಜ್ಯ ಸಾಧಿಸಲು ಗಾಂಧೀಜಿ ಹಾಕಿಕೊಟ್ಟ ರಚನಾತ್ಮಕ ಕ್ರಾಂತಿಪಥವೇ 'ಪಂಚಾಯತ್ ರಾಜ್ಯ'. ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ರಾಷ್ಟ್ರವನ್ನು ಮಾನವೀಯ ಮೌಲ್ಯಗಳ ತಳಹದಿಯ ಮೇಲೆ ಪುನರ್‌ರಚಿಸಲು ಸ್ವಸಂಪೂರ್ಣ ಸ್ವಾವಲಂಬೀ ಗ್ರಾಮ ಸಮುದಾಯಗಳ ರಚನೆಯೊಂದೇ ರಾಜಮಾರ್ಗ.

ಕೆ. ಎಸ್. ನಾರಾಯಣಸ್ವಾಮಿ

ಗ್ರಾಮೀಣಾಭಿವೃದ್ಧಿ ಮುಖಾಂತರ ಹಳ್ಳಿಗಳ ಪುನರುಜ್ಜೀವನದ ಕಡೆಗೆ ಸರ್ಕಾರ ಸಾಗಬೇಕೆಂಬುದೇ ಮಹಾತ್ಮಾಜೀ ಅವರ ಆಶಯವಾಗಿತ್ತು. ಅವರ ಈ ಆಶಯದ "ಪಂಚಾಯತ್ ರಾಜ್ಯ" ವ್ಯವಸ್ಥೆಯನ್ನು ಅವರೇ ಪ್ರಕಟಿಸುತ್ತಿದ್ದ, ಪತ್ರಿಕೆಯಾದ 'ಹರಿಜನ', 'ಯಂಗ್ ಇಂಡಿಯಾ' ಹಾಗೂ 'ಗ್ರಾಮೋದ್ಯೋಗ ಪತ್ರಿಕೆ ಮತ್ತು ದೆಹಲಿ ದಿನಚರಿಗಳ ಮುಖಾಂತರ ಸಾರ್ವಜನಿಕರ ಚರ್ಚೆಗೆ ಮತ್ತು ಗಮನಕ್ಕೆ ಪ್ರಕಟಿಸಿದರು.

ನಾಡೋಜ ಡಾ. ವೂಡೇ ಪಿ. ಕೃಷ್ಣ

ಪಂಚಾಯ್ ರಾಜ್ ವ್ಯವಸ್ಥೆ ಜಾರಿಗೆ ಬಂದಿದೆ. ಇಂಥಹ ಪಂಚಾಯತ್ ರಾಜ್ಯ ವ್ಯವಸ್ಥೆಯ ಪರಿಕಲ್ಪನೆಯನ್ನು ಸ್ವಾತಂತ್ರ್ಯ ಪೂರ್ವದಲ್ಲಿಯೇ ಮಹಾತ್ಮಾಜೀ ಅವರು ಆಶಿಸಿ, ಅದರ ಕುರಿತಾಗಿ ತಮ್ಮ ಪತ್ರಿಕೆಯಲ್ಲಿಯೇ ಲೇಖನಗಳನ್ನು ಪ್ರಕಟಿಸಿದ್ದರು. ಆದ್ದರಿಂದಲೇ ಸ್ವತಂತ್ರ ಭಾರತದಲ್ಲಿ ಗ್ರಾಮ ಗಣರಾಜ್ಯ ಅಸ್ತಿತ್ವವೇ ಸ್ವರಾಜ್ಯಕ್ಕೆ ಭದ್ರ ಬುನಾದಿ ಎಂದು ಗಾಂಧಿ ಅವರು ತಿಳಿದಿದ್ದರು. ಗಾಂಧಿ ಅವರ ಗ್ರಾಮರಾಜ್ಯದ ಕನಸನ್ನು ಕರ್ನಾಟಕದಲ್ಲಿ ಪ್ರಥಮವಾಗಿ ಪ್ರಾಮಾಣಿಕವಾಗಿ ಜಾರಿಗೆ ತರಲಾಗಿದ್ದು, ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಷಯವಾಗಿದೆ.

ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು